ಹೊಸ ಮನುಷ್ಯ

ಮಹಿಳಾ ಸಂಚಿಕೆ-೨೦೨೨

ಸಮಾಜವಾದಿ ಮಾಸಿಕ

ಮಾರ್ಚ್, ೨೦೨೨ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೧ ಸಂಚಿಕೆ: ೦೨ ಬೆಲೆ: ರೂ.೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭೨೦೪

ದೂ: ೦೮೧೮೨-೨೯೫೩೧೨ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಜಗತ್ತಿನ ಪ್ರಮುಖ ರಾಜಕೀಯ ವ್ಯಾಖ್ಯಾನಕಾರರು ಇತ್ತೀಚಿನ ವರ್ಷಗಳಲ್ಲಿ ಭಾರತದ ಪ್ರಜಾಪ್ರಭುತ್ವವನ್ನು ಚುನಾವಣಾ ಪ್ರಜಾಪ್ರಭುತ್ವ((Electorol democracy) ಎಂದು ಗುರುತಿಸತೊಡಗಿದ್ದಾರೆ. ಇದನ್ನು ಹಿಂದೊಮ್ಮೆ ಸಂಪಾದಕೀಯ ಟಿಪ್ಪಣಿಗಳಲ್ಲಿ ಪ್ರಸ್ತಾಪಿಸಿದ್ದ ನೆನಪು. ಚುನಾವಣೆಯೇ, ಚುನಾವಣೆಯನ್ನು ಗೆಲ್ಲುವುದೊಂದೇ, ರಾಜಕೀಯ ವ್ಯವಸ್ಥೆಯೊಂದರ ಸಾರ್ಥಕತೆಯನ್ನು ನಿರ್ಧರಿಸುವಂತಾಗುವ ವ್ಯವಸ್ಥೆಯೇ ಚುನಾವಣಾ ಪ್ರಜಾಪ್ರಭುತ್ವ. ಅಲ್ಲಿ ಪ್ರಜೆ, ಆತನ/ಆಕೆಯ ಆಶೋತ್ತರಗಳು ಆ ರಾಜಕೀಯ ವ್ಯವಸ್ಥೆಯ ಕೇಂದ್ರವಾಗಿರದೆ ಚುನಾವಣೆಗಳು ಯಶಸ್ವಿಯಾಗಿ ನಡೆಯುವುದೇ ಅದರ ಮುಖ್ಯ ಲಕ್ಷಣವಾಗಿರುತ್ತದೆ. ಅಂಥ ಕಡೆ ಚುನಾವಣಾ ಯಂತ್ರವನ್ನು ಸದಾ ಸರ್ವಸನ್ನದ್ಧಗೊಳಿಸಿಕೊಂಡಿರುವುದೇ ರಾಜಕೀಯ ಪಕ್ಷಗಳ ಮುಖ್ಯ ಕಾಳಜಿಯಾಗಿರುತ್ತದೆ.


ಇಂಥೆಡೆ ಜನರನ್ನು ಬಳಕೆಯ ವಸ್ತುಗಳನ್ನಾಗಿ 'ಮತಬ್ಯಾಂಕ್'ಗಳನ್ನಾಗಿ ಪರಿವರ್ತಿಸುವ ಉದ್ಯಮವೇ ರಾಷ್ಟ್ರೀಯ ಉದ್ಯಮವಾಗಿರುತ್ತದೆ. ಪ್ರಸ್ತುತ ಆಡಳಿತ ಪಕ್ಷವಾದ ಬಿಜೆಪಿ ತನ್ನ ವಿಸ್ತೃತ ಪರಿವಾರ ಜಾಲದ ಮೂಲಕ ಈ ಉದ್ಯಮವನ್ನು ಕರಗತ ಮಾಡಿಕೊಂಡಿದೆ. ತನ್ನ ಚುನಾವಣಾ ಯಂತ್ರದ ಎಲ್ಲ ಕೀಲುಗಳಿಗೆ, ಆಯಕಟ್ಟಿನ ಜಾಗಗಳಿಗೆ ಎಣ್ಣೆ ಹಾಕಿಕೊಂಡು ಅದನ್ನು ಸಿದ್ಧಗೊಳಿಸಿಟ್ಟುಕೊಂಡಿರುವುದೇ ಅದರ ರಾಜಕಾರಣದ ಪ್ರಮುಖ ಕಾಳಜಿಯಾಗಿದೆ. ನಮ್ಮ ಪ್ರಧಾನ ಮಂತ್ರಿಯವರು ಸಕ್ರಿಯವಾಗಿ ಭಾಗವಹಿಸಿದ್ದ ಉತ್ತರ ಪ್ರದೇಶದಲ್ಲಿನ ಬೃಹತ್ ವಿಮಾನ ನಿಲ್ದಾಣದ ಭರ್ಜರಿ ಉದ್ಘಾಟನೆ, ಕಾಶಿ ದೇವಾಲಯದ ಪುನರುಜ್ಜೀವಿತ ಭವ್ಯ ಓಣಿಯ ರಾಜ ಉದ್ಘಾಟನೆ, ಸಂತ ರವಿದಾಸ ಜಯಂತಿ ಆಚರಣೆಯಲ್ಲಿ ಸಾರ್ವಜನಿಕ ಭಕ್ತಿ ಪ್ರದರ್ಶನ ಪ್ರಯೋಗ ಇವೆಲ್ಲ ಈಗ ನಡೆಯುತ್ತಿರುವ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳು ಮತ್ತು ಎರಡು ವರ್ಷಗಳ ನಂತರದ ಬಹು ನಿರ್ಣಾಯಕವಾದ ಲೋಕಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟು 'ಸೂಕ್ತ' ರೀತಿಯಲ್ಲಿ ಆಯೋಜಿಸಲಾಗಿರುವ ಕಾರ್ಯಾಚರಣೆಯೇ ಆಗಿದೆ. ಆದರೆ ಸದ್ಯದ ಮಾಧ್ಯಮ ಮುನ್ನೋಟವನ್ನು ಗಮನಿಸಿದರೆ, ಸದ್ಯ ಚುನಾವಣೆಗಳು ನಡೆದಿರುವ ಐದೂ ರಾಜ್ಯಗಳಲ್ಲಿ ಅಥವಾ ಕನಿಷ್ಟ ನಾಲ್ಕರಲ್ಲಿ ಫಲಿತಾಂಶಗಳ ಮಟ್ಟಿಗಾದರೂ ಬಿಜೆಪಿ ಸೋಲುವ ಸಾಧ್ಯತೆಗಳೇ ಹೆಚ್ಚು. ಫಲಿತಾಂಶಗಳ ಮಟ್ಟಿಗೆ ಎಂದು ಏಕೆ ಹೇಳಬೇಕಾಗಿದೆ ಎಂದರೆ, ಈ ಫಲಿತಾಂಶಗಳನ್ನು (ಗೋವಾ, ಮಣಿಪುರ, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿ ಮಾಡಿರುವಂತೆ) ತಲೆಕೆಳಗು ಮಾಡುವ 'ಆಪರೇಷನ್ ಕಮಲ' ಎಂಬ ಐನಾತಿ ರಾಜಕೀಯ ತಂತ್ರವನ್ನೂ ಈ ಪಕ್ಷ ಅನ್ವೇಷಿಸಿಕೊಂಡಿದೆಯಲ್ಲ?

ಈ ಸೋಲಿನ ಸುಂಟರಗಾಳಿ ೨೦೨೪ರ ಹೊತ್ತಿಗೆ ಬಿರುಗಾಳಿಯಾಗಿ ಪರಿವರ್ತನೆಯಾದಲ್ಲಿ ಬಿಜೆಪಿಯ ದೀರ್ಘಕಾಲಿಕ ಕಾರ್ಯಕ್ರಮವನ್ನೇ ತಲೆಕೆಳಗು ಮಾಡುವ ಆತಂಕ ಸೃಷ್ಟಿಸಿರುವುದರಿಂದ ಈ ಪಕ್ಷ ತನ್ನ ನಡಿಗೆಯ ಗತಿಯನ್ನೇ ಬದಲಿಸಿಕೊಂಡಂತಿದೆ. ದ.ಭಾರತದಲ್ಲಿ ತನ್ನ ಕೋಟೆ ಕಟ್ಟಿಕೊಳ್ಳಲು ತಾವು ನೀಡಿರುವ ಕರ್ನಾಟಕದ ವಿಧಾನಸಭೆಗೂ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ಬಿಜೆಪಿ ರಾಷ್ಟ ಮತ್ತು ರಾಜ್ಯ ಮಟ್ಟಗಳೆರಡರಲ್ಲೂ 'ಮಾಡು ಇಲ್ಲವೇ ಮಡಿ' ಆವೇಗದ ಕಾರ್ಯಕ್ರಮಗಳಿಗೆ ಕೈಹಾಕತೊಡಗಿದೆ : ಒಂದು ಕಡೆ ಸಂತರ ವೇಷ ತೊಟ್ಟವರಿಂದ ಅನ್ಯ ಮತೀಯರ ಹತ್ಯೆಗಾಗಿ ಕರೆಕೊಟ್ಟು ವಾತಾವರಣದ ಹದ ನೋಡುವುದು; ಇನ್ನೊಂದು ಕಡೆ ಈಶ್ವರಪ್ಪನವರಂತಹ ಬಾಯಿಬಡುಕರಿಂದ ಕೆಂಪುಕೋಟೆಯ ಮೇಲೆ ಕೇಸರಿ ಧ್ವಜ ಹಾರಿಸುವ ಮಾತನಾಡಿಸುವ ಮತೀಯ ಧೃವೀಕರಣದ ರಾಜಕಾರಣದಲ್ಲಿ ತೊಡಗಿದೆ. ಇನ್ನು ಪ್ರಧಾನಮಂತ್ರಿ ಮೋದಿಯವರು ಈ ಸೋಲಿನ ಸಂಭಾವ್ಯತೆಯ ದುಃಸ್ವಪ್ನ ಕಂಡವರಂತೆ ತಮ್ಮನ್ನು ಸೋಲಿಸಬಲ್ಲವರೆಂದು ಕಂಡವರನ್ನೆಲ್ಲ 'ತುಕಡೆ ತುಕಡೆ ಗ್ಯಾಂಗ್' ಎಂದೋ 'ಅರ್ಬನ್ ನಕ್ಸಲ್' ಎಂದೋ ಕರೆಯುತ್ತಾ ರಾಷ್ಟ್ರ ರಾಜಕೀಯ ಚರ್ಚೆಯ ಎಲ್ಲ ಗಾಂಭೀರ್ಯವನ್ನೂ ಕಳೆಯುತ್ತಿದ್ದಾರೆ.

ಬಜೆಟ್ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಮಾಡಿದ ಭಾಷಣ ಮೊದಲ ಬಾರಿಗೆ ಮೋದಿಯವರನ್ನು ಧೃತಿಗೆಡಿಸಿದಂತಿದೆ. ವಿಶೇಷವಾಗಿ ಮೋದಿಯವರ ಆಡಳಿತಾವಧಿಯಲ್ಲಿ ದೇಶ ಹೆಚ್ಚೆಚ್ಚು ತನ್ನ ಒಕ್ಕೂಟ ಸ್ವರೂಪವನ್ನು ಕಳೆದುಕೊಂಡು ಪ್ರಾದೇಶಿಕ ಭಾಷೆ, ಸಂಸ್ಕೃತಿ ಮತ್ತು ಸಾಂವಿಧಾನಿಕ ಆಡಳಿತ ಸಂಹಿತೆಗಳಿಗೆ ಅಪಾಯ ಒದಗಿರುವುದು, ವಿದೇಶಾಂಗ ನೀತಿಯ ತಪ್ಪು ನಿರ್ಧಾರಗಳಿಂದಾಗಿ ನೆರೆಹೊರೆಯ ದೇಶಗಳ ವಿಶ್ವಾಸವನ್ನೂ ಕಳೆದುಕೊಂಡು ಜಾಗತಿಕ ಅಧಿಕಾರ ಸಮೀಕರಣಗಳ ಮಧ್ಯೆ ಭಾರತ ಇಕ್ಕಟ್ಟಿಗೆ ಸಿಕ್ಕಿರುವುದು ಮತ್ತು ಅಪಾಯಕಾರಿ ಮಟ್ಟಕ್ಕೆ ಹೆಚ್ಚುತ್ತಿರುವ ನಿರುದ್ಯೋಗ ಸೂಚಿಸುವ ಮತ್ತು ದೇಶದ ಶೇ. ನಲವತ್ತರಷ್ಟು ಜನರ ಸಂಪತ್ತು ಕೇವಲ ನಾಲ್ಕೇ ಶತಕೋಟ್ಯಾಧಿಪತಿಗಳ ಕೈವಶವಾಗುವಂತೆ ಜಾರಿಯಲ್ಲಿರುವ ಚೇಲಾ ಬಂಡವಾಳಶಾಹಿ ಆರ್ಥಿಕ ನೀತಿಯ ಬಗ್ಗೆ ಆಡಿರುವ ಮಾತುಗಳು. ಇವಾವಕ್ಕೂ ಸಮರ್ಪಕ ಉತ್ತರ ನೀಡಲಾಗದ ಮೋದಿಯವರು ನೆಹರೂ ಕಾಲದ ರಾಜಕಾರಣವನ್ನೆತ್ತಿಕೊಂಡು ವಂಶಾಡಳಿತವನ್ನು ಟೀಕಿಸುವ ಹಳೆಯ ರಾಗದ ಮೊರೆಹೋಗಿದ್ದಾರೆ. ಜೊತೆಗೆ ರಾಷ್ಟ್ರೀಯ ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಎಜಿಬಿ ನೌಕಾನಿರ್ಮಾಣ ಕಂಪನಿಯ ಸಾವಿರಾರು ಕೋಟಿ ರೂಪಾಯಿಗಳ ಮೌಲ್ಯದ ಹಗರಣಗಳು ಸೂಚಿಸುವ ಸರ್ಕಾರದ ಹಣಕಾಸು ಆಡಳಿತ ಮತ್ತು ನಿರ್ವಹಣೆಯ ಬೃಹತ್ ವೈಫಲ್ಯ ಅವರ ಅಭಿವೃದ್ಧಿ ಮಾದರಿಯ ಅಡಿಪಾಯವನ್ನೇ ಘಾಸಿಗೊಳಿಸಿರುವ ಸವಾಲು ಬೇರೆ.

ರಾಷ್ಟ್ರಮಟ್ಟದ ಈ ರಾಜಕಾರಣಕ್ಕೆ ನಮ್ಮ ರಾಜ್ಯ ರಾಜಕಾರಣ ಪ್ರತಿಸ್ಪಂದಿಸುತ್ತಿರುವ ರೀತಿ ನೋಡಿ. ಈಶ್ವರಪ್ಪನವರ ಕೇಸರಿ ಧ್ವಜ ಹಾರಿಸುವ ಹೇಳಿಕೆಯನ್ನು, ಹಾಗೆ ಆ ಧ್ವಜ ಹಾರದಂತೆ ನೋಡಿಕೊಳ್ಳುವ ಜನಮಧ್ಯದ ರಾಜಕಾರಣ ಮಾಡಬೇಕಾದ ಕಾಂಗ್ರೆಸ್ ಈಶ್ವರಪ್ಪನವರ ವಿರುದ್ಧ ಸದನದಲ್ಲಿ ದಿನಗಟ್ಟಲೆ ಧರಣಿ ಕೂತು ಜನ ಈಗಾಗಲೇ ತಾವು ಗಣನೀಯವಾಗಿ ಬೆಂಬಲಿಸಿರುವ ಕೇಸರಿ ಧ್ವಜದ ಸುತ್ತ ಹೆಚ್ಚು ಯೋಚಿಸುವಂತೆ ಮಾಡಿತಷ್ಟೆ! ಆದರೆ ಇದೇನೂ ೨೦೧೧ರ ಕುಖ್ಯಾತ ಕೆಪಿಎಸ್‌ಸಿ 'ಅಕ್ರಮ' ನೇಮಕಾತಿಗಳನ್ನು 'ಸಕ್ರಮ'ಗೊಳಿಸಲು ಆಡಳಿತ ಪಕ್ಷದ ಜೊತೆ ಕೈಜೋಡಿಸಲು ಅಡ್ಡಿಯಾಗಲಿಲ್ಲ! ರಾಜ್ಯ ಕಾಂಗ್ರೆಸ್ 'ಮೇಕೆದಾಟು ಚಲೋ' ಸೇರಿದಂತೆ ತಾನು ಇಡುತ್ತಿರುವ ಪ್ರತಿ ಹೆಜ್ಜೆಯಲ್ಲೂ ತೋರುತ್ತಿರುವ ಬೌದ್ಧಿಕ ದಿವಾಳಿಕೋರತನ ಗಾಬರಿ ಹುಟ್ಟಿಸುವಂತಿದೆ. ಇನ್ನು ಈಶ್ವರಪ್ಪನವರ ಕೇಸರಿ ಧ್ವಜ ಹೇಳಿಕೆಯ ಹಿಂದಿನ ರಾಜಕಾರಣದ ಮುಂದಿನ ಭಾಗದಂತೆ ತೋರುವ ಹಿಜಾಬ್ ವಿವಾದದ ಸಂದರ್ಭದಲ್ಲಿ ನಮ್ಮ ಜಡ ಬುದ್ಧಿಜೀವಿಗಳಂತೆಯೇ ಜಡ 'ಪ್ರಗತಿಪರತೆ'ಗೆ ಬಲಿಬಿದ್ದು ವಿವಾದವನ್ನು 'ಹಿಂದೂ-ಮುಸ್ಲಿಂ ಸಮೀಕರಣ'ದ ಬಲೆಯಿಂದ ಮುಕ್ತಗೊಳಿಸಿ ನಿಜವಾದ ಸೆಕ್ಯುಲರ್ ಪರಿಹಾರ ಸೂಚಿಸುವ ದಿಟ್ಟತನ ತೋರಿ ಹಿಂದೂ ಕೋಮುವಾದಿಗಳ ಯೋಜನೆಯನ್ನು ನಿಷ್ಕ್ರಿಯಗೊಳಿಸುವುದರ ಬದಲಾಗಿ ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣದ ಹಿತರಕ್ಷಣೆಯ ಸೋಗಿನಲ್ಲಿ ಮುಸ್ಲಿಂ ಮೂಲಭೂತವಾದಿಗಳಿಗೆ ಕುಮ್ಮಕ್ಕು ದೊರಕುವಂತೆ ವರ್ತಿಸಿದ ರೀತಿ ಪಕ್ಷವನ್ನು ಮುಂದೆ ರಾಜಕೀಯವಾಗಿ ಕಾಡದೇ ಇರದು.

******



ಮಾರ್ಚ್ ೨೩ ಲೋಹಿಯಾರ ಜನ್ಮದಿನ. .'ಹೊಸ ಮನುಷ್ಯ' ಮೂಲತಃ ಲೋಹಿಯಾ ಅವರ ಸಮಾಜವಾದಿ ತಾತ್ವಿಕತೆಯ ಸ್ಫೂರ್ತಿಯಲ್ಲೇ ಆರಂಭವಾಗಿ ಈ ಹತ್ತು ವರ್ಷಗಳ ಕಾಲ ಅದರ ಬೆಳಕಿನಲ್ಲೇ ನಡೆದು ಬಂದಿದೆ. ಈ ಮೇಲಿನ ಎಲ್ಲ ವಿಶ್ಲೇಷಣೆಯೂ ಅವರ ವಿಶಿಷ್ಠ ಮತ್ತು ನಿಷ್ಠುರ ರಾಜಕಾರಣ ಮತ್ತು ತತ್ವಚಿಂತನೆಗೆ-ವಿಶೇಷವಾಗಿ 'ಜನಪ್ರಿಯ ಸೆಕ್ಯುಲರ್' ನೀತಿಗೆ ಸಂಬಂಧಿಸಿದಂತೆ-ಅನುಗುಣವಾಗಿಯೇ ಇದೆಯೆಂದು ನಾನು ಭಾವಿಸುತ್ತೇನೆ. ನ್ಯಾ. ಸುದರ್ಶನ ರೆಡ್ಡಿಯವರು ತಮ್ಮದೊಂದು ಲೋಹಿಯಾ ಸ್ಮಾರಕ ಉಪನ್ಯಾಸದಲ್ಲಿ ಹೇಳಿದ, 'ಯಂತ್ರಪ್ರಧಾನ ಸಮಾಜವು ಮನುಷ್ಯನನ್ನು ಏಕರೂಪಿ(monotonic) ಮನಸ್ಸಿನ ಮಾದರಿಯಿಂದ ಪಾರು ಮಾಡುವುದೇ ಸಮಾಜವಾದದ ಪ್ರಮುಖ ಗುರಿಗಳಲ್ಲೊಂದಾಗಿರಬೇಕು' ಎಂಬ

(೧೦ನೇ ಪುಟಕ್ಕೆ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ' ವಿಶೇಷ ಸಂಚಿಕೆ ತಲುಪಿದೆ. ಅದರ ವೈಶಿಷ್ಟ್ಯ ಕುರಿತು ನಾನು ಹೆಚ್ಚೇನು ಹೇಳಲಿ? ಯಾವತ್ತೂ ಅದು ನನಗೆ ಪ್ರಿಯವಾದ ಓದು.

ಮುಂದಿನ ಸಂಚಿಕೆಯೊಂದಿಗೆ ಅದರ ಪ್ರಕಟಣೆ ಮುಕ್ತಾಯವಾಗುತ್ತದೆ ಎನ್ನುವುದು ಏನೋ ಶೂನ್ಯದ ಭಾವನೆ ತರುತ್ತದೆ. ಆದರೆ ಅನಿವಾರ್ಯ. ನಿಮ್ಮ ಆರೋಗ್ಯದ ಕಾರಣಕ್ಕಾಗಿ ನಾವು ನಿಮ್ಮ ನಿರ್ಧಾರವನ್ನು ಸ್ವೀಕರಿಸಲೇಬೇಕು. ನಿಮ್ಮ ಆರೋಗ್ಯ ನಮಗೆಲ್ಲರಿಗೂ ಮುಖ್ಯವಾದದ್ದು. ಕಳೆದ ಹಲವು ವರ್ಷಗಳಿಂದ 'ಹೊಸ ಮನುಷ್ಯ' ನನಗೆ ಆತ್ಮೀಯ ಓದನ್ನು ಒದಗಿಸಿ ಕೊಟ್ಟಿದೆ. ಅಲ್ಲಿನ ಬರೆಹಗಳು, ಪ್ರಮುಖವಾಗಿ ಸಂಪಾದಕರ ಟಿಪ್ಪಣಿಗಳು ನನ್ನ ಆಲೋಚನೆಗಳಿಗೆ ಸಾಕಷ್ಟು ಸಾಮಾಗ್ರಿಗಳನ್ನು ಒದಗಿಸಿಕೊಡುತ್ತಿದ್ದವು. ಅದರಿಂದ ಈಗ ವಂಚಿತನಾಗುತ್ತಿದ್ದೇನೆ. ಅಡ್ಡಿಯಿಲ್ಲ, ನಿಮ್ಮ ಬರವಣಿಗೆ ಮುಂದುವರಿದು, ಇನ್ಯಾವುದೋ ಮೂಲಕ ನಮಗೆ ದೊರೆಯುತ್ತದೆ ಎನ್ನುವ ನಂಬಿಕೆ ನನಗಿದೆ.

ಕನ್ನಡ ಪತ್ರಿಕೋದ್ಯಮ ಇತಿಹಾಸದಲ್ಲಿ 'ಹೊಸ ಮನುಷ್ಯ' ಒಂದು ಒಳ್ಳೆಯ ಮಾದರಿಯಾಗಿ ದಾಖಲಾಗುತ್ತದೆ ಎಂದು ನಾನಾದರೋ ಭಾವಿಸುತ್ತೇನೆ. ದಯವಿಟ್ಟು ನಿಮ್ಮ ಆರೋಗ್ಯ ಕಾಯ್ದುಕೊಳ್ಳಿ. ಶುಭ ಹಾರೈಕೆಗಳು.

–ಹೆಚ್ ಎಸ್ ಈಶ್ವರ, ಬೆಂಗಳೂರು

ಫೆಬ್ರುವರಿ ವಾರ್ಷಿಕ ವಿಶೇಷಾಂಕದ ಪಿಡಿಎಫ್ ತಲುಪಿ ತಕ್ಷಣ ಡೌನ್‌ಲೋಡ್ ಮಾಡಿಕೊಂಡು ಓದಿದೆ. ಈ ಸಂಚಿಕೆಯ ನಿಮ್ಮ ಸಂಪಾದಕೀಯ ಲೇಖನವನ್ನು ಓದಿದೆ. ಸಂಪಾದಕೀಯ ಲೇಖನಗಳು ನನಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದಿದೆ. ನನ್ನಲ್ಲಿನ ಅರಿವುಗಳನ್ನು ಕಂಡುಕೊಂಡಿದ್ದಲ್ಲದೇ, ಮಾನಸಿಕವಾಗಿ ನನ್ನನ್ನು ಹಿಗ್ಗಿಸಿ ನನ್ನ ಆಲೋಚನೆಗಳನ್ನು ಇನ್ನೂ ಚೂಪುಗೊಳ್ಳುವಂತೆ ನೋಡಿಕೊಂಡಿದೆ. ಆದ್ದರಿಂದ 'ಹೊಸ ಮನುಷ್ಯ' ಪತ್ರಿಕೆಯೆಂದರೆ ನನಗೆ ಬಹು ವಿಶೇಷ. ನನ್ನ ಜೀವನದ ಅವಿಭಾಜ್ಯ ಅಂಗವೆಂದರೂ ತಪ್ಪಾಗಲಾರದು. ಇರಲಿ. ಆದರೆ ಕೊನೆಯಲ್ಲಿ ನಿಮ್ಮ ಆರೋಗ್ಯದ ಮತ್ತು ವಯೋಸಹಜ ಕಾಯಿಲೆಗಳಿಂದಾಗಿ ಈಗ ಪತ್ರಿಕೆಯನ್ನು ನಿಲ್ಲಿಸುತ್ತಿದ್ದೀರಿ ಅನ್ನುವುದನ್ನು ಕೇಳಿ ಬಹಳ ಬೇಸರವಾಯಿತು. ಪ್ರತಿಯೊಂದಕ್ಕೂ ಒಂದು ಕೊನೆ ಇರುತ್ತದೆ ಅನ್ನುವುದನ್ನು ತಿಳಿದಿದ್ದೇನೆ. ಆದರೆ ಪತ್ರಿಕೆಯ ಪ್ರಕಟಣೆ ಆಗುವುದಷ್ಟೇ ನಿಲ್ಲಬಹುದು, ಆದರೆ ಕಳೆದ ೧೦ ರಿಂದ ೧೨ ವರ್ಷಗಳು ಕನ್ನಡ ಓದುಗರನ್ನು ಜೀವಂತವಾಗಿ ಇರಿಸಿಕೊಂಡು ತನ್ನ ಲೇಖನಗಳ ಮೂಲಕ ಒಂದು ಪರ್ಯಾಯ ರೀತಿಯ ಆಲೋಚನೆಗಳಲ್ಲಿ ತೊಡಗಿಸಿತ್ತು ಎನ್ನುವುದನ್ನು ಈ ನಾಡು ಮರೆಯದು. ಹಿಂದಿನ, ಪ್ರಸ್ತುತ ವರ್ಷಗಳ ಅನೇಕ ಸಾಮಾಜಿಕ ಚಿಂತನೆಗಳನ್ನು ಇಲ್ಲಿ ಚಿಂತಿಸಿದ್ದಲ್ಲದೇ; ಮುಂದೆ ಪತ್ರಿಕೆಯ ಪ್ರಕಟಣೆ ನಿಂತಾಗಲೂ ಮುಂಬರುವ ಅನೇಕ ವರ್ಷಗಳಿಗೆ ಇದೇ ವಿಚಾರಗಳು ಅನೇಕ ರೀತಿಯಲ್ಲಿ ಸಹಕಾರಿಯಾಗಲಿದೆ ಎನ್ನುವುದಂತೂ ಸತ್ಯ. ಕಾರಣ ನಮ್ಮ ಸಮಾಜವೇ ಅಂತದ್ದು. ಹಾಗಾಗಿ ಪತ್ರಿಕೆಯೂ ಇಂದಿಗೂ, ಎಂದಿಗೂ ಜೀವಂತವಾಗಿಯೇ ಉಳಿಯಲಿದೆ.

–ನಾಗಭೂಷಣ ಪಟೇಲ್, ಟುನ್‌ಬರ್ಗ್, ಜರ್ಮನಿ

ನಿಮಗೆ ಏನೆಂದು ಕೃತಜ್ಞತೆ ಹೇಳುವುದು? ಏನು ಹೇಳಿದರೂ ಕಡಿಮೆಯೇ ಕಳೆದು ಹತ್ತು ವರ್ಷಗಳಿಂದ, ಸಮಕಾಲೀನ ಜಗತ್ತಿಗೆ ನಮ್ಮನ್ನು ಮುಖಾಮುಖಿಗೊಳಿಸಿ ತಮ್ಮ ಪ್ರಖರ ಬರಹಗಳಿಂದ, ಸಮಾಜವಾದಿ ಬದ್ಧತೆಯಿಂದ, ನಮ್ಮನ್ನು ಮಾನವೀಯಗೊಳಿಸಿದ, ತಾಳ್ಮೆ ಅನುಕಂಪದ ಬದುಕಿಗೆ, ದೇಸೀ ಚಿಂತನೆಗಳಿಗೆ ನಮ್ಮನ್ನು ಅನುವುಗೊಳಿಸಿದ ನಾಗಭೂಷಣ್‌ರವರಿಗೆ ಅನಂತ ವಂದನೆಗಳು.

–ಅಪೂರ್ವ ಡಿ'ಸಿಲ್ವ, ಮೈಸೂರು

'ಹೊಸ ಮನುಷ್ಯ' ವಿಶೇಷಾಂಕ ಸಿಕ್ಕಿದೆ. ಇಷ್ಟಪಟ್ಟು ಕೆಲವು ಬರೆಹಗಳನ್ನು ಓದಿದೆ. ಎಂದಿನಂತೆ ಈ ಸಂಚಿಕೆಯನ್ನು ಸದಾ ನೆನಪಿಟ್ಟುಕೊಳ್ಳುವಂತೆ ಸಂಯೋಜಿಸಿದ್ದು ಸಂತೋಷದ ಸಂಗತಿ. ಆದರೆ ಈ ಸಂತೋಷದೊಂದಿಗೇ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸುವ ನಿಮ್ಮ ನಿರ್ಧಾರ ತುಂಬಾ ಬೇಸರವನ್ನುಂಟುಮಾಡಿತು. ಗಂಭೀರವಾಗಿ ಯೋಚಿಸಿ ಬರೆಯುವ ಅವಕಾಶವಿರುವ ಪತ್ರಿಕೆಗಳು ಒಂದೊಂದಾಗಿ ನಿಂತು ಹೋಗುತ್ತಿರುವುದು ನಿಜಕ್ಕೂ ಬೇಸರದ ಸಂಗತಿ. ಒಂದು ಕಾಲದಲ್ಲಿ ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಬರೆಹಗಳನ್ನು ಪ್ರಕಟಿಸುತ್ತಿರುವ, ಸಂವಾದಕ್ಕೆ ವೇದಿಕೆಯನ್ನೊದಗಿಸುತ್ತಿರುವ ಎಷ್ಟೊಂದು ಪತ್ರಿಕೆಗಳಿದ್ದವು! ನೆನೆಸಿದರೆ ಎಂಥ ಕಾಲವೊಂದು ಕಳೆದು ಹೋಯಿತು ಎನ್ನುವ ವಿಷಾದ ಆವರಿಸಿಕೊಳ್ಳುತ್ತದೆ. ನಿಮ್ಮ ಆರೋಗ್ಯ ಸುಧಾರಿಸಲಿ. ಸಾಧ್ಯವಾದರೆ ಪತ್ರಿಕೆಯ ಪ್ರಕಟಣೆಯನ್ನು ಮುಂದುವರಿಸಿ ಎಂದಷ್ಟೇ ಕೇಳಿಕೊಳ್ಳುವೆ.

–ಸುಬ್ರಾಯ ಚೊಕ್ಕಾಡಿ, ಚೊಕ್ಕಾಡಿ (ಸುಳ್ಯ)

'ಹೊಸ ಮನುಷ್ಯ' ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಿರುಪತ್ರಿಕೆಗಳ ಅತ್ಯುತ್ತಮ ಪರಂಪರೆಗೆ ಸೇರಿದ ಪತ್ರಿಕೆಯಾಗಿತ್ತು ಮತ್ತು ಅದು ಈ ಪರಂಪರೆಗೆ ತನ್ನದೇ ಆದ ಅನನ್ಯ ಕೊಡುಗೆಯನ್ನು ಕೂಡ ನೀಡಿದೆ. ಬಹುಶಃ ಇದೊಂದೇ ತನ್ನ ಸಂಪಾದಕನ ಬಿಂಬವನ್ನು ವರ್ಧಿಸಿಕೊಳ್ಳಲು ಪ್ರಯತ್ನಿಸದ ಪತ್ರಿಕೆ ಕೂಡ. ಬದಲಿಗೆ ಅದು ಸಾರ್ವಜನಿಕ ಮಹತ್ವದ ಮತ್ತು ಸಮಕಾಲೀನ ಸಂಗತಿಗಳ ಕಡೆಗೇ ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ವೈಯಕ್ತಿಕವಾಗಿ ಹೇಳುವುದಾದರೆ ಈ ಪತ್ರಿಕೆ ಲೇಖಕನಾಗಿ ನನಗೆ ಸಾಕಷ್ಟು ಅವಕಾಶ ನೀಡಿ ಪ್ರೋತ್ಸಾಹಿಸಿದೆ. ಹಾಗೆ ನೋಡಿದರೆ ನೀವು ನಿಮ್ಮ 'ಸಾಹಿತ್ಯ ಸಂವಾದ' ಪತ್ರಿಕೆಯ ಕಾಲದಿಂದಲೂ ನನ್ನನ್ನು ಹೀಗೇ ಪ್ರೋತ್ಸಾಹಿಸಿದ್ದೀರಿ, ಧನ್ಯವಾದಗಳು.

–ಕೆ. ಸತ್ಯನಾರಾಯಣ, ಬೆಂಗಳೂರು

'ಹೊಸ ಮನುಷ್ಯ' ನಿಲ್ಲಿಸುವದಾಗಿ ಆಘಾತಕಾರಿ ಸುದ್ದಿ ಕೊಟ್ಟಿದ್ದೀರಿ. ದಯವಿಟ್ಟು'ಬೇಡ. ದೇಶ ಇಂದು ವಿನಾಶದ ಅಂಚಿನಲ್ಲಿದೆ, ಫ್ಯಾಸಿಸಮ್ ಭಯಾನಕ ರೂಪ ತಾಳಿದೆ. ಇಂಥ ನಿರ್ಣಾಯಕ ಸನ್ನಿವೇಶದಲ್ಲಿ ಯುವಕರಿಗೆ ಮಾರ್ಗದರ್ಶನ ಮಾಡಲು ಪತ್ರಿಕೆ ಬೇಕು.

–ಸನತ್‌ಕುಮಾರ್ ಬೆಳಗಲಿ, ಕಲಬುರಗಿ

ಹತ್ತು ವರ್ಷಗಳ ಕಾಲ ನಿರಂತರವಾಗಿ 'ಹೊಸ ಮನುಷ್ಯ' ಸಂಚಿಕೆಯನ್ನು ನಾನು ಓದುತ್ತಾ ಬಂದಿದ್ದೇನೆ. ಅಲ್ಲಿನ ವಿಚಾರ ಕತೆ ಕವಿತೆ ಮುಂತಾದ ಬರಹಗಳಿಂದ ಬಹಳಷ್ಟು ತಿಳಿದಿದ್ದೇನೆ. ಬೇರೆ ಎಲ್ಲೂ ಸಿಗದ ಅನೇಕ ಬರಹಗಳು ಇಲ್ಲಿ ಮಾತ್ರ ಕಂಡು ಓದಿ ಹಿಗ್ಗಿದ್ದೇನೆ. ಕೆಲವು ಲೇಖನಗಳನ್ನು ಎರಡು ಮೂರು ಬಾರಿ ಓದಿದ್ದೇನೆ. ಪತ್ರಿಕೆ ಈ ನೆಲೆಯಲ್ಲಿ ನಡೆಸಿಕೊಂಡು ಬಂದವರು ಬಹಳ ಅಪರೂಪ. ನಿಮಗೆ ನಿಮ್ಮ ಬಳಗಕ್ಕೆ ನಮನಗಳು. ಆದರೆ ಪತ್ರಿಕೆ ನಿಲ್ಲಿಸುವ ಮಾತು ಓದಿ ಮನಸು ಕಲಕಿತು.

–ಎಚ್.ಟಿ. ಕೃಷ್ಣಮೂರ್ತಿ, ಶಿವಮೊಗ್ಗ

ವಿಶೇಷಾಂಕ ಈಗ ತಾನೆ ಬಂತು. ಖುಷಿಯಾದ್ದಕ್ಕಿಂತ ಬೇಸರವಾದದ್ದು 'ಹೊಸ ಮನುಷ್ಯ' ಪ್ರಕಟಣೆ ನಿಲ್ಲಿಸುವ ನಿಮ್ಮ ನಿರ್ಧಾರ. ಅದು ನಿಮ್ಮ ಆರೋಗ್ಯದ ಕಾರಣಕ್ಕೆ ಆಗಿರುವುದು ಮತ್ತೂ ಬೇಸರ. ಪ್ರಕಟಣೆಯನ್ನು ನಿಲ್ಲಿಸಬೇಡಿರೆಂದು ಸಾಕಷ್ಟು ಒತ್ತಡ ನಿಮ್ಮ ಮೇಲೆ ಬರುತ್ತದೆ ಎಂಬುದ ಬಲ್ಲೆ. ಅಂತಹ ಸಂದರ್ಭ ಬಂದರೆ ಪುಟ ವಿನ್ಯಾಸದ ಕೆಲಸವನ್ನು ಸಂಕೋಚವಿಲ್ಲದೆ ನನ್ನಿಂದ ಮಾಡಿಸಿ. ಅಷ್ಟು ಸಹಕಾರ ನಾನು ಮಾಡಬಲ್ಲೆ. ಏನಾದರಾಗಲಿ ಇನ್ನೊಂದಿಷ್ಟು ಕಾಲ ಪತ್ರಿಕೆಯನ್ನು ನಿಲ್ಲಿಸಬೇಡಿ ಎಂಬುದು ನನ್ನ ಆಗ್ರಹ

–ರಾಜ ಸಿರಿಗೆರೆ, ಸಿರಿಗೆರೆ

ಈ ತಕ್ಷಣಕ್ಕೆ ನಿಮ್ಮ ಸಂಪಾದಕೀಯ ಓದಿದೆನು. 'ಹೊಸಮನುಷ್ಯ' ನಿಲ್ಲಿಸುತ್ತಿರುವುದಕ್ಕೆ ಕಾರಣ ತಿಳಿಯಿತು. ನಿಮ್ಮ ಆರೋಗ್ಯದ ದೃಷ್ಟಿಯಿಂದ ನಿಮಗೆ ಅಗತ್ಯವಾಗಿರುವ ಬಿಡುವಿನ ಕಾರಣದಿಂದ ನಿಮ್ಮ ನಿರ್ಧಾರ ಸರಿಯಾಗಿದೆ. ನಿಮ್ಮ ಆರೋಗ್ಯ ಚೆನ್ನಾಗಿರಲೆಂದು ಪ್ರಾರ್ಥಿಸುವೆನು. ಇದುವರೆಗೆ 'ಹೊಸಮನುಷ್ಯ'ದ ಸಂಚಿಕೆಗಳು ರೂಪಿಸಿರುವ ಸಮಾಜವಾದಿ ನಿಲುವು ಒಂದು ಸಂಸ್ಥೆ ರೂಪಿಸುವ ಸುಧಾರಣೆಗೆ ಸಮಾನವಾದುದಾಗಿದೆ. ಎಂದಿಗೂ ನಿಮ್ಮ ಓದುಗರು ನಿಮ್ಮನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

'ಗಾಂಧಿ ಕಥನ' ದಿಂದ ಜನಮಾನಸವನ್ನು ಗೆದ್ದಿದ್ದೀರಿ. ಇನ್ನು ಮುಂದೆಯೂ ನಿಮ್ಮ ಬರವಣಿಗೆ ಕೃತಿಯಾಗಿ ರೂಪುಗೊಂಡು ಸಮಾಜಕ್ಕೆ, ಸಾಹಿತ್ಯ ಲೋಕಕ್ಕೆ ಕೊಡುಗೆಯಾಗುತ್ತದೆ ಎಂದು ನನ್ನ ನಂಬಿಕೆ. ಎಲ್ಲ ಶುಭ ಹಾರೈಸುವೆನು. ನನ್ನ ಕವಿತೆಗಳು, ನನ್ನ ಮತ್ತು ನನ್ನ ಮಗನ ಪುಸ್ತಕಗಳ ವಿಮರ್ಶೆ ಸಹ 'ಹೊಸ ಮನುಷ್ಯ'ದಲ್ಲಿ ಪ್ರಕಟಗೊಂಡಿರುವ ಖುಷಿ ನನಗೆ.

–ಆರ್ ಜ್ಯೋತಿ, ಕಾರ್ಕಳ

ವಿಶೇಷಾಂಕ ಚೆನ್ನಾಗಿ ಬಂದಿದೆ ಎಂದರೆ ಕ್ಲೀಷೆಯ ಮಾತಾದರೂ ಪರವಾ ಇಲ್ಲ. ಅದೇ ಮಾತನ್ನು ಹೇಳದೆ ವಿಧಿಯಿಲ್ಲ, ಆದರೆ ಪತ್ರಿಕೆ ಸ್ಥಗಿತಗೊಳ್ಳುವುದು ಬೇಸರದ ಸಂಗತಿ.

–ನಿತ್ಯಾನಂದ ಬಿ ಶೆಟ್ಟಿ, ತುಮಕೂರು

ಪತ್ರಿಕೆ ನಿಲ್ಲಿಸುತ್ತಿರುವ ಸಂಗತಿ ಕೇಳಿ ಬೇಸರವಾಯಿತು. ಆದರೂ ನಿಮ್ಮ ಆರೋಗ್ಯ ಮುಖ್ಯ. ನಿಮ್ಮ ಸಂಪಾದಕಿಯವನ್ನು ಮಿಸ್ ಮಾಡಿಕೊಳ್ಳುತ್ತೇನೆ.

–ಎಸ್ ಅರವಿಂದ, ಐ.ಐ.ಟಿ, ತಿರುಪತಿ

ಕೊನೆಯ ಸಂಚಿಕೆ ಎಂದದ್ದು ಸ್ವಲ್ಪ ಬೇಸರವಾಯಿತು. ಬಹುಶಃ ಸಮಾಜದ ಲೋಪದೋಷಗಳನ್ನು ನಿಷ್ಠುರವಾಗಿ ಯಾವ ಮುಲಾಜೂ ಇಲ್ಲದೆ ಒರೆಗೆ ಹಚ್ಚಿ ಕಾಣಿಸುವ ಪತ್ರಿಕೆ ಇದಾಗಿತ್ತು. ಇನ್ನು ಇದು ಮುಂದುವರಿಯದೆಂದು ನಂಬಲಾಗುತ್ತಿಲ್ಲ... ಇರಲಿ. ನೂರ್ಕಾಲ ನಮ್ಮೊಂದಿಗೆ ಚೆನ್ನಾಗಿರಿ.

–ಡಿ.ಸಿ. ಗೀತಾ, ಬೆಂಗಳೂರು

ಲಂಕೇಶ್ ಪತ್ರಿಕೆ ನನ್ನ ಜೀವನದಲ್ಲಿ ಬಹಳ ಪ್ರಭಾವ ಬೀರಿದ ಪತ್ರಿಕೆ. ಅದರಿಂದ ನಾನು ಸಾಕಷ್ಟು ಕಲಿತುಕೊಂಡಿದ್ದೇನೆ ಮತ್ತು ವಿಚಾರವಂತನಾಗಿದ್ದೇನೆ. ಪ್ರತಿವಾರ ಏನಾದರೂ ಹೊಸತನ್ನು ಕಲೀತಿದ್ದೆ. ಅದೇ ರೀತಿ ನಿಮ್ಮ ಪತ್ರಿಕೆ ಕೂಡ ಪ್ರತಿ ತಿಂಗಳು ಹೊಸತನ್ನು ಜನರಿಗೆ ಕಲಿಸುತ್ತಿದೆ, ಹೊಸ ವಿಚಾರವನ್ನು ಮಂಡಿಸುತ್ತಿದೆ. ನಮಗೆ ಸರಕಾರವನ್ನು ಮತ್ತು ನಮ್ಮನ್ನು ಆಳುವ ದೊರೆಗಳನ್ನು ಪ್ರಶ್ನಿಸುವ ಪತ್ರಿಕೆಯ ಅವಶ್ಯವಿದೆ. ಹೀಗಾಗಿ ಈ ಪತ್ರಿಕೆ ಮುಂದುವರಿಯುವುದು ಸಮಾಜದ ಹಿತದೃಷ್ಟಿಯಿಂದ ಒಳ್ಳೆಯದು.

–ಸಿ.ಎಂ. ಅಂಗಡಿ, ಹೊಸದೆಹಲಿ

ಫೆಬ್ರವರಿ ಸಂಚಿಕೆ ವಿಶೇಷಾಂಕವಾಗಿ ಎಷ್ಟು ಸಮೃದ್ಧವಾಗಿ ಹೊರಬಂದಿದೆ! ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ.

–ಮಲ್ಲಿಕಾರ್ಜುನ ಹೆಗ್ಗಳಗಿ, ಬನಹಟ್ಟಿ

ಆರೇಳು ತಿಂಗಳುಗಳಿಂದಷ್ಟೆ ಪತ್ರಿಕೆಯನ್ನು ಓದಿ 'ಹೊಸ ಮನುಷ್ಯನಾಗುತ್ತಾ ನನ್ನ ಆನಂದದಲ್ಲಿ ನಾನಿದ್ದೆ. ಈಗ ಇದ್ದಕ್ಕಿದ್ದಂತೆ ಪತ್ರಿಕೆ ನಿಲ್ಲಿಸುವ ಸುದ್ದಿ ನೀಡಿ ಈ ಆನಂದಕ್ಕೆ ಕಲ್ಲುಹಾಕಿದ ಕಟುಕತನಕ್ಕೆ ಕೈ ಹಾಕಿದ್ದೀರಿ. ಇದು ಸಲ್ಲದ ಪಾತಕ,' ಯೋಚಿಸಿ ನೋಡಿ.

– **–ಎಂ.ನಾಗರಾಜಮೂರ್ತಿ,** ಬೆಂಗಳೂರು

ಪತ್ರಿಕೆಯನ್ನು ನಿಲ್ಲಿಸುತ್ತಿರುವುದು ಒಳ್ಳೆಯ ನಿರ್ಧಾರ. ನಿಮ್ಮ ಆರೋಗ್ಯ ಸುಧಾರಿಸಿ ನೀವು ಮೊದಲಿನಂತಾಗಬೇಕೆಂಬುದು ನನ್ನ ಹಾರೈಕೆ.

–ವಿಜಯೇಂದ್ರ ಪಾಟೀಲ, ಧಾರವಾಡ

ಇಡೀ ವಿಶೇಷಾಂಕದಲ್ಲಿ ನನ್ನ ಗಮನ ಸೆಳೆದ ಲೇಖನವೆಂದರೆ ರಾಜೇಂದ್ರ ಚೆನ್ನಿಯವರ 'ಕನ್ನಡ–ಕರ್ನಾಟಕ ವೈಚಾರಿಕ ಪರಂಪರೆಯ ಇಂದಿನ ದುರಂತ'. ಬರಹ ಇನ್ನಷ್ಟು ವಿವರಣೆಯನ್ನು ಬೇಡುವಂತಿದ್ದರೂ ಕರ್ನಾಟಕದ ಮುಂಚೂಣಿ ವರ್ಗವೇಕೆ ಈಗ ಬಲಪಂಥೀಯ ಕೋಮುವಾದಕ್ಕೆ ಒಲಿದಿದೆ ಎಂಬುದಕ್ಕೆ ಆಧುನಿಕ ಕರ್ನಾಟಕ ತನ್ನ ವೈಚಾರಿಕತೆಯ ಆಕರಗಳು ದೃಢವಾಗಿಲ್ಲದಿದ್ದುದೇ ಕಾರಣವೆಂದು–ಅದಕ್ಕೆ ಇನ್ನಷ್ಟು ವಿವರಣೆ ಬೇಕಾದದ್ದು–ಸಮಕಾಲೀನ ಪ್ರಗತಿಪರ ಅಥವಾ ಎಡಪಂಥೀಯ ಚಿಂತನೆಯಲ್ಲಿನ ದೌರ್ಬಲ್ಯಗಳ ಬಗ್ಗೆ ಹೆಚ್ಚು ದಿಟ್ಟ ವಿವೇಚನೆ ನಡೆಯಬೇಕಿತ್ತು ಎನಿಸದಿರದು.

–ಎಂ.ವಿ. ನಂದಕುಮಾರ್, ಮೈಸೂರು

ನಿಮ್ಮ ವಿಶೇಷಾಂಕದಲ್ಲಿನ 'ಹಿಂದೂ ಧರ್ಮ ಎಂದರೇನು?' ಎಂಬ ಲಕ್ಷ್ಮೀಶ ತೋಳ್ಪಾಡಿಯವರ ಲೇಖನ ಓದಿದರೆ ಹಿಂದೂ ಎಂದರೆ ವೈಷ್ಣವ ಎಂಬರ್ಥ ಬರುವಂತಿದೆ. ಆದರೆ ಹಿಂದೂ ಧರ್ಮದಲ್ಲಿ ವಿವಿಧ ಪಂಥಗಳ ಶೈವರಷ್ಟೇ ಅಲ್ಲ, ನಾಸ್ತಿಕರೂ, ಸಂದೇಹವಾದಿಗಳಿಗೂ ಜಾಗವಿದೆ. ಹಾಗೆಂದೇ ಅದು ಸಹನೆ–ಸಹಬಾಳ್ವೆಯ ಜೀವನ ಪಥವಾಗಿದೆ. ಅಸ್ಪೃಶ್ಯತೆ ಅದರ ಸಾಮಾಜಿಕ ಭಾಗವೇ ಹೊರತು ಅದರ ಅಧ್ಯಾತ್ಮಿಕತೆಯಲ್ಲಿ ಅದಕ್ಕೆ ಜಾಗವಿಲ್ಲ.

–ಎನ್ ನಂಜುಂಡಮೂರ್ತಿ, ತಿಪಟೂರು

ವಿಜಯೇಂದ್ರ ಪಾಟೀಲರ ಹರಟೆ ಖುಷಿ ನೀಡಿತು. ಎಷ್ಟೆಲ್ಲ ತಿರುವುಗಳನ್ನು ಸೃಷ್ಟಿಸುತ್ತಾ ವೃತ್ತಾಂತವನ್ನು ಅತ್ಯಂತ ರೋಚಕತೆಯಿಂದ ಕಟ್ಟಿದ್ದಾರೆ. ನಿಮ್ಮ ಟಿಪ್ಪಣಿ ಹಾಗೂ ಲೇಖನದ ಪೀಠಿಕೆಯು ಅತ್ಯಂತ ಅರ್ಥಪೂರ್ಣವಾಗಿವೆ. ಲೇಖನದ ಮುಂದಿನ ವಿಷಯಗಳನ್ನು ತುಸು ಅರಿತುಕೊಳ್ಳಲು ಇವು ಅತ್ಯಂತ ನಿರ್ಣಾಯಕವಾಗಿವೆ. ಧರ್ಮದ ಹೊಸ ಆವೃತ್ತಿಯೇ ಆಗಿದೆ ಅನ್ನುವ ನಿಮ್ಮ ಮಾತು ಅತ್ಯಂತ ಮಾರ್ಮಿಕವಾಗಿದೆ.

–ಮಹಾಂತೇಶ ಓಶಿಮಠ, ಕೈಗಾ

ಲೋಪಗಳು; ತಿದ್ದುಪಡಿ; ಕ್ಷಮೆ

ವಿಶೇಷಾಂಕದಲ್ಲಿ ಕೆಲ ಕಾಗುಣಿತ ತಪ್ಪುಗಳೂ ಸೇರಿದಂತೆ ನಾಲ್ಕೈದು ಮುಖ್ಯ ಲೋಪಗಳು ಸಂಭವಿಸಿವೆ. ಮೊದಲನೆಯದು ಸಂಪಾದಕೀಯ ಟಿಪ್ಪಣಿಗಳ ಕೊನೆಯ ಪ್ಯಾರಾದ (೩ನೇ ಪುಟ) ಮೊದಲ ವಾಕ್ಯ ಇನ್ನು *ಕೊನೆಯದಾಗಿ ಹತ್ತು ವರ್ಷಗಳ ಕಾಲ ಪತ್ರಿಕೆ* ಎಂಬ ಭಾಗ ಅದರ ಮೇಲಿನ ಚಿತ್ರಗಳಲ್ಲಿ ಅಡಗಿ ಹೋಗಿದೆ. ಎರಡನೆಯದು: ೧೨ನೇ ಪುಟದಲ್ಲಿ ಲಕ್ಷ್ಮೀಶ ತೋಳ್ಪಾಡಿಯವರ ಲೇಖನದ ಶೀರ್ಷಿಕೆಯಲ್ಲಿ ಹಿಂದೂ ಧರ್ಮ ಹಿಂಧೂ ಧರ್ಮ ಎಂದಾಗಿಬಿಟ್ಟಿದೆ, ಹಾಗೇ ೩೪ನೇ ಪುಟದಲ್ಲಿನ ರಾಜೇಂದ್ರ ಚೆನ್ನಿಯವರ ಲೇಖನದ ಶೀರ್ಷಿಕೆಯಲ್ಲಿ ಕತೆ ಎಂಬ ಕೊನೆಯ ಶಬ್ದ ಬಿಟ್ಟುಹೋಗಿದೆ, ಇನ್ನೊಂದು ಗಂಭೀರ ಲೋಪವೆಂದರೆ ೧೮ನೇ ಪುಟದಲ್ಲಿನ ಉಡುಪಿ ಸೀರೆಗಳ ಪುನಶ್ಚೇತನ ಕುರಿತ ಲೇಖನದ ಆರಂಭದಲ್ಲಿ ಅದರ ಲೇಖಕಿ ಮಮತಾ ರೈ ಅವರ ಹೆಸರೇ ಬಿಟ್ಟುಹೋಗಿದೆ, ಕೊನೆಯದಾಗಿ ತೀರಾ ಮುಜುಗರದಿಂದ ಹೇಳಿಕೊಳ್ಳಬೇಕಾಗಿರುವ ಲೋಪವೆಂದರೆ ೮ನೇ ಪುಟದಲ್ಲಿನ ಹತ್ತು ವರ್ಷಗಳ 'ಹೊಸ ಮನುಷ್ಯ'ದ ಹೆಜ್ಜೆ ಗುರುತುಗಳನ್ನು ಗುರುತಿಸುವ ಟಿ. ಅವಿನಾಶ್ ಅವರ ಲೇಖನದ ದೊಡ್ಡ ಪೀಠಿಕಾ ಭಾಗವೇ ಪುಟ ವಿನ್ಯಾಸದ ಸಮಯದಲ್ಲಿ ಮುದ್ರಣದಿಂದ ಹಾರಿ ಹೋಗಿದೆ, ಈ ಎಲ್ಲ ತಪ್ಪುಗಳಿಗಾಗಿ ಓದುಗರ ಕ್ಷಮೆ ಕೋರುವೆ, ಅವಿನಾಶ್ ಅವರ ಲೇಖನವನ್ನು, ಮುದ್ರಣದಿಂದ ಬಿಟ್ಟು ಹೋಗಿರುವ ಈ ಮುಂದಿನ ಪೀಠಿಕಾ ಭಾಗವನ್ನು ಸೇರಿಸಿಕೊಂಡು ಓದಿಕೊಳ್ಳಬೇಕೆಂದು ಕೋರುತ್ತೇನೆ.

–ಸಂಪಾದಕ

ಒಂದು ಸಣ್ಣ ಕಿರುಪತ್ರಿಕೆ ೧೦ ವರ್ಷಗಳ ಕಾಲ ನಿರಂತರವಾಗಿ ಹೊರಬರುವುದು ಸಣ್ಣ ವಿಚಾರವೇನಲ್ಲ. ಒಂದು ನಿರ್ದಿಷ್ಟ ತಾತ್ವಿಕ ಚೌಕಟ್ಟನ್ನು ಹೊಂದಿರುವ 'ಹೊಸ ಮನುಷ್ಯ' ಇಂತಹ ದಶಕದ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ. ಗಾಂಧಿ ಮತ್ತು ಲೋಹಿಯಾವಾದಗಳ ನೈತಿಕ ಚೌಕಟ್ಟು ಹಾಗೂ ವಾಯುವೇಗದಿಂದ ಚಲಿಸುತ್ತಿರುವ ಜಾಗತೀಕರಣದ ಆರ್ಥಿಕತೆಗೆ ಪರ್ಯಾಯವಾಗಿರುವ ದೃಷ್ಟಿಕೋನ ಕಟ್ಟುವ ಮಹತ್ವಾಕಾಂಕ್ಷೆ ಹೊಂದಿರುವ ಕಿರುಪತ್ರಿಕೆ ತನ್ನ ಈ ಆದ್ಯತೆಗಳನ್ನು ಯಶಸ್ವಿಯಾಗಿ ಕಳೆದ ೧೦ ವರ್ಷಗಳಲ್ಲಿ ಪೂರೈಸಿದೆ ಎಂದು ಹೇಳಬಹುದು. ಸದೃಢ ತಾತ್ವಿಕತೆ, ನೈತಿಕತೆ, ಮಿತಿಗಳುಳ್ಳ ಜೀವನದ ಸದುದ್ದೇಶ, ಸಮಕಾಲೀನ ರಾಜಕೀಯ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ವಿಶ್ಲೇಷಣೆ, ಪುಸ್ತಕ ವಿಮರ್ಶೆ, ರಂಗ, ನಾಟಕಗಳ ವ್ಯಾಖ್ಯಾನ, ಆಧ್ಯಾತ್ಮಿಕ ಲೇಖನಗಳು, ಹರಿತವಾದ ಸಂಪಾದಕೀಯ, ಗತಕಾಲದ ಸ್ಮೃತಿಗಳು, ವ್ಯಕ್ತಿಚಿತ್ರಗಳು, ಭಾಷಾಂತರ ಲೇಖನಗಳು, ವಾಗ್ವಾದವನ್ನು ಆಹ್ವಾನಿಸುವ ಭಿನ್ನಾಭಿಪ್ರಾಯಗಳು, ದೀರ್ಘವಾಗಿರುವ ಓದುಗರ ಪತ್ರಗಳು ಮುಂತಾದವುಗಳು ಪತ್ರಿಕೆಯು ಸಮೃದ್ಧವಾಗಿರುವಂತೆ ನೋಡಿಕೊಂಡಿದೆ. ಓದುಗರು ಅನೇಕ ಬಾರಿ ತಿಳಿಸಿದಂತೆ ಇದೊಂದು ಸೃಜನಶೀಲ ಮತ್ತು ಜೀವಂತಿಕೆಯ ಪತ್ರಿಕೆಯಾಗಿದ್ದು ಓದುಗರ ಅಭಿರುಚಿಯನ್ನು ರೂಪಿಸುವ ಮಹತ್ವದ ಕೆಲಸ ಮಾಡಿದೆ. ಅಷ್ಟೇ ಅಲ್ಲ, ಪ್ರತೀ ವರ್ಷ ವಾರ್ಷಿಕ ವಿಶೇಷ ಸಂಚಿಕೆಗಳನ್ನು ರೂಪಿಸಿ ಓದುಗರ ಅರಿವನ್ನು ಇನ್ನೂ ಹೆಚ್ಚಿಸುವ ಕೆಲಸ ಮಾಡಿದೆ. ಈ ೧೦ ವರ್ಷಗಳ ಹಿಂದಣ ಹೆಜ್ಜೆಯನ್ನು ಈ ಲೇಖನ ಗುರುತಿಸಲು ಪ್ರಯತ್ನಿಸುತ್ತದೆ.

ಪ್ರಖರತೆ, ಮೊನಚು ಮತ್ತು ಸೈದ್ಧಾಂತಿಕ ಸ್ಪಷ್ಟತೆ ಇರುವ ಈ ಪತ್ರಿಕೆಯಲ್ಲಿ ಕೆಲ ವಿಷಯಗಳು ಹೆಚ್ಚಿನ ಆದ್ಯತೆ ಪಡೆದುಕೊಂಡಿವೆ. ಅದರಲ್ಲಿ ಒಂದು: ನಮ್ಮ ಇಡೀ ಸಮಾಜವನ್ನೇ ತನ್ನ ಕಪಿಮುಷ್ಠಿಗೆ ತೆಗೆದುಕೊಂಡ ಅಭಿವೃದ್ಧಿಯ ಮೀಮಾಂಸೆ. ಆಧುನಿಕತೆ ಮತ್ತು ಜಾಗತೀಕರಣ ಸೃಷ್ಟಿಸಿದ ತೀರಲಾರದ ದಾಹ ಮತ್ತು ಹಪಾಹಪಿಯನ್ನು ಇಲ್ಲಿನ ಲೇಖನಗಳು ಚರ್ಚೆಗೆ ಎತ್ತಿಕೊಂಡು ತೀಕ್ಷ್ಣವಾಗಿ ವ್ಯಾಖ್ಯಾನಿಸಿವೆ. ಹೆಚ್ಚು ಕಡಿಮೆ ಎಲ್ಲಾ ಲೇಖನಗಳು ಅಭಿವೃದ್ಧಿ ಎಂಬ ಪಾಶ್ಚಿಮಾತ್ಯ ಯಂತ್ರ ನಾಗರೀಕತೆಯ ಉತ್ಪನ್ನವನ್ನು ತೀವ್ರವಾಗಿ ಪ್ರಶ್ನಿಸಿವೆ. ರಾಜಕೀಯ ಮುಖಂಡರು, ದಲ್ಲಾಳಿ ವ್ಯಾಪಾರಿಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳು ಅನೈತಿಕವಾಗಿ ಹೇಗೆ ಒಟ್ಟುಗೂಡಿಕೊಂಡು ತಮ್ಮ ಲಾಭಕೋರತನಕ್ಕಾಗಿ ಈ ಭೂಮಿಯನ್ನು ಮತ್ತು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿರುವ ಪರಿಸರವನ್ನು ಮುಂದಿನ ಪೀಳಿಗೆಗೆ ಇಲ್ಲದಂತೆ ಮಾಡುತ್ತಿದ್ದಾರೆ ಎಂಬ ಅಂಶವನ್ನು ಬಯಲಿಗೆಳೆದಿವೆ. ಸ್ವಾತಂತ್ರ್ಯ ಪಡೆದ ಮೊದಲ ದಿನಗಳಲ್ಲಿ ಅಭಿವೃದ್ಧಿ ಎಂದರೆ ರೋಮಾಂಚನವಾಗುತ್ತಿತ್ತು. ಹಾಗಾಗಿಯೇ ಜವಹರಲಾಲ್ ನೆಹರು ಅವರು Industrial or perish ಎಂಬ ಮಾತನ್ನಾಡಿದ್ದರು. ಈ ಕುರಿತಾದ ವಿಸ್ತೃತ ಲೇಖನಗಳನ್ನು ಒಳಗೊಂಡಂತೆ ಅಭಿವೃದ್ಧಿ ಮೀಮಾಂಸೆಯ ರಾಜಕಾರಣ ಮತ್ತು ಅದರಿಂದಾದ ಅನಾಹುತಗಳನ್ನು ವಿಶ್ಲೇಷಿಸುವ ಲೇಖನಗಳನ್ನು ಇಲ್ಲಿ ಕಾಣಬಹುದು. ಆದರೆ ಈ ಅಭಿವೃದ್ಧಿ ಎಂಬುದು ಬಂಡವಾಳಿಗರ, ದಲ್ಲಾಳಿಗಳ ಸ್ವತ್ತಾಗಿ ಇಡೀ ಜನಾಂಗವೇ ಅವನತಿಯತ್ತ ಸಾಗುತ್ತಿದೆ ಎಂಬ ವಿಷಯವನ್ನು ಇಲ್ಲಿನ ಲೇಖನಗಳು ಪುನಃ ಪುನಃ ಪ್ರಸ್ತಾಪಿಸಿವೆ.

ಈ ಕುರಿತಾದ ಪತ್ರಿಕೆಯ ನಿಲುವು ಎಂದರೆ ಅಭಿವೃದ್ಧಿಯ ದಿಕ್ಕನ್ನು ಬದಲಿಸಲು ಮತ್ತು ಅದರ ವೇಗವನ್ನು ತಗ್ಗಿಸಲು ಸರ್ಕಾರದ ಗಮನ ಸೆಳೆಯುವುದಾಗಿದೆ. "ಈ ಅಭಿವೃದ್ಧಿ ಇನ್ನು ಸಾಕು" ಎಂಬ ಶೀರ್ಷಿಕೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಗಿದೆ. ನಾಡಿನ ಪರಿಸರವಾದಿಗಳು, ಚಿಂತಕರು, ಕೈಮಗ್ಗದಲ್ಲಿ ಕೆಲಸ ಮಾಡುವವರು, ಅಕಾಡೆಮಿಶಿಯನ್ನರು, ಸಾಹಿತಿಗಳು ಮುಂತಾದ ವಿಭಿನ್ನ ಕ್ಷೇತ್ರಗಳ ಜನ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ.

'ಪರಿಸರ ತಜ್ಞ ನಾಗೇಶ್ ಹೆಗಡೆಯವರು ಹೇಳುವಂತೆ 'ಅಭಿವೃದ್ಧಿ'ಯ ಸ್ವರೂಪ ಅತ್ಯಗತ್ಯವಾಗಿ ಬದಲಾಗಲೇಬೇಕು....

'ಹೊಸ ಮನುಷ್ಯ' ಮಾದರಿಯ ನೂರಾರು ಪತ್ರಿಕೆಗಳು ಭಾರತದ ಎಲ್ಲ ಭಾಷೆಗಳಿಗೂ ಅನಿವಾರ್ಯವಾಗಿರುವ ಈ ದುರಿತ ಕಾಲಘಟ್ಟದಲ್ಲಿ, ಇದ್ದೊಂದು 'ಹೊಸ ಮನುಷ್ಯ'ವೂ ವಿದಾಯ ಹೇಳುತ್ತಿರುವುದು ಕನ್ನಡದ ಪ್ರಜ್ಞಾವಂತ ಓದುಗ ವಲಯದಲ್ಲಿ ಬೇಸರ ಮೂಡಿಸಿರುವುದು ನಿಜ.

ನಂನಮ್ಮ ಸಾಮರ್ಥ್ಯಗಳನ್ನು ಗುರುತಿಸಿ, ಅದಕ್ಕೆ ತಕ್ಕ ಅವಕಾಶ ನೀಡಿ, ಅರಿವು ವಿಸ್ತರಿಸಿಕೊಳ್ಳುವಂತೆ ಮಾಡಿದ ನಿಮಗೆ ಧನ್ಯವಾದಗಳನ್ನು ಹೇಳಲು ಪದಗಳು ಸಾಲವು. ನಾವೆಲ್ಲ ಪತ್ರಿಕೆಯ ಭಾಗವಾಗಿದ್ದು, ಬಳಗವಾಗಿದ್ದು ನಮಗೆ ಹೆಮ್ಮೆಯ ವಿಷಯ.

ಪತ್ರಿಕೆಯ ಪೋಸ್ಟಿಂಗ್ ದಿನ ನಿಮ್ಮ ಮನೆಯಲ್ಲಿ ನಾವೆಲ್ಲ ಸೇರಿ ಹರಟೆ, ಚರ್ಚೆ, ಕುಶಾಲು–ನಗೆಚಾಟಿಕೆ, ತರಾವರಿ ತಿನಿಸುಗಳಿಂದ ಕೂಡಿದ ಸಮೃದ್ಧ ಊಟ, ಸವಿತಾರ ಪ್ರೀತಿ–ಕಾಳಜಿಯ ಆತಿಥ್ಯಗಳೊಂದಿಗೆ ಕೆಲಸ ಮಾಡುತ್ತಿದ್ದುದೇ ಒಂದು ಸಂಭ್ರಮ. ಅದು ನಮ್ಮೆಲ್ಲರ ನೆನಪಿನಲ್ಲಿ ಉಳಿಯುವಂತಹದ್ದು.

'ಹೊಸ ಮನುಷ್ಯ'ದ ವಿದಾಯದಿಂದ ಕವಿಯುತ್ತಿರುವ ಶೂನ್ಯವು ಪತ್ರಿಕೆಯೊಂದಿಗೆ ಆಪ್ತ ಸಂಬಂಧ ಹೊಂದಿದ್ದ ನಮ್ಮ ಬಳಗವನ್ನು ಬಹುವಾಗಿ ಕಾಡಲಿದೆ.

–ಎಂ ರಾಜು, ಶ್ರೀದೇವಿ ಕೆ, ಟಿ ಎಲ್ ರೇಖಾಂಬ, ಪದ್ಮಾಕ್ಷಿ ಕೆ, ಬಿ ಎಲ್ ಇಳಾ, ಎಸ್ ಎಲ್ ವೆಂಕಟೇಶ್, ಶೃಂಗೇಶ್, ಎನ್.ಎಂ.ಕುಲಕರ್ಣಿ, ವಸುಂಧರಾದೇವಿ, ಹೊನ್ನಾಳಿ ಚಂದ್ರಶೇಖರ್, ಮಮತಾ ನಿರಂಜನ, ಬಿ ವಿ ಸುರೇಂದ್ರ, ವಿಜಯಾ ಸುರೇಂದ್ರ, ಮಂಜುಳಾ ರಾಜು, ನಿಸಾರ್ ಅಹಮದ್, ಶೇಖರ್ ಗೌಳೇರ್

‘ಪರ್ಯಾಯ ಜೀವನ ಪದ್ಧತಿ’ ಕುರಿತ ಕುಪ್ಪಳಿ ಅಧ್ಯಯನ ಶಿಬಿರದ ಉಪನ್ಯಾಸ-೫

ಸಹಕಾರ ತತ್ವದ ಬೆಳಕಿನಲ್ಲಿ ಅಸಲಿ ಖಾದಿಯ ಕಡೆಗೆ ಒಂದು ಹೆಜ್ಜೆ.

-ಸಂತೋಷ್ ಕೌಲಗಿ

“ಲಾಭ ನಷ್ಟಕ್ಕೆ ಆಡಳಿತ ಮಂಡಳಿಯಿಂದ ಹಿಡಿದು, ಕಡೆಯ ಕೆಲಸಗಾರರವರೆಗೆ ಎಲ್ಲರನ್ನೂ ಜವಾಬ್ದಾರಿ ಮಾಡಲಾಗಿದೆ. ಹಣವನ್ನು ತೊಡಗಿಸದೆ ಕೆಲಸಗಾರರು ಸಂಸ್ಥೆಯ ಬಗ್ಗೆ ಎಷ್ಟೇ ಒಳ್ಳೆಯ ಮಾತನಾಡಿದರೂ ಅವರು ಸಂಸ್ಥೆಯನ್ನು ಬಹಳ ಗಂಭೀರವಾಗಿ ಸ್ವೀಕರಿಸಿರುವುದಿಲ್ಲವೆಂಬುದು ಸತ್ಯ. ಹಾಗಾಗಿ ಖಾದಿ ಚಟುವಟಿಕೆ ಅಗತ್ಯವಿರುವ ದುಡಿಯುವ ಬಂಡವಾಳದಲ್ಲಿ ಮೂರನೇ ಒಂದು ಭಾಗವನ್ನು ಕೆಲಸಗಾರರು, ಮತ್ತೊಂದು ಮೂರನೇ ಒಂದು ಭಾಗವನ್ನು ಚಟುವಟಿಕೆಯ ಸಂಯೋಜಕರು ಮತ್ತು ಕಡೆಯ ಮೂರನೇ ಒಂದು ಭಾಗವನ್ನು ಜನಪದ ಸೇವಾ ಟ್ರಸ್ಟ್ ತೊಡಗಿಸಿತು. ಬರುವ ಲಾಭವನ್ನು ಪ್ರತಿಯೊಬ್ಬರು ತೊಡಗಿಸಿರುವ ಬಂಡವಾಳಕ್ಕೆ ಸಮಾನುಪಾತದಲ್ಲಿ ಹಂಚುವ ವ್ಯವಸ್ಥೆ ಮಾಡಲಾಯಿತು. ಇದರಿಂದಾಗಿ ಕೆಲಸಗಾರರು ತಮ್ಮ ಪಾಲ್ಗೊಳ್ಳುವಿಕೆಯನ್ನು ಗಂಭೀರವಾಗಿ ಸ್ವೀಕರಿಸತೊಡಗಿದರು.”



ಜನಪದ ಸೇವಾ ಟ್ರಸ್ಟ್ ಕಳೆದ ೪೫ ವರ್ಷಗಳಿಂದ ಖಾದಿ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ. ಅಂದರೆ ನೂಲುಗಾರಿಕೆ, ನೇಯ್ಗೆ, ಬಣ್ಣಗಾರಿಕೆಯ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗ ನೀಡಬೇಕೆಂಬ ಆಶಯದೊಂದಿಗೆ ಈ ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. ಸಂಸ್ಥೆ ನಡೆಸುತ್ತಿದ್ದ ನೂಲುಗಾರಿಕೆ ಕೇಂದ್ರ ಬಹಳ ವರ್ಷಗಳ ಹಿಂದೆಯೇ ಬದಲಾದ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ನಿಂತು ಹೋಯಿತು. ನೇಯ್ಗೆ ಮತ್ತು ಬಣ್ಣದ ಕೇಂದ್ರ ನಡೆಯುತ್ತಿದೆ. ಪ್ರಾರಂಭದ ಕೆಲವು ವರ್ಷಗಳ ಕಾಲ ಖಾದಿ ಚಟುವಟಿಕೆಯನ್ನು ನಡೆಸಲು ಖಾದಿ ಮಂಡಳಿಯಿಂದ ಆರ್ಥಿಕ ನೆರವನ್ನು ಪಡೆಯಲಾಗಿದೆ. ಆದರೆ ಸರ್ಕಾರಿ ಆಧಾರಿತ ಖಾದಿಯು ಆದರ್ಶದಿಂದ ಬಹಳ ದೂರ ಹೋಗಿ ಒಂದು ಭ್ರಷ್ಟ ವ್ಯವಸ್ಥೆಯನ್ನು ಹುಟ್ಟುಹಾಕಿದೆ. ಹೀಗಾಗಿ ಖಾದಿ ಮಂಡಳಿಯಿಂದ ಮತ್ತು ಖಾದಿ ಆಯೋಗದಿಂದ ಪಡೆಯುತ್ತಿದ್ದ ಆರ್ಥಿಕ ನೆರವನ್ನು ಪಡೆಯುವುದನ್ನು ನಿಲ್ಲಿಸಲಾಯಿತು. ಅಸಲಿ ಖಾದಿ ಬಟ್ಟೆ ಮತ್ತು ವಿಚಾರದ ಕಡೆಗೆ ಹೋಗುವ ಪ್ರಯೋಗವನ್ನು ಪ್ರಾರಂಭಿಸಲಾಯಿತು. ಜನಪದ ಖಾದಿಯನ್ನು ಜನಾಧಾರಿತ ಖಾದಿ ಮಾಡುವ ಪ್ರಯತ್ನದಲ್ಲಿ ತೊಡಗಿಕೊಳ್ಳಲಾಯಿತು. ಜನಾಧಾರಿತ ಖಾದಿ ಎಂದರೆ ಖಾದಿಯ ಮೂಲ ವಿಚಾರವನ್ನು ಅರಿತ ಗ್ರಾಹಕರು ಮತ್ತು ಖಾದಿಯ ವಿಚಾರವನ್ನು ಅರಿತ ಉತ್ಪಾದಕರು ಒಗ್ಗೂಡಿ ಖಾದಿ ಬಟ್ಟೆಯ ಮೂಲಕ ಶೋಷಣಾ ಮುಕ್ತ ವ್ಯವಸ್ಥೆಯೊಂದನ್ನು ಕಟ್ಟುವ ಪ್ರಯತ್ನದಲ್ಲಿ ತೊಡಗುವುದು.

ಇಂದು ನಮ್ಮ ಸಮಾಜವನ್ನು ಪರಸ್ಪರ ಅಪನಂಬಿಕೆಯ ಮೇಲೆ ಕಟ್ಟಲಾಗುತ್ತಿದೆ. ಎಲ್ಲ ಸಂಘ ಸಂಸ್ಥೆಗಳಲ್ಲೂ ಕಾನೂನು ಕಟ್ಟಳೆಗಳೇ ಮುನ್ನೆಲೆಗೆ ಬಂದು ಸಂಸ್ಥೆಯ ಆಶಯ ಹಿನ್ನೆಲೆಗೆ ಸರಿಯುತ್ತಿದೆ. ಹಾಗಾಗಿ ಎಲ್ಲ ಕಡೆ ಸಿ.ಸಿ.ಟಿವಿ ಕ್ಯಾಮರಾಗಳು ರಾರಾಜಿಸುತ್ತಿವೆ. ಇದು ದೊಡ್ಡ ನೈತಿಕ ಅಧೋಗತಿಯಾಗಿದೆ. ಅಪನಂಬಿಕೆಯನ್ನು ಆಧಾರವಾಗುಳ್ಳ ಸಮಾಜದಲ್ಲಿ ಆಗಬಹುದಾದ ಅನಾಹುತಗಳನ್ನು, ಮೋಸಗಳನ್ನು ತಡೆಯಲು ಕಾನೂನು ಮತ್ತು ವ್ಯವಸ್ಥೆಯನ್ನು ಹುಟ್ಟುಹಾಕಬೇಕಾಗುತ್ತದೆ. ಕಡೆಗೆ ಆ ವ್ಯವಸ್ಥೆ ಜನಶಕ್ತಿಗಿಂತ ಅಗಾಧವಾಗಿ ಬೆಳೆದು ತನ್ನ ಮೇಲಾಟವನ್ನು ಮೆರೆಯುತ್ತಾ ಹೋಗುತ್ತದೆ. ಜನರು ನಿಧಾನವಾಗಿ ನಾವು ಸಮಾಜದ ಭಾಗ ಎಂಬುದನ್ನು ಮರೆತು, ಸಮಾಜಕ್ಕೆ ನಾವು ಸಲ್ಲಿಸಬೇಕಾದ ಋಣವನ್ನು ಮರೆತು, ನೆರೆ ಹೊರೆಯೊಂದಿಗೆ, ತನ್ನ ಸಮುದಾಯದೊಂದಿಗೆ ಹೊಂದಿರಬೇಕಾದ ಜವಾಬ್ದಾರಿಯನ್ನು ಮರೆಯುತ್ತಾ ಹೋಗಿ ಹೆಚ್ಚು ಹೆಚ್ಚು ವ್ಯಕ್ತಿ ಕೇಂದ್ರಿತರಾಗುತ್ತಾ ಹೋಗುತ್ತಾರೆ. ತನ್ನದಾದರೆ ಮುಗಿಯಿತು ಎಂಬ ಮನೋಭಾವ ತಾಳುತ್ತಾ ಹೋಗುತ್ತಾರೆ.

ಆದೇ ಸಮಯದಲ್ಲಿ ಪರಸ್ಪರ ನಂಬಿಕೆಯ ಮೇಲೆ ಕಟ್ಟಲ್ಪಟ್ಟ ಸಮಾಜದಲ್ಲಿ ಪರಸ್ಪರರ ಬದುಕಿನ ಮೇಲೆ ಕಾಳಜಿ ಇರುತ್ತದೆ. ಸಮಾಜದ ಇತರರ ಒಳಿತಿನಲ್ಲಿ ನನ್ನ ಒಳಿತು ಅಡಗಿದೆ ಎಂಬ ಮನೋಭಾವ ಇರುತ್ತದೆ. ಅಲ್ಲಿ ಕಾನೂನಿಗಿಂತ ಹೆಚ್ಚಾಗಿ ಪರಸ್ಪರ ಗೌರವ, ನಂಬಿಕೆ ಸಮಾಜವನ್ನು ನಿರ್ದೇಶಿಸುತ್ತಿರುತ್ತದೆ. ಅಂತಹ ಸಮಾಜದ ನಿರ್ಮಾಣಕ್ಕೆ ಖಾದಿ ಒಂದು ಪ್ರಬಲವಾದ ಸಾಧನವಾಗಿದೆ.

ಖಾದಿ ಎಂಬುದು ಕೇವಲ ಒಂದು ಬಟ್ಟೆಯಲ್ಲ. ಅದು ಒಂದು ವಿಚಾರ. ಮನುಷ್ಯರು ದಿನದಿಂದ ದಿನಕ್ಕೆ ಉತ್ತಮರಾಗುವ ಪ್ರಯತ್ನ. ಆದರೆ ಇಂದಿನ ಸರ್ಕಾರಿ ಕೃಪಾ ಪೋಷಿತ ಖಾದಿ ಇದಕ್ಕೆ ತದ್ವಿರುದ್ಧವಾಗಿದೆ. ಇಂದು ಮೋಸ ಮತ್ತು ಶೋಷಣೆ ಖಾದಿಯ ಹಾಸು ಹೊಕ್ಕಾಗಿದೆ. ಗ್ರಾಹಕರು ಖಾದಿ ಎಂದು ಖರೀದಿಸುವ ಬಟ್ಟೆ ಹೆಚ್ಚಿನ ಸಲ ಖಾದಿ ಬಟ್ಟೆಯೇ ಆಗಿರುವುದಿಲ್ಲ. ಅದು ಯಾವುದೋ ಗಿರಣಿಯ ಬಟ್ಟೆ ಆಗಿರುತ್ತದೆ. ಗ್ರಾಹಕರು ತಾವು ನೀಡಿದ ಹಣ ಶ್ರಮ ಜೀವಿಯೊಬ್ಬನಿಗೆ ಹೋಗುತ್ತಿದೆ ಎಂದು ಭಾವಿಸಿದ್ದರೆ ಅದು ಒಬ್ಬ ಬಂಡವಾಳಶಾಹಿಗೆ ಹೋಗುತ್ತಿರುತ್ತದೆ. ಇತ್ತ ಬಡ ನೇಕಾರನೊಬ್ಬ ತಾನು ತಯಾರಿಸಿದ ಅಸಲಿ ಖಾದಿಬಟ್ಟೆಯನ್ನು ಮಾರಲು ಹರಸಾಹಸ ಮಾಡಿ ಕಡೆಗೆ ಸೋತು ಸುಣ್ಣವಾಗುತ್ತಿರುತ್ತಾನೆ. ಅಸಲಿ ಚಿನ್ನವೆಂದು ಗಿಲೀಟು ಚಿನ್ನವನ್ನು ಮಾರಲಾಗುತ್ತಿದೆ.

ಇತ್ತ ಖಾದಿ ಸಂಸ್ಥೆಗಳಲ್ಲಿ ಕೆಲಸಗಾರರನ್ನು ಗಣನೆಗೇ ತೆಗೆದು ಕೊಳ್ಳಲಾಗುವುದಿಲ್ಲ. ಆಡಳಿತ ಮಂಡಳಿ ತಾನು ಕೆಲಸಗಾರರಿಗೆ ಉದ್ಯೋಗ ನೀಡಿ ಅವರಿಗೆ ಜೀವನ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೇನೆಂಬ ಅಹಂಕಾರದಿಂದ ಮೆರೆಯುತ್ತಿದ್ದರೆ, ಅತ್ತ ಕೆಲಸಗಾರರು ನಮಗೂ ಸಂಸ್ಥೆಗೂ ಏನೇನೂ ಸಂಬಂಧವಿಲ್ಲ, ನಾವು ಕೆಲಸ ಮಾಡಿ ಕೂಲಿ ಪಡೆದು ಮನೆಗೆ ಹೋದರೆ ಮುಗಿಯಿತು ಎಂಬ ಮನೋಭಾವದಲ್ಲಿ ಇದ್ದಾರೆ. ನೇಯ್ಗೆ ಗುಣಮಟ್ಟ ಹೆಚ್ಚಿಸಲು, ವೈವಿಧ್ಯತೆ ತರಲು ಅವರು ಮಾನಸಿಕವಾಗಿ ತಯಾರಿಲ್ಲ. ಪರಸ್ಪರ ಅಪನಂಬಿಕೆ, ಅಗೌರವ, ಶೀತಲಯುದ್ಧದ ವಾತಾವರಣ ಹೆಚ್ಚಿನ ಸಂಸ್ಥೆಗಳಲ್ಲಿ ಕಂಡು ಬರುತ್ತದೆ. ಸಂಸ್ಥೆಗಳು ಬಹುವಾಗಿ ಸರ್ಕಾರದ ಮೇಲೆ ಆರ್ಥಿಕ ಅವಲಂಬನೆ ಹೊಂದಿರುವುದರಿಂದ ಸರ್ಕಾರ, ಸಂಸ್ಥೆಯ ಆಡಳಿತ ಮಂಡಳಿಯ ಕೈ ಕಾಲುಗಳನ್ನು ಕಟ್ಟಿ ಹಾಕಿರುತ್ತದೆ. ಒಟ್ಟಾರೆಯಾಗಿ ಖಾದಿ ಎಲ್ಲೋ ಕಳೆದು ಹೋಗಿದೆ.

ಇಂತಹ ಪರಿಸ್ಥಿತಿಯಲ್ಲಿ ನಿಸ್ತೇಜವಾಗಿರುವ, ನೈತಿಕತೆಯಲ್ಲಿ ದಿವಾಳಿ ಎದ್ದಿರುವ ಖಾದಿ ಉದ್ಯಮವನ್ನು ಖಾದಿ ವಿಚಾರಕ್ಕೆ ಹೆಚ್ಚು ಹತ್ತಿರವಾಗಿ ನಡೆಸುವ ಪ್ರಯತ್ನವನ್ನು ಜನಪದ ಸೇವಾ ಟ್ರಸ್ಟ್ ಹಲವು ದಶಕಗಳಿಂದ ಮಾಡುತ್ತಾ ಬಂದಿದೆ. ಕೆಲಸಗಾರರ ಮನವೊಲಿಸುವುದು, ಅವರಲ್ಲಿ ಸಂಸ್ಥೆಯ ಬಗ್ಗೆ, ಪರಸ್ಪರ ಕೆಲಸಗಾರರ ಬಗ್ಗೆ ಪ್ರೀತಿ, ವಿಶ್ವಾಸ ಮತ್ತು ಗೌರವವನ್ನು ಉಂಟು ಮಾಡಿ ಒಗ್ಗಟ್ಟನ್ನು ಉಂಟುಮಾಡುವುದು ಸವಾಲಿನ ಕೆಲಸವೇ ಆಗಿದೆ. ಬಡವ-ಶ್ರೀಮಂತ, ಅಕ್ಷರಸ್ಥ-ಅನಕ್ಷರಸ್ಥ ಎಂಬ ಭೇದಭಾವವಿಲ್ಲದೆ ಎಲ್ಲರಲ್ಲೂ ಇರುವ ಅಹಂಕಾರ, ಅಸಹಿಷ್ಣುತೆ, ಸುಳ್ಳುತನ, ನಾನು ಸರಿ- ನೀನು ಸರಿಯಿಲ್ಲ ಎಂಬ ಭಾವ, ಜವಾಬ್ದಾರಿಯಿಂದ ನುಣುಚಿಕೊಳ್ಳುವ ಬುದ್ಧಿ, ಇವುಗಳನ್ನು ದೂರಮಾಡುವ ಕೆಲಸವನ್ನು ಜನಪದ ಖಾದಿ ಮಾಡತೊಡಗಿದೆ. ಸಂಸ್ಥೆಯು ಖಾದಿ ಚಟುವಟಿಕೆಯನ್ನು ಸಂಪೂರ್ಣವಾಗಿ ಪಾರದರ್ಶಕಗೊಳಿಸಿ, ಅದರ ಲಾಭ ನಷ್ಟಕ್ಕೆ ಆಡಳಿತ ಮಂಡಳಿಯಿಂದ ಹಿಡಿದು, ಕಡೆಯ ಕೆಲಸಗಾರರವರೆಗೆ ಎಲ್ಲರನ್ನೂ ಜವಾಬ್ದಾರಿ ಮಾಡಲಾಗಿದೆ. ಹಣವನ್ನು ತೊಡಗಿಸದೆ ಕೆಲಸಗಾರರು ಸಂಸ್ಥೆಯ ಬಗ್ಗೆ ಎಷ್ಟೇ ಒಳ್ಳೆಯ ಮಾತನಾಡಿದರೂ ಅವರು ಸಂಸ್ಥೆಯನ್ನು ಬಹಳ ಗಂಭೀರವಾಗಿ ಸ್ವೀಕರಿಸಿರುವುದಿಲ್ಲವೆಂಬುದು ಸತ್ಯ. ಹಾಗಾಗಿ ಖಾದಿ ಚಟುವಟಿಕೆ ಅಗತ್ಯವಿರುವ ದುಡಿಯುವ ಬಂಡವಾಳದಲ್ಲಿ ಮೂರನೇ ಒಂದು ಭಾಗವನ್ನು ಕೆಲಸಗಾರರು, ಮತ್ತೊಂದು ಮೂರನೇ ಒಂದು ಭಾಗವನ್ನು ಚಟುವಟಿಕೆಯ ಸಂಯೋಜಕರು ಮತ್ತು ಕಡೆಯ ಮೂರನೇ ಒಂದು ಭಾಗವನ್ನು ಜನಪದ ಸೇವಾ ಟ್ರಸ್ಟ್ ತೊಡಗಿಸಿತು. ಬರುವ ಲಾಭವನ್ನು ಪ್ರತಿಯೊಬ್ಬರೂ ತೊಡಗಿಸಿರುವ ಬಂಡವಾಳಕ್ಕೆ ಸಮಾನುಪಾತದಲ್ಲಿ ಹಂಚುವ ವ್ಯವಸ್ಥೆ ಮಾಡಲಾಯಿತು. ಇದರಿಂದಾಗಿ ಕೆಲಸಗಾರರು ತಮ್ಮ ಪಾಲ್ಗೊಳ್ಳುವಿಕೆಯನ್ನು ಗಂಭೀರವಾಗಿ ಸ್ವೀಕರಿಸತೊಡಗಿದರು. ಕನಿಷ್ಠ ವೇತನ ಪಡೆಯುವ ಕೆಲಸಗಾರರಿಗೂ ಮತ್ತು ಗರಿಷ್ಠ ವೇತನ ಪಡೆಯುವವರಿಗೂ ಇರುವ ವೇತನ ವ್ಯತ್ಯಾಸದ ಅನುಪಾತ

(೭ನೇ ಪುಟಕ್ಕೆ

‘ಪರ್ಯಾಯ ಜೀವನ ಪದ್ಧತಿ’ ಕುರಿತ ಕುಪ್ಪಳಿ ಅಧ್ಯಯನ ಶಿಬಿರದ ಉಪನ್ಯಾಸ–೬

ಮಾನವತೆಯ ಬೆಳೆ ತೆಗೆಯುವ ಕೃಷಿ

–ಮಲ್ಲಿಕಾರ್ಜುನ ಹೊಸಪಾಳ್ಯ

“ಬದಲಾದ ಕಾಲಘಟ್ಟದಲ್ಲಿ ನಮ್ಮ ಬದುಕಿನ ರೀತಿ-ನೀತಿಗಳು ವ್ಯತ್ಯಾಸವಾಗಿವೆ. ಕೃಷಿ ಮತ್ತು ಕೃಷಿಕನ ವ್ಯಾಖ್ಯಾನವೇ ಮಾರ್ಪಾಟಾಗಿದೆ. ಪರಸ್ಪರ ಸಂಬಂಧಗಳೇ ಬದಲಾಗಿ ಹೋಗಿವೆ. ಇವೆಲ್ಲದರ ಪರಿಣಾಮವಾಗಿ ಕೃಷಿ ಆಚರಣೆಗಳೂ ಸಹ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿವೆ ಹಾಗೂ ಎಷ್ಟೋ ಕಣ್ಮರೆಯಾಗಿ ಹೋಗಿವೆ. ಬಿತ್ತನೆಗೆ ಟ್ರಾಕ್ಟರ್ ಬಂದಾಗ ನೇಗಿಲು ಪೂಜೆಗೆ ಜಾಗವೆಲ್ಲಿ? ರಾಗಿ ಬೆಳೆಯೇ ಇಲ್ಲದಿರುವಾಗ ಕರಿಬಂಟನ ಪೂಜೆಯ ಅಗತ್ಯವೇನು? ಒಕ್ಕಣೆಯು ರಸ್ತೆಗೆ ಬಂದಾಗ ಇಲ್ಲವೇ ಒಕ್ಕಣೆ ಯಂತ್ರ ಬಳಸಿದಾಗ ಕಣದ ಪೂಜೆ, ರಾಶಿ ಪೂಜೆಗಳನ್ನು ಮಾಡುವುದು ಹೇಗೆ? ದೇಸೀ ದನ-ಕರುಗಳೇ ಇಲ್ಲದಿರುವಾಗ ಸಂಕ್ರಾಂತಿ ಸಡಗರ ಎಲ್ಲಿಯದು?”



ಸಾಂಪ್ರದಾಯಿಕ ಕೃಷಿ ಬದುಕು ನಿಸರ್ಗಧರ್ಮಕ್ಕೆ ಪೂರಕವಾಗಿತ್ತು. ಹಾಗಾಗಿಯೇ ಅಲ್ಲಿ ಮಾನವತೆ ಸಹಜವಾಗಿಯೇ ಅಂತರ್ಗತವಾಗಿತ್ತು. ಮನುಷ್ಯರನ್ನು ಪರಸ್ಪರ ಬೆಸೆಯುವ ಕೊಂಡಿಗಳು ಅಲ್ಲಿ ಹೇರಳವಾಗಿದ್ದವು. ಆದರೆ ಯಾವಾಗ ಕೃಷಿಯ ಮೇಲೆ ಕೈಗಾರಿಕೋತ್ಪನ್ನಗಳ ದಾಳಿ ಪ್ರಾರಂಭವಾಯಿತೋ ಅಲ್ಲಿಂದ ಭೂಮಿಗೆ ವಿಷ ಉಣಿಸುವುದು ಹೆಚ್ಚಾಯಿತು. ಭೂಮಿಯ ಜೈವಿಕ ಸತ್ವ ನಾಶವಾಗುತ್ತಾ ಬಂತು. ಬಹುಬೆಳೆಗಳ ಜಾಗದಲ್ಲಿ ಏಕಬೆಳೆ ಬೆಳೆಯುವುದು ಜಾಸ್ತಿಯಾಯಿತು. ದನಕುರಿ ಹಸಿರು ಮೆಕ್ಕಲು ಮಣ್ಣುಗಳ ಜೈವಿಕ ಗೊಬ್ಬರದ ಜಾಗದಲ್ಲಿ ಕಾರ್ಖಾನೆಯ ಬೂದಿಗೊಬ್ಬರ ಬಂತು. ಹಸಿರು ಬೇಲಿ ಜಾಗದಲ್ಲಿ ಕಲ್ಲುಕಂಬ ಮುಳ್ಳು ತಂತಿಗಳು ಬಂದುವು. ಭೂವೈಲಕ್ಷಣ್ಯದ ಅಗತ್ಯತೆಗನುಗುಣವಾಗಿ ಬೆಳೆಯುತ್ತಿದ್ದ ನೆಲಮೂಲ ತಳಿಗಳ ಜಾಗದಲ್ಲಿ ಅಧಿಕ ಇಳುವರಿಯ ಹೈಬ್ರಿಡ್ ತಳಿಗಳು ಬಂದುವು. ನೆಲಬಾವಿಯ ಜಾಗದಲ್ಲಿ ಸಾವಿರಾರು ಅಡಿ ಆಳದ ಬೋರು ಸಂಸ್ಕೃತಿ ಬಂದಿತು. ಇದೆಲ್ಲದರ ಪರಿಣಾಮ ನೆಲದ ಜೈವಿಕ ಸತ್ವ ನಾಶವಾಯಿತು. ಭೂಮಿಯ ಅಂತರ್ಜಲ ಬತ್ತಿಹೋಯಿತು. ಜೈವಿಕ ಸರಪಳಿಯಲ್ಲಿ ವ್ಯತ್ಯಯವಾಗತೊಡಗಿತು. ಕಾಮಧೇನುವಿನಂತಿದ್ದ ಭೂಮಿ ಕಾರ್ಖಾನೆಯ ಹೊಗೆ ದಂಧೆಗೆ ಬಲಿಹೋಯಿತು. ಭೂಮಿಯ ಜೈವಿಕ ಸತ್ವ ಜೀವಂತವಾಗಿದ್ದಾಗ ಸಾಂಪ್ರದಾಯಿಕ ಕೃಷಿ ಸಂಸ್ಕೃತಿಯ ಸೃಜನಶಕ್ತಿಯೂ ಸಮೃದ್ಧಿಯಿಂದಿತ್ತು. ಭೂಮಿಯ ಜೈವಿಕ ಸತ್ವ ನಾಶವಾದಂತೆ ವ್ಯವಸಾಯ ಸಂಸ್ಕೃತಿಯ ಸೃಜನಶೀಲತೆಯೂ ನಾಶವಾಗುತ್ತಾ ಹೋಯಿತು. ಇಂದು ಭೂಮಿಯಲ್ಲಿ ನಿಸರ್ಗಧರ್ಮ ವ್ಯವಸಾಯ ಸಂಸ್ಕೃತಿಯ ಸಹಯೋಗ ತಪ್ಪಿ ಹೋಗಲು ಕಾರಣ ಮನುಷ್ಯನೇ ಆಗಿದ್ದಾನೆ. ಭೂಮಿಯನ್ನು ಪಾಲಿಸುವ ತವರು ಎಂದು ಭಾವಿಸದೆ ತನ್ನ ಸ್ವಾರ್ಥಕ್ಕೆ ಬೇಕಾದ ಸಂಪತ್ತು ಎಂದು ಗಣಿಸಿರುವುದು ಬದುಕಿನ ದುರಂತ ವ್ಯಂಗ್ಯ.

ನಮ್ಮ ಕೃಷಿ ಆಚರಣೆಗಳನ್ನು ಗಮನಿಸಿದರೆ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಸಾವಿರಾರು ವರ್ಷಗಳಿಂದ ನಮ್ಮ ಗ್ರಾಮೀಣ ಸಮುದಾಯದ ದಿನ ನಿತ್ಯದ ಬದುಕಿನಲ್ಲಿ ಕೃಷಿ ಆಚರಣೆಗಳು ಹಾಸುಹೊಕ್ಕಾಗಿದ್ದವು. ಇವು ನಮ್ಮ ಒಕ್ಕಲು ಮಕ್ಕಳ ವೈವಿಧ್ಯಪೂರ್ಣ ಬದುಕಿನ ದರ್ಶನ ಮಾಡಿಸುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಆಚರಣೆಯ ವಿಧಾನಗಳಲ್ಲಿ ಬದಲಾವಣೆಯಿರಬಹುದು, ಆದರೆ ಉದ್ದೇಶ ಮಾತ್ರ ಒಂದೇ.

ನಮ್ಮ ರಾಜ್ಯ ವೈವಿಧ್ಯಮಯ ಭೂಪ್ರದೇಶವನ್ನು ಹೊಂದಿದೆ. ಅದಕ್ಕನುಗುಣವಾಗಿಯೇ ಕೃಷಿ ಪದ್ಧತಿಗಳೂ ಸಹ ರೂಪುಗೊಂಡಿವೆ. ಒಂದೊಂದು ಪ್ರದೇಶಕ್ಕೂ ವಿಭಿನ್ನ ಹವಾಮಾನ, ಮಳೆಗಾಲ, ವಿಭಿನ್ನ ಬೆಳೆಗಳು ಮತ್ತು ಬೆಳೆ ಪದ್ಧತಿಗಳಿದ್ದು ಬೆಳೆ ಇಡುವ ಕಾಲಮಾನದಲ್ಲೂ ಸಹ ಭಿನ್ನತೆ ಇರುವುದನ್ನು ಕಾಣಬಹುದು. ಮಣ್ಣಿನಗುಣ ಸ್ವಭಾವದಲ್ಲೂ ಸಹ ಇದೇ ಪರಿಸ್ಥಿತಿಯಿದೆ.

ಕೃಷಿ ಆಚರಣೆಗಳು ಕೃಷಿಕರ ನಿಸರ್ಗಾರಾಧನೆ ಎಂಬ ಮಾತು ನೂರಕ್ಕೆ ನೂರರಷ್ಟು ಸತ್ಯ. ಏಕೆಂದರೆ ಬೀಜ ಬಿತ್ತನೆಯಿಂದ ಮೊದಲುಗೊಂಡು ಬೆಳೆ ಕಟಾವಾಗಿ, ಒಕ್ಕಣೆಯಾಗಿ ಕಾಳು ಮನೆಗೆ ಬರುವ ಪ್ರತಿಯೊಂದು ಹಂತದಲ್ಲೂ ಆಚರಣೆಗಳಿವೆ. ಈ ಆಚರಣೆಗಳ ಚಕ್ರದ ಮೇಲೆಯೇ ಕೃಷಿಕರ ಬದುಕು ಸಾಗುತ್ತಾ ಬರುತ್ತದೆ. ಜನಪದ ಬದುಕಿನ ಬಹುಭಾಗವನ್ನು ಆವರಿಸಿರುವ ಈ ಆಚರಣೆಗಳು ಋತುಮಾನಕ್ಕನುಗುಣವಾಗಿ ಬಳಕೆಯಲ್ಲಿವೆ. ಕೃಷಿ ಸಂಸ್ಕೃತಿಯ ಮುಖ್ಯ ಅಂಗವಾಗಿ ಸಾಗಿ ಬಂದಿರುವ ಈ ಆಚರಣೆಗಳು ಕೃಷಿಕರ ಬದುಕಿನ ರಕ್ಷಣೆಯ ಹೊಣೆಯನ್ನೂ ಹೊತ್ತು ನಿಂತಿದ್ದವು. ಹೇಗೆಂದರೆ, ಈ ಕೃಷಿ ಆಚರಣೆಗಳು ಊರೊಗ್ಗಟ್ಟಿನ ಸಂಕೇತ. ಅದಕ್ಕಿಂತಲೂ ಮಿಗಿಲಾಗಿ ಇವು ಕೃಷಿಕರನ್ನು ಭೂಮಿ, ಮಳೆ, ಜಾನುವಾರು, ಬೀಜ ಮತ್ತು ಪ್ರಕೃತಿಯ ಇತರೆಲ್ಲಾ ಅಂಗಗಳೊಂದಿಗೆ ಗಾಢ ಸಂಬಂಧವನ್ನು ಬೆಸೆಯುವ ಕೊಂಡಿಗಳು. ಒಂದು ಗ್ರಾಮ, ಸುತ್ತಲ ಹತ್ತೆಂಟು ಹಳ್ಳಿಗಳು, ಆ ಮೂಲಕ ಒಟ್ಟು ಸಮಾಜದ ಸಮಗ್ರತೆಯನ್ನು ಕಾಯ್ದುಕೊಳ್ಳುವಲ್ಲಿ ಆಚರಣೆಗಳ ಪರಿಕಲ್ಪನೆ ಪೂರಕವಾಗಿರುವುದು ಗಮನಿಸಬೇಕಾದ ಅಂಶ. ಅಷ್ಟೇ ಅಲ್ಲದೆ ಇವು ಹಿರಿಯರ ಬೇಸಾಯ ಜ್ಞಾನ, ಶ್ರದ್ಧೆ–ನಂಬಿಕೆಗಳು, ಸಮಷ್ಟಿ ಪ್ರಜ್ಞೆಗಳು ಕಿರಿಯ ತಲೆಮಾರುಗಳಿಗೆ ಕೈಬದಲಾಗುವ ಮಾರ್ಗಗಳೂ ಹೌದು.

ಬೇಸಾಯದಲ್ಲಿ ಅನಿರೀಕ್ಷಿತವಾಗಿ ಬರುವ ನೈಸರ್ಗಿಕ ವಿಕೋಪಗಳಿಗೆ ಪರಿಹಾರವಾಗಿ ನಮ್ಮ ಪೂರ್ವಿಕರು ವಿವಿಧ ಆಚರಣೆಗಳನ್ನು ಪ್ರಾರಂಭಿಸಿದರು. ಜೊತೆಗೆ ಕಣಜ ತುಂಬುವಷ್ಟು ಕಾಳು ನೀಡಿದ ಪ್ರಕೃತಿಗೆ ಧನ್ಯವಾದ ಸಲ್ಲಿಸುವ ವಿಧಾನವಾಗಿಯೂ ಸಹ ಆಚರಣೆಗಳು ಬೆಳೆದು ಬಂದವು. ಬೆಳೆ ನಷ್ಟವಾದಂತಹ ಮತ್ತು ಉತ್ತಮ ಫಸಲು ಬಂದ ಎರಡೂ ಸಂದರ್ಭಗಳಲ್ಲಿ ಕೃಷಿ ಆಚರಣೆಗಳಿರುವುದನ್ನು ಕಾಣಬಹುದು.

ಕೃಷಿ ಆಚರಣೆಗಳ ಜೊತೆಗೆ ಗ್ರಾಮೀಣ ಜಾತ್ರೆ, ಪರಿಷೆ, ಪರೋವು, ಹರಿಸೇವೆ, ಬೆಳದಿಂಗಳಪ್ಪನ ಪೂಜೆ, ಮರಿ ಕಡಿಯುವುದು, ಕೊಂಡ ತುಳಿಯುವುದು ಮುಂತಾದ ಸಾಮುದಾಯಿಕ ಹಬ್ಬಗಳು, ಕೋಲಾಟ, ಬಯಲಾಟ, ಮೂಡಲಪಾಯ, ಅರೆ ಬಡಿಯುವುದು, ತಮಟೆ ಹಾಕುವುದು, ಬಾಬಯ್ಯನ ಹಬ್ಬ ಇತ್ಯಾದಿ ವೈವಿಧ್ಯಮಯ ಜಾನಪದ ಕಲೆಗಳು ಮಕ್ಕಳು ಮರಿ, ಯುವಕರು, ಹಿರಿಯರು, ಹೆಣ್ಣುಮಕ್ಕಳು, ಕೂಲಿಕಾರರು, ಹಲವು ಸ್ತರದ, ಹಲವು ಜಾತಿಯ ಜನಗಳನ್ನು ಹತ್ತಾರು ದಿನ ಒಂದೇ ಕಡೆ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತಿದ್ದವು. ಪರಸ್ಪರ ಅರಿತುಕೊಳ್ಳುವ ವೇದಿಕೆಗಳಾಗಿದ್ದವು.

ಆದರೆ...

ಬದಲಾದ ಕಾಲಘಟ್ಟದಲ್ಲಿ ನಮ್ಮ ಬದುಕಿನ ರೀತಿ–ನೀತಿಗಳು ವ್ಯತ್ಯಾಸವಾಗಿವೆ. ಕೃಷಿ ಮತ್ತು ಕೃಷಿಕನ ವ್ಯಾಖ್ಯಾನವೇ ಮಾರ್ಪಾಟಾಗಿದೆ. ಪರಸ್ಪರ ಸಂಬಂಧಗಳೇ ಬದಲಾಗಿ ಹೋಗಿವೆ. ಇವೆಲ್ಲದರ ಪರಿಣಾಮವಾಗಿ ಕೃಷಿ ಆಚರಣೆಗಳೂ ಸಹ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿವೆ ಹಾಗೂ ಎಷ್ಟೋ ಕಣ್ಮರೆಯಾಗಿ ಹೋಗಿವೆ. ಬಿತ್ತನೆಗೆ ಟ್ರಾಕ್ಟರ್ ಬಂದಾಗ ನೇಗಿಲು ಪೂಜೆಗೆ ಜಾಗವೆಲ್ಲಿ? ರಾಗಿ ಬೆಳೆಯೇ ಇಲ್ಲದಿರುವಾಗ ಕರಿಬಂಟನ ಪೂಜೆಯ ಅಗತ್ಯವೇನು? ಒಕ್ಕಣೆಯು ರಸ್ತೆಗೆ ಬಂದಾಗ ಇಲ್ಲವೇ ಒಕ್ಕಣೆಯಂತ್ರ ಬಳಸಿದಾಗ ಕಣದ ಪೂಜೆ, ರಾಶಿ ಪೂಜೆಗಳನ್ನು ಮಾಡುವುದು ಹೇಗೆ? ದೇಸೀ ದನ–ಕರುಗಳೇ ಇಲ್ಲದಿರುವಾಗ ಸಂಕ್ರಾಂತಿ ಸಡಗರ ಎಲ್ಲಿಯದು?

ಇನ್ನು ಕಂಬಳ, ಹುತ್ತರಿ, ದೀಪಾವಳಿ ಮುಂತಾದ ಆಚರಣೆಗಳು ತನ್ನ ಮೂಲ ಅರ್ಥ, ಸ್ವರೂಪವನ್ನು ಕಳಚಿಕೊಂಡಿವೆ. ತಿರುಳು ಹೋಗಿ ಬರೀ ಸಿಪ್ಪೆ ಉಳಿಯಿತು ಎಂಬಂತಾಗಿದೆ. ಅವುಗಳಿಗೂ ರಾಜಕೀಯ ಲೇಪ ಅಂಟಿಕೊಂಡುಬಿಟ್ಟಿದೆ. ಆಚರಣೆಗಳಿಗೂ ಗ್ರಾಮೀಣ ಕಸುಬುಗಳಿಗೂ ಅಂತರ್ ಸಂಬಂಧವಿದೆ. ಉದಾಹರಣೆಗೆ ಕರಿಬಂಟನ ಆಚರಣೆಗೆ ಉಬ್ಬೆ, ಕಮ್ಮಾರ ಮತ್ತು ಕುಂಬಾರನ ಮನೆ ಬೂದಿಗಳು ಅಗತ್ಯ ಬೇಕು. ಆ ಕಸುಬುಗಳೇ ಇಂದು ನಶಿಸಿವೆ. ಇದರ ಪರಿಣಾಮ ಕರಿಬಂಟನ ಆಚರಣೆಯ ಮೇಲೆ ಖಂಡಿತ ಉಂಟಾಗಿದೆ. ಆಟಿಕಳೆಂಜ ವೇಷ ಹಾಕುವವರು ಕೆಳ ವರ್ಗದ ಜನ, ಆದರೆ ಅವರ ಸಾಮಾಜಿಕ ಜೀವನದಲ್ಲುಂಟಾದ ಪಲ್ಲಟದಿಂದಾಗಿ ಅವರು ಆ ವೇಷ ಹಾಕಲು ಹಿಂಜರಿಯುತ್ತಿದ್ದಾರೆ.


ಹಿಂದೆ ಶಾಲೆಗಳಲ್ಲಿ ಶಿಕ್ಷಕರು ವಾರ, ತಿಂಗಳು, ಋತು, ಸಂವತ್ಸರ ಹಾಗೆಯೇ ಮಳೆಯ ಹೆಸರುಗಳನ್ನೂ ಕಂಠಪಾಠ ಮಾಡಿಸುತ್ತಿದ್ದರು. ಪ್ರತಿಯೊಬ್ಬ ರೈತನ ಮಕ್ಕಳಿಗೂ ಅದು ಮನೆಪಾಠವಾಗಿತ್ತು. ಆಡು ಮಾತಿನ ಗಾದೆಗಳು, ನುಡಿಗಟ್ಟುಗಳು, ಮಳೆಗಳ ಸ್ವರೂಪ, ಬೆಳೆಯ ಪ್ರಮಾಣ ಇತ್ಯಾದಿ ಸಂಗತಿಗಳನ್ನು ತಿಳಿಸುತ್ತಿದ್ದವು. ಇಂದು ಯಾವ ಮಕ್ಕಳಿಗೂ ಮಳೆಯ ಹೆಸರು ಸಂವತ್ಸರ ಗೊತ್ತೇ ಇರುವುದಿಲ್ಲ. ಶಿಕ್ಷಣ ನೆಲಮೂಲ ಜ್ಞಾನವನ್ನು ಹೇಗೆ ತಿರಸ್ಕರಿಸುತ್ತದೆ ಎಂಬುದಕ್ಕೆ ಇವೆಲ್ಲ ಜ್ವಲಂತ ನಿದರ್ಶನಗಳು. ಗಾಳಿ ವಾಸನೆಯಲ್ಲಿ, ಮೋಡದ ಚಲನೆಯ ಗತಿಯಲ್ಲಿ, ಪ್ರಾಣಿಪಕ್ಷಿಗಳ ಚಲನವಲನದ ವರ್ತನೆಯಲ್ಲಿ ಮಳೆಯ ಬರುವಿಕೆಯನ್ನು ಗ್ರಹಿಸುತ್ತಿದ್ದ ಜನಪದ ಲೋಕ ಇಂದು

(೧೦ನೇ ಪುಟಕ್ಕೆ

ಭಾರತವನ್ನು ಅಸಮಾನತೆಯತ್ತ ಕೊಂಡೊಯ್ಯುತ್ತಿರುವ ಹಿಂದೂ ರಾಷ್ಟ್ರೀಯತೆ

–ನಿಸ್ಸಿಮ್ ಮನ್ನತ್ತುಕ್ಕಾರನ್

‘ರಾಷ್ಟ್ರೀಯತೆ’ಯ ಮೂಲ ಕಲ್ಪನೆಗೇ ವಿರುದ್ಧವಾಗಿ ರೂಪುಗೊಂಡಿರುವ ಇಂದಿನ ಹಿಂದೂ ರಾಷ್ಟ್ರೀಯತೆಯು ತನ್ನ ಹುಟ್ಟು ಲಕ್ಷಣಗಳಿಂದಾಗಿಯೇ, ದೇಶದ ಜನತೆಯನ್ನು ಒಂದು ಸಮಾನತೆಯ ಗುರಿಯತ್ತ ಒಯ್ಯುವ ರಾಷ್ಟ್ರೀಯತೆ ಎಂಬ ಪರಿಕಲ್ಪನೆಯ ಮೂಲ ಉದ್ದೇಶವನ್ನೇ ಕಳೆದುಕೊಂಡು ಹಲವು ಸ್ತರಗಳ ವಿಷಮತೆಗಳಿಗೆ ಕಾರಣವಾಗುತ್ತಿರುವ ಬಗೆಯನ್ನು ಈ ಬರಹ ಸವಿವರವಾಗಿ ನಿರೂಪಿಸುತ್ತದೆ-ಸಂ.



ರಾಷ್ಟ್ರವನ್ನು ಒಂದು ‘ಕಲ್ಪಿತ ಸಮುದಾಯ’ ಎಂದು ಕರೆಯಲಾಗಿರುವುದು ಏಕೆಂದರೆ ಪ್ರತಿಯೊಂದು ರಾಷ್ಟ್ರೀಯತೆಯ ಒಳಗೂ ವಾಸ್ತವದಲ್ಲಿ ಇರಬಹುದಾದ ಅಸಮಾನತೆ, ಶೋಷಣೆಗಳ ಹೊರತಾಗಿಯೂ ಅದನ್ನು ಒಂದು ಆಳವಾದ ಸಮಾನ ಸಂಗಾತಿತನ ಎಂಬುದಾಗಿ ಗ್ರಹಿಸುವುದರಿಂದ” – **ಬೆನೆಡಿಕ್ಟ್ ಆ್ಯಂಡರ್ಸನ್** “ಕಾಶಿಯಿಂದ ಕೊಯಮತ್ತೂರಿನವರೆಗೆ ಶಿವ ಪ್ರಭುವು ಎಲ್ಲೆಲ್ಲೂ ಇದ್ದಾನೆ”– **ನರೇಂದ್ರ ಮೋದಿ** ಫೆ. ೨೪, ೨೦೧೭

“ಈಗ ಜಗತ್ತಿನಲ್ಲಿ ಅತಿ ಹೆಚ್ಚು ಅಸಮಾನತೆಯಿರುವ ದೇಶಗಳಲ್ಲಿ ಭಾರತವೂ ಒಂದು” – **ಜಾಗತಿಕ ಅಸಮಾನತೆ ವರದಿ, ೨೦೨೨**

ಯೂರೋಪಿಯನ್ ಭಾಷಿಕ ರಾಷ್ಟ್ರೀಯತೆಗಳ ಉದಯದೊಂದಿಗೆ, ರಾಷ್ಟ್ರವೆಂಬುದು, ಧಾರ್ಮಿಕ ಸಮುದಾಯಗಳ ಗಡಿಗೆರೆಗಳನ್ನು ಮೀರುವ ಒಂದು ಹೊಸ ಧರ್ಮನಿರಪೇಕ್ಷ, ರಾಜಕೀಯ ಸಮುದಾಯವಾಗಿದೆ ಎಂದು ವಿದ್ವಾಂಸ ಬೆನಡಿಕ್ಟ್ ಆಂಡರ್ಸನ್ ಅವರು ವಾದಿಸಿರುವುದು ಪ್ರಖ್ಯಾತವಾಗಿದೆ. ಆದರೆ, ಸದ್ಯದ ಭಾರತದಲ್ಲಿ ರಾಷ್ಟ್ರವೆಂಬುದು ಬದಲಾಯಿಸಲಾಗದಂತೆ ಬೇರೂರಿರುವ ಒಂದು ಧಾರ್ಮಿಕ ಸಮುದಾಯವಾಗಿದೆ.

ವಿಪರ್ಯಾಸ ಏನೆಂದರೆ ಈ ಕಲ್ಪಿತ ಧಾರ್ಮಿಕ ಸಮುದಾಯವು ತೀವ್ರ ಅಸಮಾನತೆಗಳಿಂದ ತುಂಬಿತುಳುಕುತ್ತಿದ್ದು, ಅದರ ಉಬ್ಬರ ತಗ್ಗುವ ಯಾವ ಲಕ್ಷಣಗಳೂ ಕಂಡುಬರದಿರುವುದು. ವಾಸ್ತವದಲ್ಲಿ ಆಧ್ಯಾತ್ಮಿಕವೆಂದು ಕರೆಯಲ್ಪಡುವ ಪಂಗಡವು ಅಂಚಿಗೆ ತಳ್ಳಲ್ಪಟ್ಟ ಬಹಳಷ್ಟು ದುರ್ಬಲ ವರ್ಗಗಳ ಬಗ್ಗೆ ನಿರ್ಲಕ್ಷ್ಯ ಹೊಂದಿರುವುದು ಮಾತ್ರವಲ್ಲದೆ, ಅದು ಪ್ರಾಪಂಚಿಕ ಮತ್ತು ಭೌತಿಕ ಶ್ರೇಣೀಕರಣವನ್ನು ಮರೆಮಾಚಲು ಇರುವ ಮುಖವಾಡ ಕೂಡ ಆಗಿಬಿಟ್ಟಿದೆ.

ಇತ್ತೀಚೆಗೆ ಬಿಡುಗಡೆಯಾದ ೨೦೨೨ರ ಜಾಗತಿಕ ಅಸಮಾನತಾ ವರದಿಯ ಪ್ರಕಾರ ಭಾರತದಲ್ಲಿ, ಕೆಳಗಿನ ೫೦% ಜನರ ವಾರ್ಷಿಕ ಸರಾಸರಿ ಆದಾಯ ೫೩,೬೧೦ ರೂ ಆಗಿದ್ದರೆ ಮೇಲಿನ ೧೦% ಜನ ಇವರಿಗಿಂತ ೨೦ ಪಟ್ಟು ಹೆಚ್ಚು ಆದಾಯ ಹೊಂದಿದ್ದಾರೆ (ಇದು ಜಗತ್ತಿನಲ್ಲೇ ಅತಿ ಹೆಚ್ಚಿನ ಅಂತರಗಳಲ್ಲೊಂದಾಗಿದೆ). ಅತಿ ಕಡಿಮೆ ಅಸಮಾನತೆ ಇರುವ ದೇಶಗಳಲ್ಲಿ ಈ ಅಂತರ ಕೇವಲ ಆರರಿಂದ ಎಂಟು ಪಟ್ಟಿನಷ್ಟರೊಳಗೇ ಇರುತ್ತದೆ.

ಭಾರತ ದೇಶವು ತನ್ನ ಧರ್ಮನಿರಪೇಕ್ಷತೆಯ ಮೇಲೆ ಇಂತಹ ನೇರ ದಾಳಿಯನ್ನು ಹಿಂದೆಂದೂ ಕಂಡಿಲ್ಲ. ದಿನವಿಡೀ ನಡೆಯುವ, ಧಾರ್ಮಿಕ ಸಮಾರಂಭಗಳಲ್ಲಿ ಧಾರ್ಮಿಕ ಉಡುಗೆಗಳನ್ನು ತೊಟ್ಟು ಪಾಲ್ಗೊಳ್ಳುವುದು ಪ್ರಧಾನಿಗಳ ದೈನಂದಿನ ಕಾರ್ಯಕ್ರಮವೇ ಆಗಿದೆ. ರಾಷ್ಟ್ರೀಯ ದೃಶ್ಯ ಮಾಧ್ಯಮಗಳಲ್ಲಿ ಅವು ಅಗತ್ಯವಾಗಿ ಪ್ರಸಾರವಾಗುತ್ತವೆ. ದೇವಸ್ಥಾನದ ಮುಖ್ಯಸ್ಥರು ಸರ್ಕಾರದ ಮುಖ್ಯಸ್ಥರಾಗಿರುವುದರಲ್ಲಿ ಯಾವ ಅಸಂಬದ್ಧತೆಯ ಕಾಣುವುದಿಲ್ಲ ಮತ್ತು ಅವರು ದೇವಸ್ಥಾನಗಳ ಜೀರ್ಣೋದ್ಧಾರವಾಗಬೇಕೆಂದು ಪತ್ರಿಕೆಗಳಲ್ಲಿ ಬರೆಯುವುದರಲ್ಲಿಯೂ, ಜನರಿಗೆ ಧಾರ್ಮಿಕ ಸೌಕರ್ಯ ಒದಗಿಸುವುದರಲ್ಲಿಯೂ ಕೂಡಾ ಯಾವ ಅಸಂಬದ್ಧತೆಯೂ ಕಾಣುವುದಿಲ್ಲ. ಅತ್ಯುನ್ನತ ರಾಜಕೀಯ ಕಾರ್ಯಕಾರಿಣಿಯ ಸದಸ್ಯರು ಅಲ್ಪಸಂಖ್ಯಾತರನ್ನು ಅವ್ಯಾಹತವಾಗಿ ರಾಕ್ಷಸೀಕರಿಸುವುದು, ಅಲ್ಪಸಂಖ್ಯಾತರನ್ನು ರಾಜಕೀಯ ಪ್ರಾತಿನಿಧ್ಯದಿಂದ ಹೊರಗಿಡುವುದು, ಪ್ರಭುತ್ವವನ್ನು ಧರ್ಮ(ಬಹುಸಂಖ್ಯಾತ)ದೊಂದಿಗೆ ಸಂಪೂರ್ಣವಾಗಿ ಬೆಸೆಯುವುದು ಮುಂತಾದುವುಗಳೂ ಕೂಡ ಇದರೊಂದಿಗೆ ಸೇರಿಕೊಳ್ಳುತ್ತವೆ.

ಇಲ್ಲಿ, ರಾಷ್ಟ್ರ ಮತ್ತು ಧರ್ಮಗಳು ಪರಸ್ಪರ ಅದಲು ಬದಲಾಗುವಂತಹವು. ಈ ರಾಷ್ಟ್ರೀಯತೆಯ ದಿಕ್ಕಿನಲ್ಲಿ ಸಜ್ಜುಗೊಳಿಸಲ್ಪಟ್ಟಿರುವ, ಪ್ರತ್ಯೇಕತಾವಾದಿ ಮತ್ತು ಮೂಲಭೂತವಾದಿ ಧರ್ಮನಿಷ್ಠತೆಗೆ ಹತ್ತಿರದ ನಂಟು ಹೊಂದಿರುವ ಸ್ಪಷ್ಟವಾಗಿ ಕಾಣುವ ಭಾವನೆಗಳೆಂದರೆ, ಕೋಪ ಮತ್ತು ಅಸಮಾಧಾನಗಳು. ಅಂಥ ರಾಷ್ಟ್ರೀಯತೆಯು ರಾಷ್ಟ್ರೀಯ ಗೌರವಕ್ಕೆ ಕುಂದುಂಟು ಮಾಡುವ, ಭಿನ್ನಮತವನ್ನು ದಮನ ಮಾಡುವ, ಹೊರಗಿನ ಮತ್ತು ಒಳಗಿನ ಶತ್ರುಗಳಿಗಾಗಿ ಸದಾ ಕಾಯುವ ಒಂದು ಉನ್ಮಾದ ಮತ್ತು ಭಾವೋದ್ರೇಕದ ಸ್ಥಿತಿಯಾಗಿರುತ್ತದೆ.

ಜನರಲ್ ಬಿಪಿನ್ ರಾವತ್ ಅವರ ಮರಣದ ಶೋಕಾಚರಣೆಯ ಸಮಯದಲ್ಲಿ ರಾಷ್ಟ್ರೀಯತೆಯ ಭಾವವು ಅತಿಶಯವಾಗಿ ಉಕ್ಕಿ ಹರಿಯಿತು. ‘ಅವಹೇಳನಕಾರಿ’ ಹೇಳಿಕೆಯ ಆರೋಪಕ್ಕೆ ಒಳಗಾದ ಜನ ಆಗ ಬಂಧನಕ್ಕೂ ಒಳಗಾದರು, ತಮ್ಮ ವರದಿಗಳ ತಲೆಬರಹದಲ್ಲಿ ಜನರಲ್ ರಾವತ್ ಅವರ ಹೆಸರನ್ನು ಅವರ ಗೌರವ ಸೂಚಕಗಳಿಲ್ಲದೆ ಛಾಪಿಸಿದ್ದಕ್ಕಾಗಿ ವೃತ್ತಪತ್ರಿಕೆಗಳು ಆಕ್ರೋಶಕ್ಕೆ ತುತ್ತಾದವು. ಇದೆಲ್ಲ ನಡೆದದ್ದು ಹಿಂದು ರಾಷ್ಟ್ರೀಯವಾದಿ ಸಂಸದರು ನಾಥೂರಾಮ್ ಗೋಡ್ಸೆಯನ್ನು ಪದೇ ಪದೇ ದೇಶಭಕ್ತನೆಂದು ಕರೆದರೂ ಅವರ ವಿರುದ್ಧ ಯಾವ ಕಾನೂನಿನ ಕ್ರಮವನ್ನೂ ಕೈಗೊಳ್ಳದೇ ಇದ್ದಂತಹ ಒಂದು ಪರಿಸ್ಥಿತಿಯಲ್ಲಿ.

ಸೈನಿಕತನ ಮತ್ತು ಸೇನೆಯ ವೈಭವೀಕರಣವೇ ಬಹುಸಂಖ್ಯಾತವಾದೀ ಉಗ್ರ ರಾಷ್ಟ್ರೀಯತೆಯ ನಿರ್ಣಾಯಕ ಅಂಶವಾಗಿರುವಾಗ ಇದು ಆಶ್ಚರ್ಯಕರವೇನಲ್ಲ. ಆದರೆ ಇದು ‘ತನ್ನ’ವರಿಗೂ ಕೂಡ ವಿನಾಯ್ತಿ ನೀಡುವುದಿಲ್ಲ ಎಂಬುದು ಇಲ್ಲಿನ ವಿಪರ್ಯಾಸ. ಹಾಗಾಗಿ ಹೆಲಿಕಾಪ್ಟರ್ ಪತನದಲ್ಲಿ ಮೃತರಾದ ಮತ್ತೊಬ್ಬ ಸೇನಾ ಅಧಿಕಾರಿಯ ದುಃಖತಪ್ತ ಮಗಳು, ಆಳುವ ಬಹುಸಂಖ್ಯಾತರ ದೃಷ್ಟಿಕೋನಕ್ಕೆ ಭಿನ್ನವಾದ ರಾಜಕೀಯ ನಿಲುವನ್ನು ಹೊಂದಿದ್ದಕ್ಕಾಗಿ ತೀವ್ರವಾದ ಆನ್‌ಲೈನ್ ಬೆದರಿಕೆಗೆ ಒಳಗಾಗಬೇಕಾಯಿತು. ಪ್ರೀತಿ, ಸಾಂತ್ವನ, ಕರುಣೆ ಇವರಿಗೆ ಸಂಪೂರ್ಣ ಪರಕೀಯ. ಅದು ಕಟ್ಟಾಜ್ಞೆಯ ರಾಷ್ಟ್ರೀಯತೆ, ತನ್ನ ಹಿಂದಿನ ನಾಯಕನ ವಾರ್ಷಿಕ ಪುಣ್ಯತಿಥಿಯಂದು ಜನರು ನಗುವುದನ್ನು ನಿಷೇಧಿಸಿದ ಉತ್ತರ ಕೊರಿಯಾದ ಪ್ರಭುತ್ವದ ಕಟ್ಟಾಜ್ಞೆಯನ್ನು ಹೋಲುವಂತಹದು.

ಮತೀಯ ಭಾವನೆ ತುಂಬಿದ ರಾಜಕೀಯ ಪರಿಸರದಲ್ಲಿ ಜನರು ಭಕ್ತಿಯನ್ನು ಪ್ರದರ್ಶಿಸಬೇಕೆಂದು, ದೇವರ ಅಡಿಯಾಳಾಗಿರುವ ಭಕ್ತರಾಗಬೇಕೆಂದು ನಿರೀಕ್ಷಿಸಲಾಗುತ್ತದೆ. ಬಹಳ ಹಿಂದೆಯೇ ಅಂಬೇಡ್ಕರ್ ಅವರು “ಧರ್ಮದಲ್ಲಿ ಭಕ್ತಿಯು ಮುಕ್ತಿಯನ್ನು ದೊರಕಿಸಬಹುದು, ಆದರೆ ರಾಜಕಾರಣದಲ್ಲಿ ಭಕ್ತಿಯು ಅವನತಿಯತ್ತ ಮತ್ತು ನಂತರದಲ್ಲಿ ಸರ್ವಾಧಿಕಾರತ್ತ ನಿಶ್ಚಿತವಾಗಿ ಕೊಂಡೊಯ್ಯುವ ದಾರಿ” ಎಂಬುದನ್ನು ಒತ್ತಿ ಹೇಳಿದ್ದರು. ಆದರೆ ಈಗ ಮಹಾನ್ ರಾಷ್ಟ್ರವೊಂದರ ನಿರ್ಮಾಣ ನಡೆಯುತ್ತಿದೆ ಎಂಬ ಕಲ್ಪನೆಯಲ್ಲಿ ವ್ಯಕ್ತಿ ಪೂಜೆ ಮಾತ್ರವಲ್ಲದೆ, ಆಧ್ಯಾತ್ಮಿಕ ದೇವರು ಮತ್ತು ಲೌಕಿಕ ದೇವರುಗಳ ನಡುವಿನ ಗೆರೆಯು ಮಸುಕಾಗಿದೆ. ಒಂದು ಧಾರ್ಮಿಕ ರಾಮರಾಜ್ಯದ ಕಲ್ಪನೆಯನ್ನೂ ಕೂಡಾ ರಾಷ್ಟ್ರ ಪ್ರಭುತ್ವವೇ ಕಟ್ಟಿಕೊಡುತ್ತಿದೆ.

ಧರ್ಮ, ರಾಜಕಾರಣ ಮತ್ತು ರಾಷ್ಟ್ರೀಯತೆಗಳನ್ನು ಬೆಸೆಯುವುದು ಮತ್ತು ಇದರ ಪರಿಣಾಮವಾಗಿ ತನ್ನ ದೇಶವನ್ನು ವಿಶ್ವಗುರು ಎಂದು ನಂಬುವುದರಿಂದ ಮೂಡುವ ಭ್ರಮಾತ್ಮಕ ಗುಲಾಗಿರಿಯು, ಸಮಾಜದಲ್ಲಾಗುವ ಅತಿಮುಖ್ಯವಾದ ಸಾಂದರ್ಭಿಕ ವಿಭಜನೆಗಳನ್ನು ಸತತವಾಗಿ ಮಂಕಾಗಿಸುತ್ತಿರುತ್ತದೆ.

ಉದಾಹರಣೆಗೆ, ಜಾಗತಿಕ ಅಸಮಾನತಾ ವರದಿಯ ಪ್ರಕಾರ, ಭಾರತದಲ್ಲಿ ಮಹಿಳೆಯರ ದುಡಿಮೆಯ ಆದಾಯದ ಪಾಲು ಶೇ.೧೮ರಷ್ಟು ಕನಿಷ್ಠ ಮಟ್ಟದಲ್ಲಿದೆ. ಇದು ಅತೀ ಕಡಿಮೆ ಪಾಲು ಹೊಂದಿರುವ ಮಧ್ಯಪೂರ್ವ ಮತ್ತು ಉತ್ತರ ಆಫ್ರಿಕಾಗಳಿಗಿಂತ ತುಸುವೇ ಹೆಚ್ಚು. (ಈ ಭೂಪ್ರದೇಶದ ಹಲವಾರು ದೇಶಗಳು ಧಾರ್ಮಿಕ ನಿರಂಕುಶಾಧಿಕಾರೀ ಆಡಳಿತ ವ್ಯವಸ್ಥೆಯನ್ನು ಹೊಂದಿರುವಂತಹವು) ಈ ಸೂಚಕವು ಮಹಿಳಾ ಸಬಲೀಕರಣ ಮತ್ತು ಸಮಾಜದಲ್ಲಿನ ಸ್ಥಾನವನ್ನು ನಿರ್ಧರಿಸುವ ಬಹುಮುಖ್ಯ ನಿರ್ಣಾಯಕ ಅಂಶವಾಗಿದೆ.

ಬ್ರಿಟಿಷ್ ವಸಾಹತುಶಾಹಿ ಆಡಳಿತ ಕಾಲದಲ್ಲಿ, ಮೇಲಿನ ಸ್ತರದಲ್ಲಿರುವ ಶೇ.೧೦ ಜನರ ಆದಾಯದ ಪಾಲು ಶೇ.೫೦ ಆಗಿದ್ದುದು ಈಗ ಬ್ರಿಟಿಷರು ಹೊರಹೋದ ೭೫ ವರ್ಷಗಳ ನಂತರ ಶೇ.೫೭ ಕ್ಕೆ ಏರಿಕೆಯಾಗಿರುವುದು ರಾಷ್ಟ್ರೀಯವಾದಿಗಳಿಗೆ ಆಘಾತವನ್ನೇನೂ ಉಂಟುಮಾಡುವುದಿಲ್ಲ, ನಮ್ಮ ಸಮಾಜದ ಮೇಲಿನ ಸ್ತರದ ಶೇ.೧ರಷ್ಟು ಜನರ ಸಂಪತ್ತಿನ

ಪಾಲು ಸದ್ಯದ ಹಿಂದು ರಾಷ್ಟ್ರೀಯವಾದಿಗಳ ಆಡಳಿತ ಕಾಲದಲ್ಲಿ ಹೆಚ್ಚಾಗಿದೆ. ಅವರ ಸರಾಸರಿ ಸಂಪತ್ತು ೩೨೪ ಕೋಟಿ, ಆದರೆ ಕೆಳಗಿನ ಶೇ.೫೦ ಜನ ಹೊಂದಿರುವ ಸರಾಸರಿ ಸಂಪತ್ತು ಬರೀ ೬೬,೦೦೦ ರೂ.

ಪ್ರತಿಯೊಂದು ಪ್ರಜಾಸತ್ತಾತ್ಮಕ ಭಿನ್ನಾಭಿಪ್ರಾಯವನ್ನೂ ಒಂದು ರಾಷ್ಟ್ರವಿರೋಧಿ ಅಪರಾಧ ಎಂಬಂತೆ ಪರಿಗಣಿಸುವ ಧಾರ್ಮಿಕ ರಾಷ್ಟ್ರೀಯವಾದಿಯು ಲಕ್ಷಾಂತರ ಕೋವಿಡ್ ಸಾವುಗಳಿಂದ (ಅಧಿಕೃತ ಅಂಕಿ ಸಂಖ್ಯೆಗಳನ್ನು ಮೀರಿದ್ದು) ಆಘಾತಕ್ಕೊಳಗಾಗಿಲ್ಲ. ಈ ಸಾವುಗಳು ಬಹುಮಟ್ಟಿಗೆ ಮೂಲಭೂತ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಪ್ರಭುತ್ವವು ಸೋತದ್ದರಿಂದ ಉಂಟಾದಂಥವು. ಅಥವಾ ಜಾಗತಿಕ ಹಸಿವು ಸೂಚ್ಯಂಕದಲ್ಲಿ ೧೧೬ ದೇಶಗಳ ಹೆಸರುಗಳಿರುವ ಪಟ್ಟಿಯಲ್ಲಿ ೧೦೧ನೇ ಸ್ಥಾನದಲ್ಲಿರುವ ಭಾರತದ ಆತಂಕ ಹುಟ್ಟಿಸುವ ಶ್ರೇಯಾಂಕದಿಂದಲೂ ಆಘಾತಕ್ಕೊಳಗಾಗಿಲ್ಲ(ಅದೂ ಪಾಕಿಸ್ಥಾನ, ಬಾಂಗ್ಲಾದೇಶ, ನೇಪಾಳಗಳಿಗಿಂತಲೂ ಕೆಳಗೆ). ಕೋವಿಡ್ ಲಾಕ್‌ಡೌನ್‌ನ ಸಮಯದಲ್ಲಿ ದೇಶದ ೨೪% ಜನ ಮಾಸಿಕ ೩೦೦೦ ರೂಗಳನ್ನು ಗಳಿಸುತ್ತಿದ್ದಾಗ, ಭಾರತದ ಅತಿ ಶ್ರೀಮಂತರು ಒಂದು ಘಂಟೆಗೆ ೯೦ ಕೋಟಿ ಗಳಿಸುತ್ತಿದ್ದರು ಮತ್ತು ಭಾರತದ ಶತಕೋಟ್ಯಾಧಿಪತಿಗಳು ತಮ್ಮ ಸಂಪತ್ತನ್ನು ಶೇ.೩೫ರಷ್ಟು ಹೆಚ್ಚಿಸಿಕೊಂಡರು ಎಂಬ ವಾಸ್ತವದಿಂದಲೂ ಈ ರಾಷ್ಟ್ರೀಯವಾದಿಯು ಆಘಾತಗೊಳ್ಳುವುದಿಲ್ಲ.

ಒಂದು ಅಂದಾಜಿನ ಪ್ರಕಾರ ಈ ಸಾಂಕ್ರಾಮಿಕದಿಂದ ೧೫ ರಿಂದ ೨೦ ಕೋಟಿಯಷ್ಟು ಜನ ಬಡತನಕ್ಕೆ ದೂಡಲ್ಪಟ್ಟು ಅರ್ಧ ದೇಶವೇ ಬಡತನದ ಕೂಪವಾಯಿತು. ಇದು ಸ್ವಾತಂತ್ರ್ಯಾ ನಂತರದ ಅತಿ ಘೋರ ಆರ್ಥಿಕ ಕುಸಿತಕ್ಕೆ ಕಾರಣವಾಯಿತು. ಇದಕ್ಕೆ ಮುಂಚೆ ನೋಟು ಅಮಾನ್ಯೀಕರಣದಂಥ ವಿಪತ್ಕಾರಕ ಕ್ರಮ ಕೈಗೊಂಡಿದ್ದು ಇದಕ್ಕೆ ಭೂಮಿಕೆಯನ್ನು ಸಿದ್ಧಮಾಡಿಟ್ಟಂತಾಗಿತ್ತು. ಇದೊಂದು ಭಕ್ತಿ ರಾಜಕಾರಣದ ಪರಿಣಾಮವಾದ ಆರ್ಥಿಕ ನೀತಿ. ಇಲ್ಲಿ ನೀತಿಗಳು ಒಬ್ಬ ಪರಮೋಚ್ಛ ನಾಯಕನಿಂದ ಯಾವ ವಿರೋಧವೂ ಇಲ್ಲದೆ ಹೊಮ್ಮುತ್ತವೆ, ಈ ವಿಚಾರವು ರಾಷ್ಟ್ರಾಧ್ಯಕ್ಷರ ಗಮನಕ್ಕೂ ಕೂಡ ಬಂದಿರಲಿಲ್ಲ.

ಆದರೆ ಈ ವಿಚಾರಗಳಿಗೆ ಸಂಬಂಧಿಸಿದಂತೆ ಹೇರಲ್ಪಟ್ಟ ಮೌನ ಜನಸಾಮಾನ್ಯರಲ್ಲಿದೆ. ರಾಜಕಾರಣದ ಭಾಷೆಯಲ್ಲಿ ಹಕ್ಕುಗಳು, ಸಮಾನತೆ, ಚರ್ಚೆ, ಮುಂತಾದ ಪದಗಳ ಸ್ಥಾನವನ್ನು ಕರ್ತವ್ಯ, ತ್ಯಾಗ (ಇದನ್ನು ಮುಖ್ಯವಾಗಿ ನೋಟು ಅಮಾನ್ಯೀಕರಣದ ಕಾಲದಲ್ಲಿ ಕಾಣಲಾಯಿತು) ಗೌರವ (ಅಧಿಕಾರ ಸ್ಥಾನಕ್ಕೆ), ವಿಧೇಯತೆ ಮುಂತಾದುವು ಆಕ್ರಮಿಸಿಕೊಂಡಿರುವುದು ಇದಕ್ಕೆ ಕಾರಣವಾಗಿದೆ.

ಸಾಮಾಜಿಕ ಸಾಮರಸ್ಯದ ಕಲ್ಪನೆಯ ಬಗ್ಗೆ ಮಾತನಾಡುವ ಹಿಂದೂ ರಾಷ್ಟ್ರೀಯತೆಯು ಜಾತಿ ವಿನಾಶದ ಬಗ್ಗೆ ಮಾತನಾಡಲಾರದು. ಹಿಂದಿನ "ಜಾತ್ಯತೀತ" ರಾಷ್ಟ್ರೀಯತೆಯು ಸಮರ್ಥಿಸುತ್ತಿದ್ದ ಸಮಾನತೆಯ ಕಲ್ಪನೆಯನ್ನು ಕೂಡ ಪ್ರಶ್ನಿಸುತ್ತಿದ್ದ ಹಿಂದುಳಿದ ಜಾತಿಗಳ ಸ್ವಸಮರ್ಥನೆಯ ಕಾಲವನ್ನು ದಾಟಿ, ವಾಸ್ತವದಲ್ಲಿ ಈಗ ಅದು (ಹಿಂದು ರಾಷ್ಟ್ರೀಯತೆಯು) ಮೇಲ್ಜಾತಿಗಳ ಪ್ರಾಬಲ್ಯಕ್ಕೆ ಹಿಂದಿರುಗುವ ವಿಚಾರಕ್ಕೆ ಬಂದು ನಿಂತಿದೆ. ವಿಶೇಷವಾಗಿ ಇದು ಬಹಳ ನಿರ್ಣಾಯಕ ಏಕೆಂದರೆ ವರ್ಗ ಅಸಮಾನತೆಗಳು ಆಂತರಿಕವಾಗಿ ಜಾತಿಯಿಂದ ರೂಪುಗೊಂಡಂಥವು. ಇದರಿಂದ ಬಹಳ ಹಿಂದುಳಿದ ಜಾತಿಗಳ ಜನರಾದ ದಲಿತರು ಮತ್ತು ಆದಿವಾಸಿಗಳು ಗಾಬರಿಗೊಳಿಸುವಷ್ಟು ಮಟ್ಟದ ಒಕ್ಕಲೆಬ್ಬಿಸುವಿಕೆ ಮತ್ತು ಆರ್ಥಿಕ ಕುಸಿತದ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಮತ್ತೊಂದು ಅಧ್ಯಯನದ ಪ್ರಕಾರ (೨೦೧೫ ಮತ್ತು ೧೬ ರ ನಡುವಿನದು) ಶೇ.೨೨ರಷ್ಟು ಹಿಂದು ಮೇಲ್ಜಾತಿಗಳು ಒಟ್ಟು ಸಂಪತ್ತಿನ ೪೧% ಹೊಂದಿದ್ದರೆ ೨೪% ಹಿಂದು ದಲಿತ ಮತ್ತು ಆದಿವಾಸಿಗಳು ಹೊಂದಿದ್ದ ಸಂಪತ್ತು ಕೇವಲ ೧೧%.

ಅಸಮಾನತೆ ಎಂಬುದು ಭಾರತಕ್ಕೆ ವಿಶಿಷ್ಟವಾದ ಸಮಸ್ಯೆಯಲ್ಲ, ಅದು ಜಾಗತಿಕವಾದುದು. ವಾಸ್ತವದಲ್ಲಿ ಭಾರತಕ್ಕಿಂತಲೂ ಹೆಚ್ಚಿನ ಅಸಮಾನತೆ ಇರುವ ದೇಶಗಳೂ ಇವೆ (ಉದಾ: ಚಿಲಿ, ಬ್ರೆಝಿಲ್, ದಕ್ಷಿಣ ಆಫ್ರಿಕಾ) ಹಾಗೆಯೇ ಅಸಮಾನತೆ ಈಗಿನ ಸರ್ಕಾರದ ಆಡಳಿತಾವಧಿಯಲ್ಲೇ ಪ್ರಾರಂಭವಾಯಿತು ಎಂದೇನೂ ಇಲ್ಲ. ಸುಮಾರು ೧೯೮೦ರ ಸಮಯದಲ್ಲಿ ಆದಾಯದ ಪಾಲಿನಲ್ಲಿ ಅತಿ ಕಡಿಮೆ ಅಸಮಾನತೆಯನ್ನು ಸಾಧಿಸಿತ್ತು. ಆದರೆ ೧೯೯೧ರಲ್ಲಿ ಮಾರುಕಟ್ಟೆಗಳು ಮುಕ್ತಗೊಂಡಾಗ ಹೆಚ್ಚಿದ ಬೆಳವಣಿಗೆಯ ದರದೊಂದಿಗೆ ಅಸಮಾನತೆಯೂ ಕೂಡ ನಾಗಾಲೋಟದಲ್ಲಿ ಹೆಚ್ಚತೊಡಗಿತು ಎಂಬುದನ್ನು ವರದಿಗಳು ಸೂಚಿಸುತ್ತವೆ.


ಆದರೆ ದ್ವೇಷಮಯ ಹಿಂದು ರಾಷ್ಟ್ರೀಯತೆಯ ಅಡಿಯಲ್ಲಿ ಮೂಲಭೂತವಾಗಿ ಭಿನ್ನವಾಗಿರುವುದೇನೆಂದರೆ, ವಿಶೇಷವಾಗಿ ತನ್ನ ನಾಯಕನನ್ನು ದೈವತ್ವಕ್ಕೇರಿಸುವುದರೊಂದಿಗೆ ಬೆಸೆದುಕೊಂಡಾಗ, ಅಗಲವಾಗುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಬಿರುಕುಗಳ ವಿರುದ್ಧ ಬಳಸುವುದಕ್ಕೆ ಬೇಕಾದ ಭಾಷೆಯನ್ನು ವಿಧ್ವಂಸಕವಾಗಿ ದುರ್ಬಲಗೊಳಿಸುತ್ತಿರುವುದು. ಈ ಹಿಂದೂ ರಾಷ್ಟ್ರೀಯವಾದಕ್ಕೆ ಸಾಧ್ಯವಿರುವ ಏಕೈಕ ಆರ್ಥಿಕ ಭಾಷೆಯೆಂದರೆ ದಯಾಳುವಾದ ರಾಜನೊಬ್ಬ, ಅತಿ ಅಸಮಾನತೆಯ ಆರ್ಥಿಕ ರಚನೆಯ ಹತ್ತಿರಕ್ಕೂ ಸುಳಿಯದೇ, ಕಡಿಮೆ ಮೌಲ್ಯದ ಕನಿಷ್ಠ ಕೊಡುಗೆಗಳನ್ನು ತನ್ನ ಕೃತಜ್ಞ ಪ್ರಜೆಗಳಿಗೆ ಹಂಚುತ್ತಿರುವ ರೀತಿಯದ್ದು.

ಸಮಾಜೋ–ಆರ್ಥಿಕ ಶ್ರೇಣೀಕರಣದ ಬಗ್ಗೆ ನಿರಂತರ ರಾಜಕೀಯ ವಾದವಿವಾದಗಳು ನಡೆಯುತ್ತಿರುವ, ಅಸಮಾನತೆಗಳುಳ್ಳ ದೇಶಗಳಾದ ಚಿಲಿ ಮತ್ತು ಬ್ರೆಝಿಲ್‌ಗಳಿಗೂ ಮತ್ತು ಭಾರತಕ್ಕೂ ಇರುವ ವ್ಯತ್ಯಾಸವು ಹಿಂದೆಂದಿಗಿಂತಲೂ ಹೆಚ್ಚು ಎದ್ದುಕಾಣುತ್ತಿದೆ. ದೇಶದ ಬಹುದೊಡ್ಡ ಭಾಗವನ್ನು ಶೋಚನೀಯವಾಗಿ ಅಸ್ಥಿರ ಸ್ಥಿತಿಗೆ ದೂಡದೆಯೇ ಆರ್ಥಿಕ ಬೆಳವಣಿಗೆ ಸಾಧ್ಯ ಎಂಬುದಕ್ಕೆ ಹಲವಾರು ಉದಾಹರಣೆಗಳನ್ನು ಅಸಮಾನತೆಯ ವರದಿಯು ತೋರಿಸಿದೆ.

ಕಳೆದ ಎಂಟು ವರ್ಷಗಳಲ್ಲಿ, ಹಿಂದು ರಾಷ್ಟ್ರೀಯತೆಯ ನೈತಿಕ ಸಮರ್ಥನೆಗಳ ಮತ್ತು ಇತರೆ ರಾಷ್ಟ್ರೀಯತೆಗಳಿಗಿಂತ ತಾನು ಉತ್ತಮ ಎಂಬ ಕಲ್ಪಿತ ಶ್ರೇಷ್ಠತೆಯ ಪೊಳ್ಳುತನವನ್ನು ಭಾರತವು ತೋರಿಸಿಕೊಟ್ಟಿದೆ. ರಾಜಕಾರಣವವನ್ನು ಒಂದು ಪ್ರಾಪಂಚಿಕ ವ್ಯವಹಾರದ ಮಟ್ಟದಿಂದ ದೈವೀಕ ವ್ಯವಹಾರದ ಮಟ್ಟಕ್ಕೆ ಏರಿಸುವುದರಿಂದ, ಅಂದರೆ ದೇವತೆಗಳು ಸೋಲುವುದನ್ನು ನೋಡಲಾಗದು ಎನ್ನುವುದರಿಂದ ಉಂಟಾಗುವ ಮತ್ತೊಂದು ವಿಚಿತ್ರ ಸಮಸ್ಯೆಯನ್ನೂ ಈ ವರದಿಯು ಬಹಿರಂಗಗೊಳಿಸುತ್ತದೆ.

ಹೀಗೆ ವಿಶಾಲ ಜನಸಮುದಾಯಗಳ ಸಮಾಜೋ–ಆರ್ಥಿಕ ಜೀವನದ ಬಗ್ಗೆ, ಜೀವನ ನಿರ್ವಹಣೆಯ ಖರ್ಚುಗಳು, ಸತ್ತ ರೈತರ ಸಂಖ್ಯೆಯಿಂದ ಹಿಡಿದು, ಕೋವಿಡ್–೧೯ರ ಆಮ್ಲಜನಕದ ಕೊರತೆಯಿಂದ ಆದ ಸಾವಿನ ಸಂಖ್ಯೆಯವರೆಗೆ, ತನ್ನ ಬಳಿ ಯಾವುದೇ "ದತ್ತಾಂಶ ಇಲ್ಲ" ಎಂದು ಆಡಳಿತವು ಘೋಷಿಸಿರುವುದರೊಂದಿಗೆ, ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಬಿಡುಗಡೆ ಮಾಡಿದ ಅಸಮಾನತೆಯ ಬಗೆಗಿನ ದತ್ತಾಂಶದ ಗುಣಮಟ್ಟವು ತೀವ್ರವಾಗಿ ಕುಸಿದಿರುವುದಲ್ಲದೇ, ಇದರಿಂದ ಇತ್ತೀಚೆಗೆ ಆಗಿರುವ ಅಸಮಾನತೆಗೆ ಸಂಬಂಧಿಸಿದ ಬದಲಾವಣೆಗಳನ್ನು ಮೌಲ್ಯಮಾಪನ ಮಾಡುವುದೂ ಕಷ್ಟಕರವಾಗಿದೆ.

ಸದ್ಯದ ಸನ್ನಿವೇಶವು ರಾಷ್ಟ್ರವನ್ನು ಮರುಕಲ್ಪಿಸಿಕೊಳ್ಳಬೇಕಾದ ಅಗತ್ಯದ ಒಂದು ತುರ್ತು ಪ್ರಮೇಯವನ್ನು ಪ್ರಸ್ತುತಪಡಿಸಿದೆ. ಧರ್ಮವನ್ನು ಒಂದು ರಾಷ್ಟ್ರಪ್ರಭುತ್ವಕ್ಕೆ ಜೋಡಿಸುವುದರಿಂದಾಗುವ ಅಪಾಯಗಳ ಬಗ್ಗೆ; ಸಮಾನ ಪೌರತ್ವ ಮತ್ತು ಪ್ರಜಾಪ್ರಭುತ್ವವನ್ನು ಗ್ರಹಿಸಲಾಗದ ಧಾರ್ಮಿಕ ರಾಷ್ಟ್ರೀಯತೆಯ ಅಸಮರ್ಥತೆಯ ಬಗ್ಗೆ ಆಳವಾದ ನೈತಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಇದು ಎತ್ತುತ್ತದೆ.



(ಲೇಖಕರು ಕೆನಡಾದ ಡಾಲ್‌ಹೌಸಿ ವಿಶ್ವವಿದ್ಯಾನಿಲಯದಲ್ಲಿ ಸಹ ಪ್ರಾಧ್ಯಾಪಕರೂ ಮತ್ತು ಅದರ ಅಂತಾರಾಷ್ಟ್ರೀಯ ಅಭಿವೃದ್ಧಿ ಅಧ್ಯಯನ ಪೀಠದ ಅಧ್ಯಕ್ಷರೂ ಆಗಿದ್ದಾರೆ)

೪ನೇ ಪುಟದಿಂದ)


೧:೩ ಇರುವಂತೆ ತೀರ್ಮಾನಿಸಲಾಯಿತು. ಅಂದರೆ ಸಂಸ್ಥೆಯ ಕಡಿಮೆ ವೇತನ ಪಡೆಯುವ ವ್ಯಕ್ತಿ ೧೦೦ ರೂ ಪಡೆದರೆ ಹೆಚ್ಚಿನ ವೇತನ ಪಡೆಯುವ ಮುಖ್ಯಸ್ಥರು ಗರಿಷ್ಠ ೩೦೦ ರೂ ಪಡೆಯಬಹುದು. ಕೆಳಗಿನ ವ್ಯಕ್ತಿಗೆ ಆದಾಯ ಹೆಚ್ಚಿದರಷ್ಟೇ ಮೇಲಿನ ವ್ಯಕ್ತಿಗೆ ಹೆಚ್ಚಲು ಸಾಧ್ಯ. ಹಾಗಾಗಿ ಆಧುನಿಕ ಉದ್ಯಮಗಳಲ್ಲಿ ಇರುವ ವಿಪರೀತವಾದ ವೇತನ ತಾರತಮ್ಯವನ್ನು ಕಡಿಮೆ ಮಾಡಲಾಯಿತು. ಇದರಿಂದ ಉಂಟಾಗುವ ಅಸಮಾಧಾನವನ್ನು ಕಡಿಮೆ ಮಾಡಲಾಯಿತು. ಇವಲ್ಲದೆ ಕೆಲಸಗಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹಲವಾರು ಸುಧಾರಣೆಗಳನ್ನು ಮಾಡಲಾಯಿತು.

ಬರುವ ಲಾಭದಲ್ಲಿ ಶೇ.೨೫ ರಷ್ಟನ್ನು ಮೂಲನಿಧಿಗೆ ಸೇರಿಸಿ ಶೇ.೧೫ ರಷ್ಟನ್ನು ಕೆಲಸಗಾರರ ಹಿತಕ್ಕಾಗಿ ಮಾಡಿರುವ ವಿವಿಧ ನಿಧಿಗಳಿಗೆ ನೀಡಲಾಗುತ್ತದೆ. ಉಳಿದ ಶೇ ೬೦ ಭಾಗವನ್ನು ಬಂಡವಾಳ ಹೂಡಿರುವವರಿಗೆ ಹಂಚಲಾಗುತ್ತದೆ. ಇದನ್ನು ಪ್ರತಿ ಮೂರು ತಿಂಗಳಿಗೆ ಒಮ್ಮೆ ನೀಡಲಾಗುತ್ತಿದೆ.


ಪ್ರತಿವರ್ಷ ಪ್ರವಾಸ, ರಂಗ ಚಟುವಟಿಕೆ, ಚಾರಣ, ಅನುಭವಿಗಳೊಂದಿಗೆ ಸಂವಾದ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇದರಿಂದ ಕೆಲಸಗಾರರ ವ್ಯಕ್ತಿತ್ವ ಸುಧಾರಣೆಯಾಗುತ್ತಿದೆ. ನಿಧಾನವಾಗಿ ಜೀವನ ದೃಷ್ಟಿ ಬದಲಾಗುತ್ತಿದೆ. ಉದಾರತೆ, ಸಹಿಷ್ಣುತೆ ನಿಧಾನವಾಗಿ ಮೇಲಕ್ಕೆ ಬರುತ್ತಿವೆ. ಸಣ್ಣತನ, ಸ್ವಾರ್ಥ, ಜಗಳಗಂಟತನ ನಿಧಾನವಾಗಿ ಕೆಳಕ್ಕೆ ಹೋಗುತ್ತಿದೆ.

ಬಹುಶ: ಇಡೀ ದೇಶದಲ್ಲಿ ಖಾದಿ ನೇಯ್ಗೆಗೆ, ಸರ್ಕಾರದ ನೆರವಿಲ್ಲದೆ ಹೆಚ್ಚು ವೇತನ ಪಡೆಯುತ್ತಿರುವವರು ಜನಪದ ಖಾದಿ ನೇಕಾರರು ಆಗಿದ್ದಾರೆ. ಇದೆಲ್ಲವೂ ಜನರ, ಸಮಾಜದ ಪಾಲ್ಗೊಳ್ಳುವಿಕೆಯಿಂದ ಸಾಧ್ಯವಾಗುತ್ತದೆ.


ಜನಪದ ಖಾದಿಯಲ್ಲಿ ಎಲ್ಲವೂ ನೂರಕ್ಕೆ ನೂರು ಸರಿ ಇದೆ ಎಂದು ಹೇಳಲಾಗದು. ಕ್ರಮಿಸಬೇಕಾದ ದಾರಿ ಇನ್ನೂ ಬಹಳ ಉದ್ದವಿದೆ. ನಕಲಿ ಖಾದಿ ಮತ್ತು ಅಸತ್ಯದ ದಿಕ್ಕಿನಿಂದ ಅಸಲಿ ಖಾದಿ ಮತ್ತು ಋಜು ದಿಕ್ಕಿನ ಕಡೆಗೆ ಪಯಣಿಸುವ ಒಂದು ಪ್ರಯತ್ನ ಇದಾಗಿದೆ.



(ಲೇಖಕರು ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದಾರೆ)



ಮಹಿಳಾ ದಿನಾಚರಣೆಯ ವಿಶೇಷ ಪುಟಗಳು





ಹೆಣ್ಣಾಗಿ ಹುಟ್ಟಿದ್ದಕ್ಕಾಗಿ ವಿಷಾದವೆ? ಅಥವಾ ಹೆಮ್ಮೆಯೇ? ಏಕೆ?

ಮತ್ತೊಂದು ಮಹಿಳಾ ದಿನ ಬಂದಿದೆ, ಈ ಮಾರ್ಚ್ ೮ರ ಮಹಿಳಾ ದಿನಾಚರಣೆಗಾಗಿ ವಿಶ್ವಸಂಸ್ಥೆಯು 'ಸುಸ್ಥಿರ ಅಭಿವೃದ್ಧಿಗಾಗಿ ಮಹಿಳಾ ಸಬಲೀಕರಣ' ಎಂಬ ವಸ್ತುವನ್ನು ಘೋಷಿಸಿದೆ. ಹವಾಮಾನ ಬದಲಾವಣೆಗಳ ಸೂಕ್ಷ್ಮಗಳಿಗೆ ಮಹಿಳೆಯರನ್ನು ಜಾಗೃತಗೊಳಿಸುವುದೇ ಇದರ ಉದ್ದೇಶವಾಗಿರಬಹುದು. ಗ್ರೇಟಾ ಥನ್‌ಬರ್ಗ್ ಎಂಬ ಜರ್ಮನಿಯ ಬಾಲೆ ಈ ವಿಷಯವಾಗಿ ಜಗತ್ತನ್ನೇ ಜಾಗೃತಗೊಳಿಸುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವಾಗ ಮತ್ತು ಇದನ್ನು ವಿಶ್ವಸಂಸ್ಥೆಯೇ ಪ್ರಾಯೋಜಿಸುತ್ತಿರುವಾಗ ಈ ವರ್ಷಕ್ಕೆ ಈ ವಸ್ತುವಿನ ಆಯ್ಕೆ ಔಪಚಾರಿಕವೆನ್ನಿಸಬಹುದು. ಏಕೆಂದರೆ ಮಹಿಳಾ ಜಗತ್ತು ಅದೂ ವಿಶೇಷವಾಗಿ ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ಜಗತ್ತಿನ ಮಹಿಳೆಯರು ತಾವಿನ್ನೂ ಪುರುಷ ಪ್ರಧಾನ ಅಥವಾ ಪಿತೃಪ್ರಧಾನ ಸಮಾಜದ ಸಂಕೋಲೆಗಳಿಂದಲೇ ಬಿಡಿಸಿಕೊಳ್ಳುವ ಹೋರಾಟವನ್ನೇ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿಲ್ಲ ಎಂಬ ಅಭಿಪ್ರಾಯ ಹೊಂದಿದ್ದಾರೆ. ಅವರು ಹೀಗೆ ನಿಜಸ್ಥಿತಿಯನ್ನೇ ಬಿಂಬಿಸುತ್ತಿದ್ದಾರೆ ಎಂಬುದೂ ನಿಜ.

ಈ ನಿಜದ ಒಡಲಿನಲ್ಲಿನ ವಾಸ್ತವಗಳೇನು? ಈ ನಮ್ಮ ಮಹಿಳೆಯರಲ್ಲಿ ಇನ್ನೂ ಉಳಿದಿರುವ ಆತಂಕಗಳೇನು? ರೂಪಗೊಂಡಿರುವ ವಿಶ್ವಾಸದ ಸ್ವರೂಪವೇನು ಎಂಬುದನ್ನು ಅರಿಯಲು 'ಹೊಸ ಮನುಷ್ಯ' ನಮ್ಮ ಆಯ್ದ ಕೆಲ ಮಹಿಳಾ ಓದುಗರಿಂದ 'ಹೆಣ್ಣಾಗಿ ಹುಟ್ಟಿದ್ದಕ್ಕಾಗಿ ನಿಮಗೆ ವಿಷಾದವೆನ್ನಿಸಿದೆಯೇ? ಅಥವಾ ಹೆಮ್ಮೆ ಎನಿಸಿದೆಯೇ? ಏಕೆ?' ಎಂಬ ಪ್ರಶ್ನೆಯನ್ನು ಕೇಳಿದೆವು ಅವರ ಉತ್ತರಗಳು ಇಲ್ಲಿವೆ-ಸಂ.

ಅವಳದು ಕಷ್ಟದ್ದಾದರೂ ಯಶಸ್ವಿ ಕಥನವೆಂದೇ ಹೇಳಬಹುದು.



ಮೊದಲನೆಯದಾಗಿ ಹುಟ್ಟು ನಮ್ಮ ಆಯ್ಕೆಯಲ್ಲ. ಸಂಸಾರ, ಸಂತಾನವೆಂಬ ಹಿರಿಯರ ಅನಿವಾರ್ಯ ಸಹಜ ದಾಂಪತ್ಯದಲ್ಲಿ ಜನಿಸಿರುತ್ತೇವೆ. ಹಾಗೆ ನೋಡಿದರೆ ೬೦ರ ದಶಕದಲ್ಲಿ ಐದು ಮಕ್ಕಳಲ್ಲಿ ಎರಡನೆಯವಳಾಗಿ ಹುಟ್ಟಿದ ನನ್ನ ಮೇಲೆ ಅಂತಹ ನಿರೀಕ್ಷೆಯ ಭಾರ ಏನಿರಲಿಲ್ಲ. ಅಂತಹ ಕಟ್ಟುಪಾಡುಗಳೇನನ್ನು ನಮ್ಮ ಮೇಲೆ ಹೇರಿರಲಿಲ್ಲ. ನಮ್ಮ ತಂದೆತಾಯಿಗಳು ಎಂದೂ ನಮ್ಮನ್ನು ಭಾರವೆಂದು ಭಾವಿಸಿರಲಿಲ್ಲ. ಆಗ ವರದಕ್ಷಿಣೆಯ ಹಾಹಾಕಾರದ ಅಲೆ ರಭಸವಾಗಿರಲಿಲ್ಲ. ಅವರಿಗಿದ್ದ ಆದ್ಯತೆಯೆಂದರೆ ಒಂದು ಒಳ್ಳೆಯ ಶಿಕ್ಷಣ, ಒಳ್ಳೆಯ ಕುಟುಂಬಕ್ಕೆ ಕೊಟ್ಟು ತಮ್ಮ ಜವಾಬ್ದಾರಿ ಮುಗಿಸಿಕೊಳ್ಳುವುದು. ಹೀಗಾಗಿ ಹೆಣ್ಣಾಗಿ ಹುಟ್ಟಿದ್ದಕ್ಕೆ ಬೇಸರವೇನಿಲ್ಲ.

ಗಂಡಿಗಿಂತ ತಾಳ್ಮೆಯಿಂದ ಸಮರ್ಥವಾಗಿ, ವ್ಯವಸ್ಥಿತವಾಗಿ ನಮಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂಬುದು ಅರಿವಿಗೆ ಬಂದಾಗ ಅವರನ್ನು ಯಾರೂ ನಿಯಂತ್ರಿಸಲಾರರು. ಜೀವನದಲ್ಲಿ ಕೆಡವುವುದಕ್ಕಿಂತ ಕಟ್ಟುವ ಕ್ರಿಯೆ ಬೌದ್ಧಿಕವಾದ, ದೈಹಿಕವಾದ ಶ್ರಮ ಕೇಳುತ್ತದೆ. ಮತ್ತೆ ಮತ್ತೆ ತನ್ನನ್ನು ಸೋಲುವಂತೆ ಮಾಡಿ ಹೀಗೆಳೆಯುವ ಪರಿಸರವಿದ್ದಾಗ ಮಾತ್ರ ಅವಳು ನೋಯುತ್ತಾಳೆ. ಆದರೆ ತನ್ನ ಹೆಣ್ಣು ಜನ್ಮದ ಬಗ್ಗೆ ನೊಂದುಕೊಳ್ಳಲಾರಳು. ಮೇಲು, ಮಧ್ಯಮ, ಕೆಳ–ಹೀಗೆ ಯಾವ ವರ್ಗಕ್ಕೆ ಸೇರಿದ್ದರೂ ತನ್ನ ಕಕ್ಷೆಯಲ್ಲಿ ನಿರಂತರವಾಗಿ ಕಟ್ಟುವ ಕರಣಿಕೈ ಅವಳದು. ಎಲ್ಲಾ ಕ್ಷೇತ್ರಗಳಲ್ಲಿ ಯಾವುದೇ ಇಗೋಗಳಿಲ್ಲದೆ ದುಡಿಯುವ ಸಾಮರ್ಥ್ಯವಿರುವುದರಿಂದ ಅವಳದು ಕಷ್ಟದ್ದಾದರೂ ಯಶಸ್ವಿ ಕಥನವೆಂದೇ ಹೇಳಬಹುದು.

–ಎಚ್ ಎಲ್ ಪುಷ್ಪ, ನಿವೃತ್ತ ಅಧ್ಯಾಪಕಿ, ಲೇಖಕಿ, ಬೆಂಗಳೂರು

ಬದುಕಿನ ಕೇಂದ್ರ ನಾನೇ



ವಿಷಾದವು ಅಸಹಾಕತೆಯಿಂದ ಹುಟ್ಟುವಂಥದ್ದು. ಯಾವ ಕೆಲಸವೂ ನನ್ನ ಬಳಿ ಅಸಾಧ್ಯ ಎಂಬ ಮಾತೇ ಇಲ್ಲ. ವ್ಯವಸ್ಥೆ ಹಾಕಿದ ಅನಗತ್ಯ 'ಮಡಿವಂತಿಕೆಯನ್ನು ಮೀರುವ ಮನೋಬಲ' ನನ್ನಲ್ಲಿದೆ. ಅಸಹಾಯಕತೆ ತೊಲಗಲು ಸ್ತ್ರೀಯೊಬ್ಬಳಿಗೆ 'ಉನ್ನತ ಶಿಕ್ಷಣ'ದ ಅಗತ್ಯವಿದೆ. ನನ್ನ ಅಂತರಾಳದ ಶಕ್ತಿಕೇಂದ್ರ ನಾನೇ ಆಗಿದ್ದೇನೆ. ಎಲ್ಲಕ್ಕೂ ಮುನ್ನುಗ್ಗುವುದರಿಂದ ಸಿಗುವ 'ಆತ್ಮವಿಶ್ವಾಸ' ಇದು. ಮದುವೆಯ ನಂತರ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದೆ. ಮೂವತ್ತರ ನಂತರ ಬರವಣಿಗೆ ಕಲಿತೆ. ನಲವತ್ತರ ನಂತರ ಸ್ಕೂಟಿ, ಕಾರು ಚಲಾಯಿಸುವದನ್ನು ಮತ್ತು ಕಂಪ್ಯೂಟರ್ ಉಪಯೋಗವನ್ನು ಕಲಿತೆ. ಹೊಸ ಹೊಸ ಸಂಗತಿಗಳ 'ಕಲಿಕೆಯ ವಿಸ್ತಾರ'ವೂ ನಮ್ಮನ್ನು ಮೇಲ್‌ಸ್ತರಕ್ಕೆ ಒಯ್ಯುತ್ತದೆ.

ಓದು ಮತ್ತು ಬರವಣಿಗೆ ನನಗೆ ಎಲ್ಲ ಅಸಹನೆಗಳನ್ನು ಮೀರುವುದು ಹೇಗೆಂದು ಹೇಳಿ ಕೊಟ್ಟಿದೆ. ಸಕಾರಾತ್ಮಕ ಚಿಂತನೆ ನನ್ನ ಆತ್ಮಬಲವನ್ನು ಹೆಚ್ಚಿಸಿದೆ. ನನಗೆ ಯಾವುದು ಸರಿ ಎನಿಸುತ್ತದೆ ಅದು ನಾನು ಕಂಡುಕೊಂಡ ಸತ್ಯ. ನನ್ನ ಬದುಕಿನ ಸತ್ಯ ಶೋಧನೆಗಾಗಿ ನಾನು ಇನ್ನೊಬ್ಬರನ್ನು ಅವಲಂಬಿಸಿಕೊಂಡಿಲ್ಲ. ಈ 'ಸ್ವತಂತ್ರ ಆಲೋಚನಾ ಶಕ್ತಿ'ಯೇ ನಮ್ಮ ನರನಾಡಿಗಳಲ್ಲಿ ಚೈತನ್ಯ ತುಂಬುತ್ತದೆ. ಹಳಹಳಿಕೆಯಿಲ್ಲ, ನಂಜಿಲ್ಲ, ನಂಬಿಕೆಯಿದೆ, ಗಾಳಿಯಲ್ಲಿ ತೇಲಿ ಹೋಗುವ ಹಗುರವಾದ ಮಾತುಗಳನ್ನು ನಾನು ಎಂದಿಗೂ ಯಾರೊಂದಿಗೂ ಆಡುವುದಿಲ್ಲ. ಅನುಕಂಪ ಕರುಣೆಗಳನ್ನು ಅಪೇಕ್ಷಿಸುವುದೂ ಇಲ್ಲ. ಸೂಕ್ಷ್ಮಮತಿತ್ವ, ಸಂಯಮ, ಮಾನವೀಯತೆಯೇ ಮೂಲ ದೈವ, ಪೆನ್ನು ಕೆಳಮುಖದಲ್ಲಿದ್ದರೆ ಮಾತ್ರ ಬರೆಯಲು ಸಾಧ್ಯ ಎಂಬಂತೆ ಅಹಂಕಾರ ನಮ್ಮ ವ್ಯಕ್ತಿತ್ವವನ್ನು ನಾಶಪಡಿಸುತ್ತದೆ. ನೆಲಮೂಲ ಸಂವೇದನೆ ಅಗತ್ಯ. ಓದು ಮೌಢ್ಯ ಮತ್ತು ಅಜ್ಞಾನವನ್ನು ಓಡಿಸುತ್ತದೆ. ಜ್ಞಾನದ ಬೆಳಕಿನಲ್ಲಿ ಮಿಂಚುವವಳನ್ನು ಯಾರೂ ಅವಮಾನಿಸಲು ಧೂಷಿಸಲು ಸಾಧ್ಯವಿಲ್ಲ. ನನ್ನ ಬದುಕಿನ ಕೇಂದ್ರ ನಾನೇ ಎಂಬುದಕ್ಕೇ ಈ ಹೆಮ್ಮೆ.

–ಸುನಂದಾ ಕಡಮೆ, ಗೃಹಿಣಿ, ಲೇಖಕಿ, ಹುಬ್ಬಳ್ಳಿ

ಹೆಣ್ಣಾಗಿರುವುದಕ್ಕೆ ಹೆಮ್ಮೆ; ಆದರೆ ಈ ಭಾರತದಲ್ಲಿ ಹುಟ್ಟಿದುದಕ್ಕೆ ವಿಷಾದವಿದೆ



ಮಹಿಳಾ ಸಂಚಿಕೆಗಾಗಿ ಪತ್ರಿಕೆಯ ಸಂಪಾದಕರು ಕೇಳಿರುವ ಪ್ರಶ್ನೆ ನೋಡಿ 'ಲೋಕದಲ್ಲಿ ಜೀವಲೋಕವೇ ಒಂದು ಅತ್ಯದ್ಭುತ ಕಾವ್ಯ, ಅಂತಹ ಜೀವಲೋಕದಲ್ಲಿ ಮನುಷ್ಯ ಜೀವವೇ ಒಂದು ಪರಿಪೂರ್ಣ ವ್ಯವಸ್ಥೆ. ಅಂಥ ಮನುಷ್ಯ ಜನ್ಮದ ಹೊರುವ, ಹೆರುವ, ಪೊರೆಯುವ ಜೀವವಾದ ಹೆಣ್ಣು ಜನ್ಮ, ಸೃಷ್ಟಿಯ ಬೆರಗುಗಳೆಲ್ಲಾ ಒಂದುಗೂಡಿ ಜೀವ ತಳೆದ 'ಅವಸ್ಥೆ', ಹೀಗೆ ಯೋಚಿಸುತ್ತಾ ತಲೆಯೆತ್ತಿ ನೋಡಿದರೆ ತಪಾಸಣೆಗಾಗಿ ಓಪಿಡಿಯಲ್ಲಿ ಕಾಯುತ್ತಾ ಕುಳಿತಿದ್ದ ಹೆಣ್ಣುಮಕ್ಕಳ ಸಾಲು ಕಂಡಿತು. ಅವರ ಉತ್ತರ ಕೇಳುವ ಕುತೂಹಲದಿಂದ ಈ ಪ್ರಶ್ನೆಯನ್ನು ಅವರಿಗೆ ಕೇಳಿದೆ.

ಹೊಸದಾಗಿ ಮದುವೆಯಾದ ಎಳೆಬಾಲೆ ಬಸುರಿನ ವಾಂತಿಗೆ ಸುಸ್ತಾಗಿ ಕುಳಿತಿದ್ದರೂ ಸಂಭ್ರಮದಿಂದ ಹೇಳಿದಳು: 'ಹೌದಲ್ವಾ ಹೆಣ್ಣು ಎಂದರೆ ಜವಾಬ್ದಾರಿ, ನಾನಿಲ್ಲಿ ಹುಷಾರು ತಪ್ಪಿ ಮಲಗಿದರೆ ಊಟಕ್ಕಾಗಿ ನನ್ನನ್ನೇ ನಂಬಿರುವ ವಯಸ್ಸಾದ ಅತ್ತೆ–ಮಾವ, ಬೆಳಿಗ್ಗೆ ಆರಕ್ಕೇ ಕೆಲಸಕ್ಕೆ ತಯಾರಾಗುವ ನನ್ನ ಗಂಡ ಎಲ್ಲರೂ ಚಡಪಡಿಸುತ್ತಾರೆ. ನನಗೆ ಎಷ್ಟೊಂದು ಜವಾಬ್ದಾರಿಗಳು ಮತ್ತು ಆ ಜವಾಬ್ದಾರಿಗಳನ್ನು ನಿಭಾಯಿಸುವ ನಾನು ಹೆಣ್ಣಾಗಿ ಹುಟ್ಟಿದ್ದು ಅತ್ಯಂತ ಹೆಮ್ಮೆಯ ವಿಷಯ' ಅಂತ ಗೆಲುವಾದಳು.

ನನಗೂ ಹೆಮ್ಮೆಯೇ ಎಂದು ಅಲ್ಲೇ ನಿಂತಿದ್ದ ಎರಡು ಮಕ್ಕಳ ತಾಯಾದ ತರುಣಿ ದನಿಗೂಡಿಸಿದಳು. 'ಹೆಣ್ಣೆಂದರೆ ತ್ಯಾಗ, ಕುಟುಂಬಕ್ಕಾಗಿ ಎಷ್ಟೆಲ್ಲಾ ನಮ್ಮ ಆಸೆಗಳನ್ನು ಅದುಮಿಟ್ಟುಕೊಂಡು ಜೀವಿಸುತ್ತೀವಲ್ಲಾ. ಹೆಣ್ಣಿನ ಬದುಕೇ ಈ ತ್ಯಾಗ ಎನ್ನುವ ಉದಾತ್ತತೆಯಲ್ಲಿ ಚಲಿಸುವುದರಿಂದ ಹೆಣ್ಣಾಗಿರುವುದು ನನಗೆ ಹೆಮ್ಮೆಯ ವಿಷಯ' ಎಂದಳು. ಉಳಿದವರು ಏನೂ ಹೇಳಲಾರದೆ ನಸುನಕ್ಕು ನಿಂತರು.

ವಕೀಲ ವೃತ್ತಿಯ ಮತ್ತೊಬ್ಬರು 'ಜೀವಂತ ಮಹಿಳೆಯನ್ನು ಗಂಡ ಸತ್ತ ಕಾರಣಕ್ಕೆ ಬೆಂಕಿಗೆ ದೂಡಿ ಸಾಯಿಸುವುದನ್ನು ಸಂಭ್ರಮಿಸುವ, ಬದುಕಿನ ಹಕ್ಕನ್ನೇ ನಿರಾಕರಿಸಿದ, ಆ ಜೀವಕ್ಕೆ ಸತ್ತ ನಂತರ ಗುಡಿ ಕಟ್ಟಿ ಪೂಜಿಸುವ ವಿಕೃತ ಮನಸ್ಥಿತಿಗಳೇ ವಿಜೃಂಬಿಸುತ್ತಿರುವಂತಹ ಕಾಲದಲ್ಲಿ, ಹಿಜಾಬನ್ನು ಒಂದು ಕಾರಣವಾಗಿಸಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಮೇಲೆ ಕೆಟ್ಟ ಕಣ್ಣು ಹಾಕಿರುವ ಶಕ್ತಿಗಳ ಮಧ್ಯೆ ನಾವಿದ್ದೇವೆ. ಮುಟ್ಟನ್ನು ಮೈಲಿಗೆಯಾಗಿ ನೋಡಿ ಆ ಕಾರಣಕ್ಕೆ ದೇವಸ್ಥಾನ ಪ್ರವೇಶ ನಿರಾಕರಿಸುತ್ತಾ ಹೆಣ್ಣಿನ

ಘನತೆಯ ಮೇಲೆ ನಿರಂತರ ದಾಳಿ ಮಾಡುವ ಮನೋಸ್ಥಿತಿ ಎಲ್ಲೆಲ್ಲೂ ಕಾಣಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾನು ಹೆಣ್ಣಾಗಿರುವುದಕ್ಕೆ ನನಗೆ ಹೆಮ್ಮೆ ಇದೆ. ಆದರೆ ಭಾರತದಲ್ಲಿ ಹುಟ್ಟಿದುದಕ್ಕೆ ವಿಷಾದವಿದೆ.

–ಡಾ. ಅರುಂಧತಿ ಡಿ, ಸ್ತ್ರೀರೋಗ ತಜ್ಞೆ, ಲೇಖಕಿ, ತುಮಕೂರು

ಸರಿ ಹೋಗುವಂತೇನೂ ಕಾಣುತ್ತಿಲ್ಲ...



ಹೆಣ್ಣಾಗಿ ಹುಟ್ಟಿದ್ದಕ್ಕಾಗಿ ನಮಗೆ ವಿಷಾದವೇನಿಲ್ಲ. ಆದರೆ, ನಮ್ಮ ಸಮಾಜದಲ್ಲಿ ಬಹುತೇಕ ಗಂಡುಗಳಲ್ಲಿ ತಮ್ಮ ಜನ್ಮಸಿದ್ಧ ಹಕ್ಕೆಂಬಂತೆ ಉಳಿದೇಬಿಟ್ಟಿರುವ ಪಿತೃಪ್ರಧಾನ ವ್ಯವಸ್ಥೆಯ ಯಜಮಾನಿಕೆಯ ವರ್ತನೆಯ ಬಗೆಗೆ, ಅಂಥ ಮನಸ್ಥಿತಿಯಿಂದಲೇ ಹೆಣ್ಣನ್ನು ಕಾಣುವ, ಕಾಡುವ ಬಗೆಗೆ, ಯಾವುದೇ ಹೆಣ್ಣನ್ನು ಕನಿಷ್ಠ ಗೌರವದಿಂದಲೂ ಕಾಣದೆ, ಕೆಟ್ಟದಾಗಿ ನಡೆಸಿಕೊಳ್ಳುವುದರ ಬಗೆಗೆ, ಇನ್ನೂ ಮಹಿಳಾ ಸಮಸ್ಯೆಗಳನ್ನು ಕುರಿತು ಮಾತನಾಡಬೇಕಾಗಿರುವುದರ ಬಗೆಗೆ ವಿಷಾದವಿದೆ.

ಹಾಗೆ ನೋಡಿದರೆ ಹೆಣ್ಣಾಗಿ ಹುಟ್ಟಿದ್ದುದಕ್ಕಾಗಿ, ಖಂಡಿತಾ ಹೆಮ್ಮೆಯೂ ಇಲ್ಲ. ಕೇವಲ ಹುಟ್ಟು ಹೆಮ್ಮೆಯಾಗಲು ಹೇಗೆ ಸಾಧ್ಯ? ಈಗಾಗಲೇ 'ಗಂಡಾಗಿ' ಹುಟ್ಟಿದ್ದೇ ಹೆಮ್ಮೆ, ಶ್ರೇಷ್ಠ' ಎಂದು ಬೀಗಿದ್ದರ ಪರಿಣಾಮಗಳನ್ನು ಉಂಡಿದ್ದೇವೆ. 'ಹೆಣ್ಣು ಭ್ರೂಣ ಹತ್ಯೆ'ಯಂಥ ದುಷ್ಟ ಮನಸ್ಥಿತಿಗಳಿದಿದ್ದನ್ನೂ ಕಂಡಿದ್ದೇವೆ, ಕಾಣುತ್ತಿದ್ದೇವೆ! ಹೆಣ್ಣೊ ಗಂಡೊ ಹುಟ್ಟಿದ ಮೇಲೆ ಪರಸ್ಪರ ಯಾರನ್ನೂ ನೋಯಿಸದಂತೆ, ಅವಮಾನಿಸದಂತೆ, ಹೀಯಾಳಿಸದಂತೆ, ನಿಕೃಷ್ಟವಾಗಿ ಕಾಣದಂತೆ ಪರಸ್ಪರ ಗೌರವದಿಂದ ಬದುಕುತ್ತೇವೆಯೇ? ಎನ್ನುವುದು ಮುಖ್ಯವಾಗಬೇಕು.

ಜೀವ ವಿಕಾಸದ ಪ್ರಕ್ರಿಯೆಯಲ್ಲಿ ಹೆಣ್ಣು ಗಂಡೆಂಬ ಯಾವ ಹೆಚ್ಚುಗಾರಿಕೆಯೂ ಇಲ್ಲ. ಇಬ್ಬರಲ್ಲೂ ಒಳಿತು ಕೆಡುಕಿನ ಭಾವನೆಗಳಿವೆ. ಇಬ್ಬರಿಂದಲೂ ಬದುಕು ಮುನ್ನಡೆಯಬೇಕು, ಒಟ್ಟಿಗೆ ಬದುಕಬೇಕೆಂದು ನಿರ್ಧರಿಸಿದ ಮೇಲೆ, ಅವರವರ ಆಸಕ್ತಿಗಳನ್ನು ಪರಸ್ಪರ ಗೌರವಿಸಿ, ಇಬ್ಬರೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗುತ್ತದೆ. ಬದಲಾದ ಕಾಲಮಾನದಲ್ಲಿ ಒಂದಿಷ್ಟು ಬದಲಾವಣೆ ಕಂಡಿರುವುದೇನೋ ಹೌದು. ಬೆರಳ ತುದಿಯಲ್ಲೇ ಜಗತ್ತು ಸುತ್ತುವಷ್ಟು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧನೆಯ ಎತ್ತರಕ್ಕೇರಿದ್ದರೂ ಜಾತಿ, ಧರ್ಮ, ಹಣ, ಬಣ್ಣ, ಅಧಿಕಾರ, ಸೌಂದರ್ಯ, ಪದವಿ, ಕೀರ್ತಿ, ಪ್ರತಿಷ್ಠೆ, ಪ್ರದರ್ಶನ... ಇವೇ ಮುಂತಾದ ಹಾಳುಮೂಳುಗಳನ್ನೆಲ್ಲ ಸಿಕ್ಕಿಸಿಕೊಂಡು ಬೀಗುವುದರಲ್ಲೇ ಬದುಕನ್ನು ಹೈರಾಣಾಗಿಸಿಕೊಂಡಿದ್ದೇ ಹೆಚ್ಚು. ಈಗಿನ ಮನಸ್ಥಿತಿಯನ್ನು ಗಮನಿಸಿದರೆ, ಸದ್ಯಕ್ಕೆ ಸರಿಹೋಗುವಂತೇನೂ ಕಾಣುತ್ತಿಲ್ಲ.

–ಗೀತಾ ಡಿ.ಸಿ., ಅಧ್ಯಾಪಕಿ, ಲೇಖಕಿ, ಬೆಂಗಳೂರು

ಅಭಿಮಾನ ಕೆರಳುತ್ತದೆ; ವ್ಯಗ್ರತೆಯೂ



ಹೆಣ್ಣಾಗಿ ಹುಟ್ಟಿದ್ದಕ್ಕೆ ಹೆಮ್ಮೆ, ವಿಷಾದ ಎರಡೂ ನನ್ನಲ್ಲಿಲ್ಲ. ಅಪ್ಪ ಅಮ್ಮನ ಒಂದು ಸಮ್ಮಿಲನದಲ್ಲಿ ಫಲಿಸಿದ ಜೀವ ಈ ನಾನು. ಜೈವಿಕವಾಗಿ ಹೆಣ್ಣೆಂದು ಗುರುತಿಸಲ್ಪಟ್ಟಿರುವೆ. ಆದರೂ ನಿಮ್ಮಿಂದ ಈ ಪ್ರಶ್ನೆ ಎದುರಾದಾಗ ಒಂದು ವೇಳೆ ಹುಟ್ಟಿಗೆ ಆಯ್ಕೆ ಇದ್ದಿದ್ದರೆ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ ಎಂಬ ಪ್ರಶ್ನೆ ಎದುರಾಯಿತು. ಹೆಣ್ಣಾಗಿ ಹುಟ್ಟಿದ್ದರಿಂದಲೇ ಅನುಭವಿಸುತ್ತಿರುವ ಉಸಿರುಗಟ್ಟಿಸುವ ವಾತಾವರಣ, ಜೈವಿಕ ನೋವುಗಳು, ಹೆಣ್ಣು ದೇಹವೆಂಬ ಗುರುತಿನಿಂದಾಗಿ ಗಂಡೆಂದು ಗುರುತಿಸಿಕೊಂಡ ಜೀವಿಗಳಿಂದ ಕೆಲವೊಮ್ಮೆ ಎದುರಿಸುವ ಮುಜುಗರಗಳು, ಹೆಣ್ಣೆಂಬ ಕಾರಣದಿಂದಲೇ ಮನೆಯೊಳಗಿನ ನಿಷೇಧಗಳು, ಮನೆಯಾಚೆ ಎದುರಾಗುವ ನಿರ್ಬಂಧಗಳು, ಅವಮಾನಗಳು, ಅನಾರೋಗ್ಯಗಳು ಇವೆಲ್ಲವುಗಳನ್ನು ಅನುಭವಿಸುವಾಗಲೂ ಹೆಣ್ಣಾಗಿ ಹುಟ್ಟಿದ್ದರಿಂದಲೇ ಈ ಅವಸ್ಥೆ ಪಡಬೇಕಾಯಿತು ಎಂಬ ವಿಷಾದ ಕಾಡಲಿಲ್ಲ. ಏಕೆಂದರೆ, ಹಾಗಂದುಕೊಳ್ಳುವುದನ್ನು ಯೋಚಿಸುವಾಗಲೇ ಅಭಿಮಾನ ಕೆರಳುತ್ತದೆ. ಆದರೆ, ಹೆಣ್ಣಿಗೆ ಹೆಣ್ಣಿನದೇ ಆದ ಅವಕಾಶಗಳಿಂದ ವಂಚಿಸಿ, ಹೆಣ್ಣು-ಗಂಡೆಂಬ ಗುರುತಿಗೆ ಈ ಪಿತೃ ಪ್ರಧಾನ ಯಜಮಾನಿಕೆಯ ವ್ಯವಸ್ಥೆ ತಂದಿಟ್ಟ ಜೀವ ವಿರೋಧಿ ದುರ್ದೆಸೆಗೆ, ಅದರಿಂದಾಗಿಯೇ ಸಹಜವಾಗಿ ಬಾಳಲಾಗದೆ ಈ ಗಂಡು-ಹೆಣ್ಣೆಂಬ ಮನುಷ್ಯ ಜೀವಿಗಳು ಪಡುತ್ತಿರುವ ಎಣೆಯಿಲ್ಲದ ಹಿಂಸೆಗೆ ವ್ಯಗ್ರತೆ ಇದೆ.

–ಅನುಪಮಾ ಪ್ರಸಾದ್, ಗೃಹಿಣಿ, ಕತೆಗಾರ್ತಿ, ಬೆಂಗಳೂರು

'ಹೆಣ್ಣು ಸತ್ವ' ಊಹೆಗೂ ನಿಲುಕದ ಆಳ ವಿಸ್ತಾರವುಳ್ಳದ್ದು.

ಹೆಣ್ಣಾಗಿ ಹುಟ್ಟುವುದೆಂದರೆ ಸಾಮಾನ್ಯವೇ? ಸಮಾಜ ಮತ್ತು ಮನಸುಗಳ ಎಂದೂ ಸವೆಯದ ಮೌಢ್ಯದ ಪರಿಣಾಮವಾಗಿ ಹೆಣ್ಣು ತಾಳಿಕೊಂಡು ಬಂದ ಅಪಮಾನ, ತಾರತಮ್ಯ, ಅವಕಾಶ ವಂಚನೆ, ಮಾನಸಿಕ – ದೈಹಿಕ ದಂಡನೆ ಇವನ್ನೆಲ್ಲ ಕಂಡರೆ 'ಹಾ! ಹೆಣ್ಣು



ಜನ್ಮವೇ!' ಅನಿಸದಿರದು. ವಿಷಾದ ಕವಿಯದಿರದು. ಆದರೆ ಇವೆಲ್ಲ ಹೆಣ್ಣಿನ ವ್ಯಕ್ತಿತ್ವದ ಹೊರತಾಗಿ, ಬಾಹ್ಯದಿಂದ ಉಂಟಾಗುವ ಸಂಕಟಗಳಲ್ಲವೇ?

'ಹೆಣ್ಣು ಸತ್ವ' ಊಹೆಗೂ ನಿಲುಕದ ಆಳ ವಿಸ್ತಾರವುಳ್ಳದ್ದು. ಹೆಣ್ಣಿನ ಕ್ರಿಯಾಶೀಲತೆ, ಧಾರಣಾಶಕ್ತಿ, ಛಲ, ಜಾಣ್ಮೆ, ಸಹನೆ, ಮನೋಬಲ, ರೋಷ, ಮಾರ್ದವತೆ, ಮಮತೆ, ಕಾಠಿಣ್ಯ – ಇವೆಲ್ಲ ಶತಮಾನಗಳಿಂದ ಬದುಕಿನ ಅನೇಕ ಕೊಂಡಗಳನ್ನು ಹಾದು ಬರುವಲ್ಲಿ ಆಕೆಗೆ ನೆರವಾಗಿವೆ.

ನನ್ನ ಪ್ರಕಾರ ಜಗತ್ತು ಉಳಿದಿರುವುದೇ 'ಹೆಣ್ಣು ಸತ್ವ'ದಿಂದ. ಆಕೆ ಮೂಲತಃ ಸಂಗೋಪಕಿ. ತಾನು ಮುಟ್ಟಿದ್ದೆಲ್ಲಕ್ಕೂ ಉಸಿರು ತುಂಬುವಳು. ಎಂದಾದರೂ ಯಾವುದಾದರೂ ಯುದ್ಧಕ್ಕೆ, ರಕ್ತಪಾತಕ್ಕೆ ಆಕೆ ನೇರ ಕರ್ತೃ ಆದ ಪ್ರಸಂಗವಿದೆಯೇ? ಆಕೆಯನ್ನು ಇದಿರಿಟ್ಟುಕೊಂಡು, ಅಥವಾ ಪಣಕ್ಕಿಟ್ಟು, ಆಕೆಯನ್ನು ಪಡೆಯಲು, ಆಕೆಯನ್ನು ಹಣಿಯಲು ಪುರುಷರು ಕಾದಾಡಿದ ಸಾವಿರ ಸಾವಿರ ಉದಾಹರಣೆಗಳೇ ಕಣ್ಮುಂದಿವೆ. ಹೆಣ್ಣು ಅನೇಕ ಗುಣಗಳ ಗಣಿಯಾದ್ದರಿಂದಲೇ ಸಮಾಜಕ್ಕೆ ಆಕೆಯನ್ನು ಎಂತಾದರೂ ದಮನಿಸಿ ತನ್ನ ಅಂಕುಶದ ಅಳವಿನೊಳಗೆ ಇರಿಸಿಕೊಳ್ಳಬೇಕೆಂಬ ಹಂಬಲ, ಯಾವತ್ತೂ.

ಹೆಣ್ಣನ್ನು ಗೌರವಿಸುವ, ಅವಳಿಗೆ ಅನಾವಶ್ಯ ತಡೆಯೊಡ್ಡದಿರುವ ಪ್ರಬುದ್ಧತೆ ಹಾಗೂ ವಿಕಸಿತ ಮನಸುಗಳಿರುವ ಸಮಾಜದಲ್ಲಿ ಹೆಣ್ಣಾಗಿ ಹುಟ್ಟಿ ಗೌರವಾನ್ವಿತ ಜೀವವಾಗಿ ಬಾಳುವುದು ಎಂತಹ ಆಪ್ಯಾಯಮಾನ ಸಂಗತಿ! ಇಂದಿಗೂ ಹೆಣ್ಣಿನ ಕುರಿತು ಹೇಳಬೇಕಾದಾಗ ಇನ್ನೂ ಇದನ್ನೇ ಎಲ್ಲ ಹೇಳಬೇಕಾದ ಅನಿವಾರ್ಯವಿದೆ ಎಂದರೆ ಹೆಣ್ಣಿನ ಕುರಿತು ಸಾಮಾಜಿಕ ತಿಳಿವಿನಲ್ಲಿ ಅದೆಷ್ಟು ಗಾಢ ಮಂಕು ಕವಿದುಕೊಂಡಿದೆ ಎಂಬುದು ನಿಜಕ್ಕೂ ವಿಷಾದನೀಯ! ಹೆಣ್ಣಾಗಿ ಹುಟ್ಟುವುದಲ್ಲ.

–ನಯನಾ ಕಾಶ್ಯಪ್, ಅಧ್ಯಾಪಕಿ, ಲೇಖಕಿ ಮಡಿಕೇರಿ

ಹೆಣ್ಣಾಗಿ ಹುಟ್ಟಿದ್ದಕ್ಕೆ ವಿಷಾದ ಮತ್ತು ಹೆಮ್ಮೆ ಎರಡೂ ಇದೆ.




ವ್ಯವಸ್ಥೆಯಲ್ಲಿ ತಾರತಮ್ಯ ಧೋರಣೆ, ಅನೇಕ ಪುರುಷ ಮನಸ್ಸುಗಳಲ್ಲಿನ ಕೊಳಕುತನ, ಮಹಿಳೆಯರ ಏಳಿಗೆ ಬಗ್ಗೆ ವಿಕೃತ ಮನೋಭಾವ ಕೆಲಸ ಮಾಡುವುದನ್ನು ಕಂಡಾಗ ವಿಷಾದವೆನಿಸುತ್ತದೆ.

ಲಿಂಗ ಸೂಕ್ಷ್ಮತೆಯನ್ನರಿತು ಸ್ಪಂದಿಸುವ ಕೆಲವರನ್ನಾದರೂ ಕಂಡಾಗ, ವ್ಯವಸ್ಥೆಯ ಅಡೆತಡೆಗಳನ್ನು ಲೆಕ್ಕಿಸದೇ ಮೆಟ್ಟಿನಿಂತು ಸಾಧನೆಗೈದು ತಲೆ ಎತ್ತಿ ನಿಂತಾಗ, ಹಾಗೆ ನಿಂತವರನ್ನು ಕಂಡಾಗ ಹೆಣ್ಣಾಗಿ ಹುಟ್ಟಿದ್ದಕ್ಕೆ ಹೆಮ್ಮೆ ಎನಿಸುತ್ತದೆ.

ಹಾಗಾಗಿ ನಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ವಿಷಾದ ಮತ್ತು ಹೆಮ್ಮೆ ಎರಡೂ ಇದೆ.

– ಬಾ.ಹ. ರಮಾ ಕುಮಾರಿ, ಗೃಹಿಣಿ, ಲೇಖಕಿ, ತುಮಕೂರು

ಹೆಣ್ಣನ್ನು ನೋಡುವ ದೃಷ್ಟಿ ಹೀಗಿದೆಯಲ್ಲಾ ಎಂದು ವಿಷಾದವಿದೆ



ಹೆಣ್ಣಾಗಿ ಹುಟ್ಟಿದ್ದಕ್ಕೆ ವಿಷಾದವೇಕೆ? ಸಾಮಾನ್ಯವಾಗಿ ನಾವು ಮಾಡಿದ ಕೆಲಸ, ಬೇರೆಯವರೊಂದಿಗೆ ನಡೆದುಕೊಂಡ ರೀತಿ ಅಥವಾ ಮಾತಾಡಿರುವುದು ನಮಗೆ ಸರಿಯಿಲ್ಲ ಎಂದು ಅನ್ನಿಸಿದಾಗ ಅದರಿಂದ ನಮಗೆ ನಾಚಿಕೆ ಆಗಬಹುದು, ದುಃಖ ಆಗಬಹುದು, ಬೇರೆಯವರ ಮನಸ್ಸನ್ನು ನೋಯಿಸಿದೆನಲ್ಲಾ ಎಂದು ಅನ್ನಿಸಬಹುದು. ಆಗ ನಾವು ಮಾಡಿದ ಕೃತ್ಯಕ್ಕೆ ವಿಷಾದಪಡುತ್ತೇವೆ. ಕೆಲವೊಮ್ಮೆ ನಮ್ಮ ಪ್ರೀತಿ ಪಾತ್ರರನ್ನು ಅಗಲಿದ ದುಃಖದ ಕ್ಷಣದಲ್ಲಿ ಮತ್ತು ಯಾವುದಾದರೂ ಸಮಸ್ಯೆ ಬಗೆಹರಿಸಲಾಗದ್ದು ಎಂದು ಅನಿಸಿದಾಗ ನಮ್ಮ ಮನಸ್ಸಿಗೆ ವಿಷಾದ ಕವಿಯುತ್ತದೆ. ಹೆಣ್ಣಾಗಿ ಹುಟ್ಟಿದ್ದರಿಂದ ವಿಷಾದ ಪಡುವಂತಹದು ನನಗೇನೂ ಕಾಣುತ್ತಿಲ್ಲ. ಈ ಲೋಕದ ಸಜೀವ ನಿರ್ಜೀವ ಅಸ್ತಿತ್ವದ ಭಾಗವಾಗಿ ನಮ್ಮ ಇರುವಿಕೆ ಇದೆ, ನಾವು ಮನುಷ್ಯಜೀವಿಗಳಾಗಿ ಸ್ವತಂತ್ರವಾಗಿ ಹುಟ್ಟಿದ್ದೇವೆ. ಹೆಣ್ಣೆಂಬ ಅಸ್ತಿತ್ವದ ಬಗ್ಗೆ ವಿಷಾದಪಡುವುದರ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇನ್ನು ಹೆಮ್ಮೆ ಪಡುವುದೆಂದರೆ– ನಾವೇನಾದರೂ ಸಾಧನೆ ಮಾಡಿ, ಹೆಣ್ಣಾಗಲೀ, ಗಂಡಾಗಲೀ ಅದರಿಂದ ಸಂತೋಷವಾಗಿದ್ದರೆ ಹೆಮ್ಮೆ ಪಡಬಹುದು. ಅದನ್ನು ಬಿಟ್ಟು ಹೆಣ್ಣಾಗಿ ಹುಟ್ಟಿದ್ದೇವೆ ಎಂಬುದರಲ್ಲಿ ಹೆಮ್ಮೆ ಪಡುವುದೇನಿದೆ? ನಮ್ಮ ಹುಟ್ಟಿಗೆ ನಾವು ಕಾರಣರಲ್ಲ.

ಕೆಲವರು ಹೇಳಬಹುದೇನೋ, ಹೆಣ್ಣಾಗಿ ಹುಟ್ಟಿದ್ದಕ್ಕೆ ಇಷ್ಟೆಲ್ಲಾ ಕಷ್ಟಪಡಬೇಕಾಯಿತು ಎಂದು. ಕಷ್ಟ ಹೆಣ್ಣಿಗೆ ಮಾತ್ರವೇ? ಬಲಾಢ್ಯರು ದುರ್ಬಲರನ್ನು, ಆರ್ಥಿಕವಾಗಿ ಸಬಲರಾಗಿರುವವರು ಬಡವರನ್ನು, ಮೇಲ್ಜಾತಿಯವರು ಕೆಳಜಾತಿಯವರನ್ನು ಶೋಷಣೆ ಮಾಡುತ್ತಲೇ ಇರುತ್ತಾರೆ. ಗಂಡಸರು ಹೆಂಗಸರನ್ನು ದುರ್ಬಲರೆಂದು ನೋಡುತ್ತಾರೆನ್ನುವುದು ಈ ಪ್ರಶ್ನೆಯ ಹಿಂದಿನ ತರ್ಕವೇ? ಹೆಣ್ಣು ಹೆಣ್ಣಾಗಿಯೇ ಇರಬೇಕು, ಗಂಡಸರಂತೆ ಮಾಡಲು ಹೋಗಬಾರದು ಎಂದು ಹೇಳುವುದನ್ನು ಕೇಳಿದ್ದೇವೆ. ಹಾಗೆಂದರೇನು?

ಹೆಣ್ಣು ಎಲ್ಲವನ್ನೂ ಮಾಡಬಲ್ಲಳು, ಪಿತೃಪ್ರಧಾನ ಸಮಾಜ ಹೀಗೆಲ್ಲಾ ಹೇಳಿ ಅವಳ ಸಾಮರ್ಥ್ಯವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತದೆ. ಹೆಣ್ಣನ್ನು ನೋಡುವ ದೃಷ್ಟಿ ಹೀಗಿದೆಯಲ್ಲಾ ಎಂದು ವಿಷಾದಿಸಬೇಕು ಅಷ್ಟೇ...

– ಪದ್ಮಾಕ್ಷಿ ಕೆ., ನಿವೃತ್ತ ಶಿರಸ್ತೇದಾರರು, ವಿಮರ್ಶಕಿ, ಶಿವಮೊಗ್ಗ.

ಹೆಣ್ಣಾಗಿದ್ದಕ್ಕಾಗಿ ಖೇದವಿಲ್ಲ, ಗಂಡಾಗಬೇಕಿತ್ತೆಂದು ಎಂದೂ ಅನಿಸಿಲ್ಲ



ಬಾಲ್ಯದಲ್ಲಿ ನಾನು ಯಾರು? ಏನು? ಎಂದು ತಿಳಿಯದ ವಯಸ್ಸು. ನನ್ನ ತಂದೆ ನನ್ನನ್ನು ತಾವು ಹೋದ ಕಡೆಗೆಲ್ಲಾ ಕರೆದುಕೊಂಡು ಹೋಗುತ್ತಿದ್ದರು. "ಹೆಂಜರಿಕೆ ಸ್ವಭಾವ ಬೇಡಾ ಎಲ್ಲ ಕಡೆ ಮುನ್ನುಗ್ಗಬೇಕು ಅವಕಾಶ ಬಳಸಿಕೊಳ್ಳಬೇಕು" ಎಂದೇ ಅವರ ಉಪದೇಶವಾಗಿತ್ತು. ಹಾಗೇ ನಾನೂ ಸದಾ ಚಟುವಟಿಕೆಯಿಂದ ಇರುತಿದ್ದ ಕಾರಣಕ್ಕೋ ಏನೋ ನನ್ನ ಸುತ್ತಲಿನವರೂ ನನ್ನನ್ನು ಆಸೆ ಮಾಡುತಿದ್ದರು. ಆದ್ದರಿಂದ ನಾನು ಹೆಣ್ಣು ಎಂಬ ಕೀಳರಿಮೆ ಬರಲೇ ಇಲ್ಲ. ನಮ್ಮ ಮನೆಯ ಪಕ್ಕದ ಕುಟುಂಬದಲ್ಲಿ ಮೂರೂ ಗಂಡು ಮಕ್ಕಳಿರುವ ಸಂಸಾರವಿತ್ತು. ಆ ಹೆಂಗಸು ನನ್ನನ್ನು ಮನೆ ಮಗಳಂತೆ ಹಚ್ಚಿಕೊಂಡಿದ್ದರು, ಆಸೆ ಮಾಡುತಿದ್ದರು. ಆದರೆ ಅದೇಕೋ ಆ ಮನೆಯ ಯಜಮಾನ ನನ್ನನ್ನು ತಿರಸ್ಕಾರದಿಂದ ತಾತ್ಸರ ಭಾವದಿಂದ ಕಾಣುತ್ತಿದ್ದುದು ನನ್ನಲ್ಲಿ ಮೊಟ್ಟಮೊದಲ ಬಾರಿ ಬೇಸರ ಮೂಡಿಸಿತ್ತು. ನಮ್ಮ ಅಗ್ರಹಾರದ ಪ್ರತಿ ಮನೆಯಲ್ಲೂ ಕೆಂಪು ಸೀರೆಯುಟ್ಟ ವಿಧವೆ, ವರದಕ್ಷಿಣೆ ಹೊಂದಿಸಲಾಗದೆ ಅವಿವಾಹಿತರಾಗಿಯೇ ಉಳಿದ, ಗಂಡನ ಮನೆ ಬಿಟ್ಟು ಬಂದ, ಗಂಡನಿಂದಲೇ ತವರಿಗೆ ಕಳುಹಿಸಲ್ಪಟ್ಟವರು ಹೀಗೆ ಹೆಣ್ಣು ಮಕ್ಕಳ ಜಗತ್ತನ್ನು ಕಂಡಿದ್ದೆ.

ನಮ್ಮ ಮನೆಯ ವಿಸ್ತರಣೆಯಾಗಿದ್ದ ನಮ್ಮ ಬೀದಿ, ಎಲ್ಲರೂ ಎಲ್ಲಾ ಮನೆಗಳನ್ನೂ ನಮ್ಮ ಮನೆಯಂತೆಯೇ ಭಾವಿಸಿದ್ದೆವು. ಸದಾ ಗಂಡಂದಿರಿಂದ ಬೈಸಿಕೊಳ್ಳುತ್ತಾ ಅವಮಾನಿತಳಾಗಿ ಹಿತ್ತಲಲ್ಲಿ ಕಣ್ಣೀರು ಹಾಕುವವರು, ಗಂಡಂದಿರನ್ನು ಹೆದರಿಸಿ ಅಧಿಕಾರ ಚಲಾಯಿಸುವ ಹೆಂಗಸರು, ಪ್ರೀತಿ ಅನುನಯದಿಂದ ಹೆಣ್ಣು ಮಕ್ಕಳನ್ನು ಆದರಿಸುವ ಗಂಡಸರು. ಹೀಗೇ ನಾನಾ ಬಗೆಯ ಚಿತ್ರಣಗಳು. ಈ ಸಂಗತಿಗಳನ್ನು ನೋಡುತ್ತಾ ಬೆಳೆದ ನನಗೆ ಬದುಕನ್ನು ಕುರಿತು ಸಂಮಿಶ್ರ ಭಾವನೆಗಳು ಮೂಡಿದವು ಎನ್ನಬಹುದೇನೋ. ಹಲವು ಸಂವೇದನೆಗಳಿಗೆ ಪಕ್ಕಾಗುವ ಹೆಂಗಸರ ಭಾವ ಜಗತ್ತು, ಅವರು ಕಟ್ಟಿಕೊಂಡ ಬದುಕು ಆಪ್ಯಾಯವೆನಿಸುತ್ತದೆ ನಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ನನಗೆಂದೂ ಖೇದವೆನಿಸಿಲ್ಲ ನಾನು ಗಂಡಾಗಬೇಕಿತ್ತು ಎಂದು ಯಾವತ್ತೂ ಅನಿಸಿಲ್ಲ.

–ಮಂಜುಳಾ ಎಂ. ರಾಜು, ಗೃಹಿಣಿ, ಅಧ್ಯಾಪಕಿ, ಶಿವಮೊಗ್ಗ

ನಮ್ಮ ಅಹಂ 'ಗಂಡಿ'ನ ಅಹಂನಷ್ಟು ದುರ್ಬಲ ಅಲ್ಲ.



ಮನುಷ್ಯರು ಎಂದು ಕರೆದುಕೊಳ್ಳುವ ಜೀವಿಗಳು ದೇಹದ ಆಧಾರದ ಮೇಲೆ ಎರಡು ಮುಖ್ಯ ಪ್ರಭೇಧಗಳನ್ನು ಗುರುತಿಸಿಕೊಂಡಿದ್ದಾರೆ. ಮೊಲೆ, ಯೋನಿ, ಗರ್ಭಕೋಶ ಇದ್ದವರನ್ನ ಹೆಣ್ಣು ಎಂದು ಕರೆಯುತ್ತಾರೆ. ಶಿಶ್ನ ಇದ್ದರೆ ಗಂಡು.

ಇಷ್ಟಕ್ಕಾಗಿಯೇ ಈ ಪ್ರಭೇಧಗಳಿಗೆ ಪ್ರತ್ಯೇಕವಾಗಿರೊ ಸಾಮಾಜೀಕರಣದ ಮೂಲಕ ಮನುಷ್ಯರು ತಮ್ಮ 'ನಾಗರೀಕತೆ' ಬೆಳೆಸಿಕೊಂಡಿದ್ದಾರೆ. ಸ್ವಾರಸ್ಯ ಇರೊದು ಇಲ್ಲೆ. ಶಿಶ್ನಕ್ಕೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದಾರೆ ಅಂದ್ರೆ ಅದೊಂದು ಇದ್ರೆ ಸಾಕು, ಬೇರೆ ಅಂಗಗಳು ಉದಾಹರಣೆಗೆ ಮೆದುಳು ಅಷ್ಟೇನು ಮುಖ್ಯ ಅಲ್ಲ ಅಥವಾ ಕಣ್ಣಿಲ್ಲದ ಗಂಡಿಗಿಂತ ಕಣ್ಣಿರೊ ಹೆಣ್ಣು ಕೆಳಗೆ. ಕಣ್ಣಿಲ್ಲದ್ದು ಇನ್ನೊಂದು ರೀತಿಯ ದೇಹ ಅಂತ ನೋಡೋಕೆ ಇನ್ನೂ ಕಲಿತುಕೊಂಡಿಲ್ಲ. ಇದಕ್ಕೆ ತಕ್ಕನಾಗಿ ದೇವರು, ವೇದ ಪುರಾಣ ಅಂತೆಲ್ಲ ಕರೆಯುವ ಹಲವು ಕತೆಗಳನ್ನು ಸೃಷ್ಟಿಸಿಕೊಂಡಿದ್ದಲ್ಲದೇ, ಜಾತಿ, ಮತ, ಕುಲ ಎಂಬೆಲ್ಲಾ ರೀತಿಯ ಶ್ರೇಣೀಕರಣವನ್ನ 'ಶುದ್ಧ'ವಾಗಿಟ್ಕೊಂಡಿದಾರೆ.

ಪ್ರಸ್ತುತ ಪ್ರಶ್ನೆ ಏನನ್ನು ಕೇಳ್ತಾ ಇದೆ ಅಂದ್ರೆ ಗರ್ಭಕೋಶ, ಮೊಲೆ ಮತ್ತು ಯೋನಿ ಇರೋದರ ಬಗ್ಗೆ ನಿಮಗೆ ವಿಷಾದವೊ ಹೆಮ್ಮೆಯೊ ಅಂತ. ಇವೆರಡೂ ಪೂರ್ತಿಯಾಗಿರದವರನ್ನ ಲೆಕ್ಕಕ್ಕೆ ತಗೊಳ್ಳಲ್ಲ! ಗರ್ಭಕೋಶ ಇರಬಾರದಿತ್ತು ಅಂತ ನನಗೆ ಅನ್ನಿಸಿದೆ. ಇನ್ನೆರಡು ಪರವಾಗಿಲ್ಲ. ಅವು ಗಂಡು ದೇಹದ ಭಾಗಗಳಿಗಿಂತ ಸುಂದರವಾಗಿವೆ.

ಈ ಸಮಾಜ ಸೃಷ್ಟಿಸಿದ 'ಹೆಣ್ಣು'ತನದ ವಿಷಯಕ್ಕೆ ಬರೋದಾದರೆ, ನನಗೆ ಹೆಮ್ಮೇನೆ ಇದೆ. ಯಾಕಂದ್ರೆ ನಮ್ಮ ಅಹಂ 'ಗಂಡಿ'ನ ಅಹಂನಷ್ಟು ದುರ್ಬಲ ಅಲ್ಲ. ಯಾರಾದ್ರು ಮೇಲಿನ ಗ್ರಹದಿಂದ ಬಂದು ಮನುಷ್ಯ ಸಮಾಜವನ್ನ ನೋಡಿದ್ರೆ ಹೆಣ್ಣು ಅನ್ನುವ ಪ್ರಬೇಧ ಭಾವನಾತ್ಮಕವಾಗಿ ಮತ್ತು ಬೌದ್ಧಿಕವಾಗಿ ಹೆಚ್ಚು ವಿಕಸನಗೊಂಡಿರುವ ಜೀವಿಗಳಾಗಿದ್ದಾರೆ ಮತ್ತು ತಮ್ಮ ಸುತ್ತಮುತ್ತಲಿನ ಪರಿಸರಕ್ಕೆ ಸ್ಪಂದಿಸುವಲ್ಲಿ ಇವರ ಸಂವೇದನೆಗಳು ಬೆಳೆದಿವೆ ಅಂತನೇ ನಮ್ಮನ್ನ ನೋಡೋದು. ಅದರಲ್ಲಿ ಅನುಮಾನನೇ ಇಲ್ಲ.

–ಕೃತಿ ಆರ್, ಕೃಷಿಕರು, ತಾಳಮದ್ದಲೆ ಕಲಾವಿದೆ, ಪುರಪ್ಪೆಮನೆ


೫ನೇ ಪುಟದಿಂದ)

ಇಲ್ಲವಾಗಿದೆ. ನೆಲದ ಸಂಬಂಧೀ ಸ್ಪಂದನಗುಣದಿಂದ ದೂರಬಂದಿದೆ.

ಹೊನ್ನಾರು, ಭೂಮಿ ಹುಣ್ಣಿಮೆ, ಗುಡ್ಡೆ ಹುಣ್ಣಿಮೆ, ಕಾರಬ್ಬ, ಮಳೆಮದ್ದು, ಕೂರಿಗೆ ಪೂಜೆ, ಚೆರಗ ಚೆಲ್ಲುವುದು, ಬೂರಿ ಹಬ್ಬ, ಕರಿಕೊಳ್ಳಿ ಹಾಕುವುದು, ಬೆಳೆಮುಂಬು ಪೂಜೆ, ಎರಕಲು ಗೂಟ, ಕರಡೀಭೂತಪ್ಪ, ಗೊಡ್ಡೀಚಲು ಗರಿ ಇಡೋದು, ಸಂಕ್ರಾಂತಿ ಪೂಜೆ, ರಾಶಿ ಪೂಜೆ, ಕಾಟುಮರಾಯನ ಪೂಜೆ, ಕಿಚ್ಚು ಹಾಯಿಸುವುದು, ಮೇಟಿ ಪೂಜೆ, ಗೂಡು ಪೂಜೆ, ತಿಪ್ಪೆ ಪೂಜೆ, ಗಳೆ ಪೂಜೆ, ಗುಡಿಪಡವ, ಕಂಬಳ, ಹಗ್ಗದ ಓಟ, ಕಣೆ ಹಲಗೆ ಓಟ, ಆಣಿಪೀಣಿ, ಸೋಣೆ ಹಬ್ಬ, ಹಾಲೋಕುಳಿ, ಕೊಕ್ಕಡ ಕೋರಿ, ಕೈಲು ಮಹೂರ್ತ, ಉತ್ತರಿ ಪೂಜೆ ಇತ್ಯಾದಿ ಆಚರಣೆಗಳು ಹಾಗೂ ನೇಗಿಲು, ನೊಗ, ಮೇಣಿ, ದೊಡ್ಡಮೇಣಿ, ಹಗ್ಗ, ಚಿಲಕಣ್ಣಿ, ಮಕಾಡ, ಬಾಯಿಕುಕ್ಕೆ, ಕೊಳದಂಡೆ, ಕುಂಟೆ, ಕುಳ, ತಾಳು, ಅಲುಗು, ಕೂರಿಗೆ ಇತ್ಯಾದಿ ಉಪಕರಣಗಳು ಹಾಗೂ ಅವುಗಳ ಪೂಜಾ ವಿಶೇಷ ಇವೆಲ್ಲವೂ ಇಂದಿನ ಕಿರಿಯ ಪೀಳಿಗೆಗೆ ತುಂಬಾ ಅಪರಿಚಿತವೆನ್ನಿಸುವ ಜಗತ್ತಾಗಿರುವುದು. ಸತ್ಯ, ರೈತರ ಎಷ್ಟೋ ಮಕ್ಕಳಿಗೂ ಇವು ಗೊತ್ತಿರದ ಪದಗಳಾಗಿವೆ. ಏಕೆಂದರೆ ಬಹುತೇಕವಾಗಿ ಈ ಯಾವ ಆಚರಣೆಗಳೂ ಈಗ ಅಷ್ಟಾಗಿ ಚಾಲ್ತಿಯಲ್ಲಿಲ್ಲ. ಇವೆಲ್ಲ ಎತ್ನಿಕ್ ಆಚರಣೆಗಳಾಗಿ ಕಳೆದುಹೋಗಿರುವ ಎತ್ನಿಕ್ ಪದಪುಂಜಗಳು.

ಇಂದು ಕೃಷಿಕ ತಲುಪಿರುವ ದೈನ್ಯ, ಅಭದ್ರ, ಅತಂತ್ರ ಸ್ಥಿತಿಗೆ ಹಳ್ಳಿಗಳಿಂದ ಕಣ್ಮರೆಯಾದ ಸಾಂಪ್ರದಾಯಿಕ ವಾತಾವರಣ ಸಹ ಕಾರಣ. ಕೃಷಿ ಆಚರಣೆಗಳು ಚಿಕ್ಕ–ಚಿಕ್ಕ ಕ್ರಿಯೆಗಳಾದರೂ ಮನಸ್ಸಿಗೆ ಮುದ, ಧೈರ್ಯ, ಆತ್ಮವಿಶ್ವಾಸ ನೀಡುತ್ತಿದ್ದವು. ಪರಸ್ಪರ ಸಂಬಂಧ ಬೆಸೆಯುತ್ತಿದ್ದವು. ಅಂತಹ ವಾತಾವರಣದಿಂದ ಇಂದಿನ ಕೃಷಿಕ ವಂಚಿತನಾಗಿರುವುದೇ ದುರಂತ.

ಹಾಗೆಂದು ಹಿಂದಿನ ಕೃಷಿ ಬದುಕಿನಲ್ಲಿ ಇರುವುದೆಲ್ಲ ಸರಿ ಇತ್ತು ಎಂದೇನಲ್ಲ. ಅಲ್ಲಿಯ ಸಾಂಪ್ರದಾಯಿಕ ನಂಬಿಕೆಗಳಲ್ಲಿ, ಆಚಾರಗಳಲ್ಲಿ ಮೌಢ್ಯವೂ ಇತ್ತು, ಮಹತ್ವವುಳ್ಳದ್ದೂ ಇತ್ತು. ಆದರೆ ಅಲ್ಲಿ ನಿಧಾನ, ವಿವೇಕ, ಒಗ್ಗಟ್ಟು, ಆತುಕೊಳ್ಳುವ ಹೃದಯವಂತಿಕೆ ಯಥೇಚ್ಚವಾಗಿತ್ತು. ಆ ಎಳೆಗಳನ್ನೇ ಇಂದು ಮರಳಿ ಹೆಣೆಯಬೇಕಿದೆ.



(ಲೇಖಕರು ಅನುಭವಿ ಜಲನಿರ್ವಹಣಾ ತಜ್ಞರು ಹಾಗೂ ಲೇಖಕರು)

ಒಂದನೇ ಪುಟದಿಂದ)

ಮಾತು ನಮ್ಮ ಪತ್ರಿಕೆಯ ಪ್ರತಿ ಹೆಜ್ಜೆಯ ಹಿಂದೆಯೂ ಅನುರಣಿಸಿದೆ. ಈ ಅನುರಣನವೇ ಬಹುಶಃ ಪತ್ರಿಕೆಯ ಸಂಪಾದಕೀಯ ಟಿಪ್ಪಣಿಗಳ ಜನಪ್ರಿಯತೆಗೂ ಕಾರಣವಿದ್ದೀತು.

ಈಗಾಗಲೇ ತಿಳಿಸಿರುವಂತೆ ಈ ಸಂಚಿಕೆಯೇ ಪತ್ರಿಕೆಯ ಕೊನೆಯ ಸಂಚಿಕೆ. ನಮ್ಮ ವಿಶೇಷ ಸಂಚಿಕೆಗೆ ಸಿಕ್ಕ ಸ್ವಾಗತ ನಮ್ಮನ್ನು ಕೃತಜ್ಞತೆಯಿಂದ ಆರ್ದ್ರಗೊಳಿಸಿದೆ. ಮಾಡಿರುವ ಕೆಲಸದ ಬಗ್ಗೆ ಸಾರ್ಥಕ ಭಾವವನ್ನು ಮೂಡಿಸಿದೆ. ಪ್ರತಿ ವಿಶೇಷ ಸಂಚಿಕೆಯ ನಂತರ ಮಾಡುತ್ತಿದ್ದಂತೆ ಈ ಬಾರಿಯೂ ನಮ್ಮ ಮುಖ್ಯ ಲೇಖಕರಿಗೆ, ಅನುವಾದಕರಿಗೆ ಮತ್ತು ಕಲಾವಿದರಿಗೆ ಸಾಂಕೇತಿಕವಾಗಿಯಾದರೂ ಸಂಭಾವನೆ ನೀಡಿದ್ದೇವೆ. ಕೆಲವರು ಇದು ಅಗತ್ಯವಿಲ್ಲವೆಂದು ಅದನ್ನು ಪಡೆಯಲು ನಿರಾಕರಿಸಿದ್ದಾರೆ. ಇನ್ನು ಕೆಲವರು ಅದನ್ನು ಪುಸ್ತಕಗಳ ರೂಪದಲ್ಲಿ ಪಡೆದಿದ್ದಾರೆ. ನಗದು ರೂಪದಲ್ಲಿ ನೀಡಲಾದ ಸಂಭಾವನೆಯ ಮೊತ್ತ ಸುಮಾರು ನಲವತ್ತು ಸಾವಿರ ರೂಪಾಯಿಗಳಾದರೆ, ಪುಸ್ತಕ ರೂಪದಲ್ಲಿ ನೀಡಿದ್ದು ಹತ್ತು ಸಾವಿರ ರೂಪಾಯಿಗಳ ಮೌಲ್ಯದ್ದು

ಇನ್ನು ಈ ಸಂದರ್ಭದಲ್ಲಿ ನಾವು ಕೃತಜ್ಞತೆಯಿಂದ ನೆನೆಸಿಕೊಳ್ಳಬೇಕಾದವರೆಂದರೆ ಪತ್ರಿಕೆಯ ಬಗ್ಗೆ ಪ್ರೀತಿಯಿಂದ ಅದರ ಪ್ರತಿ ಸಂಚಿಕೆಯನ್ನೂ ಸುಂದರವಾಗಿ, ಸಕಾಲದಲ್ಲಿ ಮತ್ತು ಸುಲಭ ವೆಚ್ಚದಲ್ಲಿ ಮುದ್ರಿಸಿಕೊಟ್ಟ ಬೆಂಗಳೂರಿನ ರಿಪ್ಲಿಕ ಆಫ್‌ಸೆಟ್‌ನ ಶ್ರೀಯುತ ದಯಾನಂದ ಮತ್ತು ಅವರ ಸಿಬ್ಬಂದಿಯವರನ್ನು. ಹಾಗೇ ಪತ್ರಿಕೆಗೆ ಶುಭಾಶಯ ಜಾಹೀರಾತುಗಳನ್ನು ನೀಡುತ್ತಿದ್ದ ಎಲ್ಲ ಹಿರಿ–ಕಿರಿಯ ಅಭಿಮಾನಿ ಓದುಗರನ್ನು. ಕೊನೆಯದಾಗಿ, ಪತ್ರಿಕೆಯನ್ನು ತಮ್ಮ ಅಧಿಕಾರ ವ್ಯಾಪ್ತಿ ಗ್ರಂಥಾಲಯಗಳಿಗೆ ತರಿಸಿಕೊಳ್ಳುತ್ತಿದ್ದ ಎಲ್ಲ ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳ ಅಧಿಕಾರಿಗಳನ್ನು.

ಹೀಗೆ ತನ್ನ ಅನನ್ಯತೆಯಿಂದ ಕನ್ನಡದ ಅತ್ಯುತ್ತಮ ಮನಸ್ಸುಗಳಿಗೆ ಮೆಚ್ಚುಗೆಯಾಗಿದ್ದ 'ಹೊಸ ಮನುಷ್ಯ' ಪತ್ರಿಕೆಯ ನೆನಪನ್ನು ಹಸಿರಾಗಿರಿಸಲು ನಾವೊಂದು ಯೋಜನೆ ರೂಪಿಸಿದ್ದೇವೆ. ಈ ಯೋಜನೆಯಡಿ ಪತ್ರಿಕೆಯ ಬಾಳುವೆಯ ಹತ್ತು ವರ್ಷಗಳ ಎಲ್ಲ ಸಂಚಿಕೆಗಳ ಸಂಪಾದಕರ ಟಿಪ್ಪಣಿಗಳ ಒಂದು ಸಂಪುಟ; ಹಾಗೇ ಸಾಂಸ್ಕೃತಿಕ ಬಿಡಿ ಟಿಪ್ಪಣಿಗಳ ಇನ್ನೊಂದು ಸಂಪುಟ, ಇದರ ಜೊತೆಗೇ ಸಾರ್ವಕಾಲಿಕ ಪ್ರಸ್ತುತತೆ ಪಡೆದಿರುವ ಆಯ್ದ ಅನುವಾದಿತ ಲೇಖನಗಳ ಒಂದು ಸಂಪುಟ. ಹೀಗೆ ಮೂರು ಸಂಪುಟಗಳ ಪ್ರಕಟಣೆಗೆ ಓದುಗರು ಸ್ಪಂದಿಸುವರು ಎಂದು ಭಾವಿಸುತ್ತೇವೆ. ನಮಸ್ಕಾರ.

–ಸಂಪಾದಕ

ನವಿಲುಗರಿ

ವರುಷಗಳ ಬೆನ್ನು ಬಾಗುತ್ತಿದೆ!

ಕಣ್ಣು ಮಿಟುಕಿಸಲೂ ಹೆಣಗಾಡುತ್ತಿರುವ ನಕ್ಷತ್ರಗಳು. ನಿದ್ರೆಯನ್ನೇ ತೊರೆದ ದಿಗಿಲುಗಣ್ಣ ಇರುಳು, ಛಿದ್ರಗೊಂಡ ಆಗಸದ ಚೂರು ಚಂದ್ರ, ಚಿಗುರಿದೆಲೆಗಳ ಕಿತ್ತು ಕಿತ್ತು ಗುಡ್ಡದಾಚೆ ಎಸೆವ ಗಾಳಿ, ನೆರಳೆಬ್ಬಿಸಿ ನೆಲವನ್ನೇ ನಿಗೂಢಗೊಳಿಸುವ ಬೆಟ್ಟ, ಪುಟ್ಟ ಹುಡುಗಿಯ ಲಂಗದಿಂದುದುರುತ್ತಿರುವ ಸೂರ್ಯಕಾಂತಿ ಹೂ!

ವರುಷಗಳ ಬೆನ್ನು ಬಾಗುತ್ತಿದೆ!



ಮರದ ತುಂಡೊಂದು ಕಣ್ಣೀರಿಡುತ್ತ ತೇಲುತ್ತಿದೆ. ಮರಳಿನಲ್ಲಿ ಮುಖ ಹುದುಗಿಸಿಕೊಂಡವರಿಗೆ ನದಿಯ ಅಸ್ತಿತ್ವದ ಬಗ್ಗೆಯೇ ಅನುಮಾನ! ಶತಮಾನದಿಂದ ನೇಯ್ದ ಬಟ್ಟೆ ಕಂಡಿ ಬಿಟ್ಟಿದೆ. ಕವಿತೆಗಳ ಕಟ್ಟಿದ ಗಾಳಿಪಟ ವಿದ್ಯುತ್ ತಂತಿಗೆ ಸಿಕ್ಕಿ ಚರ ಚರ! ಅಕ್ಷರಗಳು ಕಿಡಿಯಾಗಿ ಸಿಡಿಯುತ್ತಿವೆ.

ತನ್ನ ಹೊಳೆವ ಬಣ್ಣಗಳ ಕಿತ್ತು, ಸಿಕ್ಕಲ್ಲೆಲ್ಲ ಎರಚಿ ರಾಡಿಗೊಳಿಸುತ್ತಿರುವವರನ್ನು ಚಿಟ್ಟೆಯೊಂದು ತಬ್ಬಿಬ್ಬಾಗಿ ನೋಡುತ್ತಿದೆ!

–ಎಂ.ಆರ್. ಕಮಲ


ನಂಜು ಮೀರಿದ ದಿನ

ಮೊದಲೆಲ್ಲ ನನಗೆ
ತಿಳಿದಿರಲೇ ಇಲ್ಲ
ಕಣ್ಣೀರ ಹನಿಗಳನ್ನು
ಹಾರವಾಗಿಸಿ ಧರಿಸಬಹುದೆಂದು!
ಈಗ ಗೆಳತಿಯರು ಸಿಕ್ಕಾಗ
ಕೇಳುತ್ತಾರೆ
ಚಂದದ ಸರ?.
ಎಲ್ಲಿಕೊಂಡುಕೊಂಡೆ?
ನಗುನಗುತ್ತಾ ಯಾವುದೋ
ಆನ್ಲೈನ್ ಶಾಪಿನ ಸುಳ್ಳು
ಹೆಸರು ಉಸುರುವಾಗೆಲ್ಲ
ಕಣ್ಣೀರ ಹನಿಗಳು
ಹರಳುಗಟ್ಟುತ್ತವೆ
ಬಣ್ಣ ಆಕಾರ ಬದಲಿಸಿ
ಕಲ್ಪನೆಯ ಮೂಸೆಯಲ್ಲಿ ಕರಗಿಸಿ
ಸರ ಕೈಬಳೆ
ಜುಮುಕಿ ನತ್ತುಗಳಾಗಿಸಿ
ಧರಿಸಿ ಸಿಂಗಾರಗೊಳ್ಳುತ್ತೇನೆ
ವಿಷಾದವನ್ನು ಎದೆಯೊಳಗೆ
ನೂಕುತ್ತಾ

ಕೆಲವು ಹನಿಗಳು ಮಾತ್ರ
ಮುತ್ತೋ ಹರಳೋ
ಕತೆಯೋ ಕವಿತೆಯೋ
ಆಗಲು ಕೇಳುವುದೇ ಇಲ್ಲ
ಅಂತಹ ಹಟಮಾರಿ
ಕಂಬನಿಕಲೆಗಳನ್ನು
ಜೀವಕೋಶಗಳ ತಳದಲ್ಲಿ
ಕಾಪಿಟ್ಟುಕೊಳ್ಳುತ್ತೇನೆ
ತುಟಿಗಳು ನಗೆಯ ಹೊಗೆ
ಧರಿಸಿದರೂ
ರಕ್ತದ ಕಣಗಳು
ಕಂಬನಿಯ ನಂಜು ಹೊತ್ತಿವೆ
ನಂಜು ಮೀರಿದ ದಿನ
ಅಸಹಾಯಕ ನಗು
ಸಾಯುತ್ತದೆ



–ವಿಜಯಶ್ರೀ ಹಾಲಾಡಿ







ಚಿತ್ರಗಳು: **ವಿಜಯಶ್ರೀ ಹಾಲಾಡಿ**

ಹಗುರ–ಭಾರ



ನಿನ್ನ
ಮೌನವು ಘನ
ದುಃಖವು ಹೆಮ್ಮರ
ಕೋಪಕ್ಕೆ ವ್ಯಾಖ್ಯಾನವಿದೆ
ನಿಟ್ಟುಸಿರು ತೇವ ತೇವ
ನಡಿಗೆಯ ಗತಿಯು ತೀವ್ರ

ಮನೆಯ ಗಡಿಯಾರದ
ಮುಳ್ಳು ಹಿಂದೆ ಮುಂದೆ
ಎಷ್ಟೋ ಬಚ್ಚಿಟ್ಟ ಮಾತು
ಮುಚ್ಚಿಟ್ಟ ಬದುಕ ಪಟ
ಮೆಟ್ಟಿದ ಹಾವುಗೆಯ ಸವೆಸಿದ
ಏಕ ಶಿಲೆಯ ಕೆಳಗಿನ ವಿಹಾರ

ಎಲ್ಲವೂ ಕಬ್ಬಿಣದ ಸಂದೂಕದ
ತಳದಲ್ಲಿ ದಿಮ್ಮನಾಗಿ ಕೂತಿವೆ
ಹಾಗೆಯೇ ಕಾದಂತಿವೆ –
ಒಂದು ದಿವಿನಾದ ತಕ್ಕಡಿಗೆ,
ಅಳತೆಯೇ ಇರದ ತೂಕದ ಬೊಟ್ಟುಗಳಿಗೆ...

ಆದರೂ ರಸ್ತೆಗೆ ಬೆನ್ನು ಹಾಕಿದ
ಕಿಟಕಿಯಲ್ಲಿ ತದೇಕ ದಿಟ್ಟಿಸುವೆ
ನಿನ್ನ ಮನೆಯ ಮೇಲೆ ಕಪ್ಪಗಿನ
ಮೋಡಗಳು ರಪ ರಪ ಮಳೆ
ಸುರಿದು ಸಾಪಾಗಿ ಕಾಣಲು ಸಿಗಬಹುದು
ಮಣ್ಣಲಿ ಬಿದ್ದ ಒಂದು ಹಕ್ಕಿ ಪುಕ್ಕ
ಗಾಳಿಗೆ ಅದರ ಪಟ ಪಟ ಬಡಿತ....

–ಪವಿತ್ರ ಪ್ರಿಯಭಾಷಿಣಿ

‘ನಕ್ಷತ್ರದ ಜೊತೆಗೊಂದು ಡೇಟಿಂಗ್


ಡೇಟಿಂಗ್ ಸೈಟಲ್ಲಿ ದಿನ ತಡಕಾಡುವ
ಅವಳ ಕಣ್ಣಿಗೆ ಬಿದ್ದದ್ದು ನಕ್ಷತ್ರ
ಸುಖ ದುಃಖ ಹಂಚಿಕೊಳ್ಳಲೊಂದು
ಜೀವ ಬೇಕು.

ದುಃಖದ ಕಥೆ ಬಿಡು
ಇದು ಡೇಟಿಂಗ್ ಸಮಯ
ನಕ್ಷತ್ರ ನಗುತ್ತದೆ.
ರಂಗೇರಿದ ಸಂಜೆಯಲಿ ಮುತ್ತು ಮಾರುವ
ಜಾಗದಲ್ಲಿ ಮತ್ತೇರಿಸುವ ಮಾದಕತೆಯೊಂದಿಗೆ

ಇದು ಕಥೆಯಲ್ಲ,
ಹೇಗೆ ಹೇಳಲಿ? ಬಿಡಿಸಿ.

ದುಃಖ ಬಾಡಬೇಕು
ಖುಷಿ ಹೂವಿನಂತೆ ಅರಳಬೇಕು
ಹುಟ್ಟು ಒಂದೇ ಸಲ ಅಲ್ಲ
ಮತ್ತೆ ಮತ್ತೆ ಹುಟ್ಟಬೇಕು.

ಬಯಕೆ ಉತ್ಕಟತೆ ಕಾಯ್ದಿರಿಸಿಕೋ
ಮುಂದಿನ ಭೇಟಿಯಲಿ
ಖರ್ಚು ಮಾಡೋಣಾ
ನಿನಗೆ ಕೊಟ್ಟ ಡೇಟಿಂಗ್
ಸಮಯ ಮುಗಿಯಿತು.
ಬೈ ಬೈ.



–ಮಂಜುಳಾ ಜಿ.ಹೆಚ್.

ಒಲಿದು ಅರಿತ ಪ್ರಬಂಧ

ನಮ್ಮೂರ ಜಾತ್ರೆ: ಆ ಸಂಭ್ರಮ! ಕೌತುಕ!!

-ಮಮತಾ ಪ್ರಭು

ಹೂವಿನ ಎಸಳುಗಳನ್ನು ಎಣಿಸುವುದು ನಮಗೆ ಮಾಮೂಲಾಗಿತ್ತು. ಮನಸ್ಸಿನಲ್ಲಿ ನಮ್ಮಿಚ್ಛೆ ನೆನೆಸಿಕೊಂಡು ಬೆಸ ಬಂದರೆ ಈಡೇರುತ್ತೆ, ಸರಿ ಬಂದರೆ ಈಡೇರಲ್ಲ ಎಂಬ ನಂಬಿಕೆ. ಈ ನಂಬಿಕೆಯಿಂದ ಭಕ್ತಿಯಿಂದ ಕೈ ಮುಗಿದು ಮೂರು ಸುತ್ತು ಸುತ್ತಿ ಅಡ್ಡಬಿದ್ದು ಪ್ರಸಾದ ಕೇಳಿದಾಗ ಬೆಸ ಬಂದರೆ ತರಗತಿಗೆ ಪರೀಕ್ಷೆಯಲ್ಲಿ ನಾನೇ ಮೊದಲು, ಸರಿ ಬಂದರೆ ಇಲ್ಲ ಎಂದು ಬೇಡಿಕೊಂಡು ಪ್ರಸಾದಕ್ಕೆ ಕೈ ಒಡ್ಡಿದೆ. ಎಣಿಸಿ ನೋಡಿದರೆ ಸರಿ ಸಂಖ್ಯೆಯಲ್ಲಿ ಹೂ ಸಿಕ್ಕಿಬಿಡುವುದೇ...ಎದೆಯೊಳಗೆ ಢವ ಢವ ಆರಂಭ. ಇರಲಿ ಎಂದು ಸೈರಿಸಿಕೊಂಡು ಮತ್ತೊಮ್ಮೆ ಮತ್ತಷ್ಟು ಭಕ್ತಿಯಿಂದ ಮೂರು ಸುತ್ತು ಸುತ್ತಿ ಅಡ್ಡ ಬಿದ್ದು ಮತ್ತೆ ಪ್ರಸಾದ ಕೇಳಿದೆ. ಆಗಲೂ ಸರಿ ಸಂಖ್ಯೆ ಹೂ ಬರುವುದೇ!!



ಚಿತ್ರ : ಗುಜ್ಜಾರ್

ನಾನು ವೃತ್ತಿಯಲ್ಲಿ ಪ್ರೌಢಶಾಲಾ ಶಿಕ್ಷಕಿ. ಶಿಕ್ಷಕರಿಗೆ ಸಂಬಳದ ಜೊತೆಗೆ ಸಿಗುವ ಮತ್ತೊಂದು ದೊಡ್ಡ ಸಂಪತ್ತೆಂದರೆ ಬಾಲ್ಯದ ನೆನಪುಗಳು. ಬೇರೆ ವೃತ್ತಿಗಳಲ್ಲಿ ಒಡನಾಟ ವಯಸ್ಕರು ಹಾಗೂ ವೃದ್ಧರ ಜೊತೆಗೆ ಇರುವುದರಿಂದ ಬಾಲ್ಯದ ನೆನಪುಗಳ ರಿನಿವಲ್ ಅವಕಾಶ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳಿಗೆ ಹೆಚ್ಚು. ಇದೇ ಕಾರಣಕ್ಕೆ ನನಗೆ ಬಾಲ್ಯದ ನೆನಪು ಹೆಚ್ಚು. ಮಕ್ಕಳ ಚಾಡಿ, ಗಲಾಟೆ, ಹುಂಬತನ, ತಕರಾರು, ಜಗಳ ಸಪ್ಪೆ ಮೋರೆ, ರೋಷ, ಕಲಿಕಾ ಆಸಕ್ತಿ, ಉತ್ಸಾಹ, ಪ್ರತಿಭೆ ಎಲ್ಲವನ್ನೂ ನೋಡುತ್ತಾ ನೋಡುತ್ತಾ ನಮ್ಮ ನಮ್ಮ ಬಾಲ್ಯ ಮತ್ತೆ ಮತ್ತೆ ನೆನಪಾಗುತ್ತಿರುತ್ತದೆ. ಶಾಲಾ ಅವಧಿ ಮುಗಿದ ನಂತರವೂ ಇದೇ ಬಾಲ್ಯದ ನೆನಪು ನನ್ನನ್ನು ಆವರಿಸಿಕೊಂಡಿರುತ್ತದೆ..

ಇದೇ ನೆನಪಿನಂಗಳದಲ್ಲಿ ಜಾತ್ರೆ ಹಕ್ಕಿ ಹಾರಿ ಬಂದು ಕೂತಿತು. ಮಾರ್ಚ್ ಬಂತೆಂದರೆ ಜಾತ್ರೆಗಳ ಕಾರುಬಾರು ಶುರು. ಒಂದೊಂದೂರಿಗೂ ಒಂದೊಂದು ಶಕ್ತಿದೇವತೆ. ಗುಡಿಯ ಒಳಗೆ ಮೂಲ ಮೂರ್ತಿಯಾಗಿದ್ದವರು ಉತ್ಸವಮೂರ್ತಿ ಆಗಿ ಊರು ಸುತ್ತುವ ಭಾಗ್ಯ ಗ್ರಾಮ ದೇವತೆಗಳದ್ದು. ಹಳೇಬೀಡು ನನ್ನ ಊರು. ಹಳೇಬೀಡಿನ ಕರಿಯಮ್ಮದೇವಿ ಜಾತ್ರೆ ನನ್ನ ಬಾಲ್ಯದ ನೆನಪಿನ ರಂಗೋಲಿಯಲ್ಲಿ ಒಂದು ಬಣ್ಣ.... ಆಗೆಲ್ಲ ಜಾತ್ರೆಗೆ ಮನೆಯ ಹೆಣ್ಣುಮಕ್ಕಳು ಎಲ್ಲಿದ್ದರೂ ಕಡ್ಡಾಯವಾಗಿ ತವರಿಗೆ ಬರಬೇಕಿತ್ತು. ಶಿವರಾತ್ರಿ ಹಬ್ಬಕ್ಕೆ ಕಾಯಿ ವಸ್ತ್ರ ತೆಗೆದುಕೊಂಡು ಹೋದ ಅಣ್ಣನೋ, ತಮ್ಮನೋ ಅಪ್ಪನೋ ಮಗಳಿಗೆ ತನ್ನ ಗಂಡ ಹಾಗೂ ಮಕ್ಕಳ ಜೊತೆಗೆ ಜಾತ್ರೆಗೆ ಬರಲೇಬೇಕೆಂದು ಆದೇಶ ಮಾಡಿ ಬರುತ್ತಿದ್ದರು. ಅತ್ತ ಹೆಣ್ಣುಮಕ್ಕಳು ಜಾತ್ರೆಯ ದಿನಕ್ಕಾಗಿ, ತವರು ಮನೆಗೆ ಹೋಗುವ ಸಂಭ್ರಮಕ್ಕಾಗಿ ಹಿರಿಹಿರಿ ಹಿಗ್ಗಿ ಆಯಾಸವೇ ಇಲ್ಲದಂತೆ ಮನೆಗೆಲಸ, ಹೊಲಗೆಲಸಗಳನ್ನೆಲ್ಲಾ ಮುಗಿಸುತ್ತಿದ್ದರು. ತವರು ಮನೆಗೆ ವಿಶೇಷ ಕೈ ತಿನಿಸು ಮಾಡಿಕೊಂಡು ಹೋಗಲು ದೊಡ್ಡ ಯೋಜನೆಯೇ ತಯಾರಾಗುತ್ತಿತ್ತು. ಏಕೆಂದರೆ ಆಗೆಲ್ಲ ಮೂಲೆಗೊಂದು ಬೇಕರಿ ಇರಲಿಲ್ಲ. ಯಾರ‍್ಯಾರಿಗೆ ಏನೇನು ಇಷ್ಟ ಎಂದು ಯೋಚಿಸುತ್ತಾ ಅದನ್ನು ತಯಾರಿಸಲು ಅಣಿ ಮಾಡಿಕೊಳ್ಳುವುದೇ ಹೆಣ್ಣುಮಕ್ಕಳ ಸಂಭ್ರಮವಾಗಿರುತಿತ್ತು. ಏನು ತರಲೆಂದು ಕೇಳಲು ಈಗಿನಂತೆ ಫೋನ್ ಸೌಕರ್ಯ ಇರಲಿಲ್ಲ.

ಜಾತ್ರೆಯ ಘಮಲು ಗ್ರಾಮಸುಮದಿಂದ ಹೊಮ್ಮಲು ಶುರುವಾಗುತ್ತಿದ್ದಂತೆ ನನಗೆ ಕರಿಯಮ್ಮನ ಜಾತ್ರೆ ಕಥೆ ಕೇಳುವ ತವಕ ಹೆಚ್ಚುತ್ತಿತ್ತು. ಈ ಹಿಂದೆ ೩೦ ಸಾರಿ ಆ ಕಥೆ ಹೇಳಿದ್ದರೂ ತಾತ ನನಗಾಗಿ ೩೧ನೇ ಬಾರಿ ಅದೇ ಉತ್ಸಾಹದಲ್ಲಿ ಕೊಂಚವೂ ಬೇಸರಿಸದೆ ಕಥೆ ಹೇಳುತ್ತಿತ್ತು. ಸುಹಾಸಿನಿ ಬೀಡಿ ಹಚ್ಚಿಕೊಂಡು ಹೊಗೆ ಬಿಡುತ್ತಾ ಕಥೆ ಹೇಳಲು ಶುರು ಮಾಡುತಿತ್ತು. ಕರಿಯಮ್ಮ- ಉಡಿಸಲಮ್ಮ ಇಬ್ಬರು ಅಕ್ಕಪಕ್ಕದ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಅಕ್ಕತಂಗಿಯರು. ಉಡಿಸಲಮ್ಮನಿಗೆ ಮಕ್ಕಳಿರಲಿಲ್ಲ. ಕರಿಯಮ್ಮನಿಗೆ ಎರಡು ಗಂಡು ಮಕ್ಕಳು. ಉಡಿಸಲಮ್ಮ ತನ್ನ ತಂಗಿ ಮಕ್ಕಳನ್ನು ನೋಡಿಕೊಂಡು ಬರಲು ಹೊರಟಳು. ಈ ವಿಷಯ ತಿಳಿದ ಕರಿಯಮ್ಮ ತನ್ನ ಅಕ್ಕನಿಗೆ ಮಕ್ಕಳಿಲ್ಲ, ಈ ಉರಿ ಬಿಸಿಲಲ್ಲಿ ತನ್ನ ಮಕ್ಕಳನ್ನು ನೋಡಿದರೆ ಮಕ್ಕಳಿಗೆ ದೃಷ್ಟಿ ಬೀಳಬಹುದೆಂದು ತನ್ನ ಮಕ್ಕಳನ್ನು ಅಟ್ಟದ ಮೇಲೆ ಕರೆದುಕೊಂಡು ಹೋಗಿ ಎರಡು ಗುಡಾಣಗಳೊಳಗೆ ಅವನ್ನು ಕೂರಿಸಿ ಬಾಯಿ ಮುಚ್ಚಿದಳು. ಕೆಳಗೆ ಬಂದು ಅಕ್ಕನನ್ನು ಮಾತನಾಡಿಸಿದಳು. ಅಕ್ಕ ಮಕ್ಕಳನ್ನು ನೋಡಲು ಬಂದಿರುವುದಾಗಿ, ಅವರಿಗಾಗಿ ಕೈತಿಂಡಿ ಮಾಡಿ ತಂದಿರುವುದಾಗಿ ಹೇಳಿ ಮಕ್ಕಳನ್ನು ಕರೆದಳು. ಮಕ್ಕಳು ದೂರದ ನೆಂಟರ ಮನೆಗೆ ಹೋಗಿದ್ದಾರೆ, ಅವರು ಬರುವುದು ಎರಡು ಮೂರು ದಿನ ಆಗಬಹುದೆಂದು ಕರಿಯಮ್ಮ ಸುಳ್ಳು ಹೇಳಿದಳು. ಬಂದ ಮೇಲೆ ಸಿಹಿತಿಂಡಿಗಳನ್ನು ಮಕ್ಕಳಿಗೆ ಕೊಡು ಎಂದು ಹೇಳಿ ಉಡಿಸಲಮ್ಮ ಹಿಂದಿರುಗಿದಳು.

ಕರಿಯಮ್ಮ ಅಬ್ಬಾ!! ಎಂದು ನಿಟ್ಟುಸಿರು ಬಿಡುತ್ತಾ ಅಟ್ಟದ ಮೇಲೆ ಹತ್ತಿ ಗುಡಾಣಗಳ ಮುಚ್ಚಳವನ್ನು ತೆಗೆದು ನೋಡಿದರೆ ಎರಡು ಮಕ್ಕಳ ಮುಖ ಮೈ ಮೇಲೆಲ್ಲಾ ಕೆಂಡದಂತ ಗುಳ್ಳೆಗಳು ಎದ್ದಿದ್ದವು. ಆಕೆಗೆ ಕೂಡಲೆ ತಾನು ಮಾಡಿದ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಟ್ಟು ಮಕ್ಕಳನ್ನು ಕರೆದುಕೊಂಡು ಉಡಿಸಲಮ್ಮನ ಬಳಿ ಹೋಗಿ ಕ್ಷಮೆ ಯಾಚಿಸಿ ಪರಿಹಾರ ಕೇಳಲಾಗಿ, ವರ್ಷದಲ್ಲಿ ಒಂದು ದಿನ ತನ್ನ ಗುಡಿ ಮುಂದೆ ಸಿಡಿ ಆಡಬೇಕೆಂದು ಹೇಳಿದಳು. ಅಂದಿನಿಂದ ಈ ಜಾತ್ರೆಯು ಆಚರಣೆಗೆ ಬಂದಿತ್ತು.

ಉಡಿಸಲಮ್ಮ ಸಸ್ಯಾಹಾರಿ. ಹಾಗೂ ಕರಿಯಮ್ಮ ಮಾಂಸಾಹಾರಿ ಆಗಿದ್ದಕ್ಕೆ ಒಂದು ಸಣ್ಣ ಹಿನ್ನೆಲೆಯನ್ನು ತಾತ ಹೇಳುತ್ತಿದ್ದರು. ಏಕೆಂದರೆ ಜಾತ್ರೆ ಸಮಯದಲ್ಲಿ ದೇವರಿಗೆ ಎಡೆ ಒಯ್ಯಬೇಕಿತ್ತು. ಸಸ್ಯಾಹಾರಿಗಳು ಉಡಿಸಲಮ್ಮನಿಗೆ ಮಾಂಸಾಹಾರಿಗಳು ಕರಿಯಮ್ಮನಿಗೆ ಮಾಂಸದ ಎಡೆಯನ್ನು ಒಯ್ಯುವುದು ವಾಡಿಕೆ. ಇದಕ್ಕೆ ಕಾರಣವೇನೆಂದು ತಾತನನ್ನು ಕೇಳಿದಾಗ ತಾತ ಹೇಳಿದ್ದು... ಸಸ್ಯಹಾರಿಗಳೇ ಆಗಿದ್ದ ಕರಿಯಮ್ಮ ಉಡಿಸಲಮ್ಮ ಒಮ್ಮೆ ಮನರಂಜನೆಗೆ ಬೇಟೆಯಾಡಲು ಕಾಡಿಗೆ ಹೋಗುತ್ತಿದ್ದಾಗ ಇಬ್ಬರಿಗೂ ಬಹಳ ಹಸಿವಾಗಿ ಆಹಾರ ಹುಡುಕುತ್ತಿದ್ದಾಗ ಕರಿಯಮ್ಮನಿಗೆ ದೂರದಲ್ಲಿ ಗುಡಿಸಲೊಂದು ಕಾಣಿಸಿತು. ಅಲ್ಲಿಯೇ ದೊಡ್ಡ ಪಾತ್ರೆಯಲ್ಲಿದ್ದ ಆಹಾರ ನೋಡಿ ಹಸಿವು ತಾಳಲಾರದೆ ಅವಸರದಲ್ಲಿ ತಿಂದೇ ಬಿಟ್ಟಳು ಕರಿಯಮ್ಮ...! ಅದು ಮಾಂಸಾಹಾರವಾಗಿತ್ತು. ಆದರೆ ಉಡಿಸಲಮ್ಮ ಸೇವಿಸಲಿಲ್ಲ ಹಾಗಾಗಿ ಎಡೆ ನೀಡುವಲ್ಲಿ ವ್ಯತ್ಯಾಸವಿದೆಯೆಂದು ತಾತ ಕತೆ ಹೇಳಿದ್ದರು. ನಾನು ಪ್ರೌಢಶಾಲೆಗೆ ಬರುವವರೆಗೂ ಈ ಕಥೆಗಳನ್ನು ತಾತನಿಂದ ಅದೆಷ್ಟು ಬಾರಿ ಹೇಳಿಸಿಕೊಂಡಿದ್ದೆನೋ ತಿಳಿಯದು!

ಜಾತ್ರೆಯ ದಿನಗಳಲ್ಲಿ ಅಡುಗೆ ಮಾಡುವಾಗ ಮಡಿ-ಮೈಲಿಗೆಯ ಮಾತು ಬಹಳ ಬರುತ್ತಿತ್ತು. ಮೈಲಿಗೆಯಾದರೆ, ಅಡುಗೆಯನ್ನು ಎಂಜಲು ಮಾಡಿದರೆ ಮೈಮೇಲೆ ಗುಳ್ಳೆಗಳು ಆಗುವ ಭಯ ಇತ್ತು. ಏಲಕ್ಕಿ, ಬೆಲ್ಲ, ಕಾಯಿತುರಿ ಮತ್ತು ಬೇಳೆಯನ್ನು ಹದವಾಗಿ ಬೇಯಿಸಿ ಅಜ್ಜಿ ಅದನ್ನು ಒರಳು ಕಲ್ಲಿನಲ್ಲಿ ರುಬ್ಬುವಾಗ ಹೊರಡುತ್ತಿದ್ದ ಘಮಘಮಕ್ಕೆ ಹೋಳಿಗೆ ತಿನ್ನುವ ಆಸೆಯನ್ನು ತಡೆಯಲು ಸಾಧ್ಯವೇ ಆಗದೆ ಅಜ್ಜಿಯನ್ನು ಕಾಡುವುದೇ ಆಗಿತ್ತು. ಚೂರು ಕೊಡಜ್ಜಿ, ಚುಟ್ಟಿ ಹೂರಣ ಕೊಡಜ್ಜಿ ಎಂದು ಕಾಡುತಿದ್ದ ತನ್ನ ಪ್ರೀತಿಯ ಮೊಮ್ಮಗಳಿಗೆ ಎಂಜಲು ಮಾಡಿದ ತಪ್ಪಿಗೆ ಎಲ್ಲಿ ಗುಳ್ಳೆಗಳಾಗುತ್ತವೋ ಎಂಬ ಭಯಕ್ಕೆ ಸ್ವಲ್ಪ ಸಮಯ ಕಾಯುವಂತೆ ಮುದ್ದು ಮಾಡಿ ಲಲ್ಲೆಗರೆಯುತ್ತಿದ್ದಳು.

ಒಂದು ತಟ್ಟೆಯಲ್ಲಿ ಹೋಳಿಗೆ ತುಪ್ಪ, ಕೋಸಂಬರಿ, ಅನ್ನ-ಸಾರು ಜೋಡಿಸಿಕೊಂಡು ಅದರ ಮೇಲೆ ಕೆಂಪು ಬಣ್ಣದ ವಸ್ತ್ರ ಮುಚ್ಚಿಕೊಂಡು ಅದರ ಮೇಲೆ ನಾಲ್ಕು ಕರ್ಪೂರ, ೨ ಊದುಬತ್ತಿ ಇಟ್ಟುಕೊಂಡು, ವಿಭೂತಿ ಧರಿಸಿ ಹಸಿ ತಲೆಕೂದಲನ್ನು ಸೇರಿಸಿ ಸಡಿಲ ಜಡೆ ಹೆಣೆದುಕೊಂಡು ಕರಿಯಮ್ಮ ಉಡುಸಲಮ್ಮನ ಗುಡಿಗೆ ಹೆಣ್ಣುಮಕ್ಕಳು ಎಡೆ ತೆಗೆದುಕೊಂಡು ಹೋಗುವುದು ಅಂದಿನ ಪದ್ಧತಿಯಾಗಿತ್ತು. ಈ ಸಂಭ್ರಮವನ್ನು ಈಗ ನೆನಪಿಸಿಕೊಂಡರೆ ಮೈಮೇಲಿನ ರೋಮಗಳು ನೆಟ್ಟಗಾಗುವುವು. ತೆಗೆದುಕೊಂಡು ಹೋದ ಎಡೆಗಳನ್ನು ದೇವಾಲಯದ ಪೂಜಾರಿ ದೊಡ್ಡ ದೊಡ್ಡ ಬೇಸಿನ್ನುಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಜೋಡಿಸಿಕೊಂಡು ದೇವರ ಮೇಲಿನ ಹೂವನ್ನು ತಟ್ಟೆಯಲ್ಲಿಟ್ಟು ಕಳಿಸುತ್ತಿದ್ದನು. ತೆಗೆದುಕೊಂಡು ಹೋದ ಕರ್ಪೂರ ಊದುಬತ್ತಿ ಹಚ್ಚಿ ದೇವರಿಗೆ ಮಂಗಳಾರತಿ ಮಾಡಿ ತಂದ ತೀರ್ಥವನ್ನು ನಮ್ಮ ಮುಖದ ಮೇಲೆ ಎರಚಿದಾಗ ಮಿಡುಕಿ ಬಿದ್ದರೆ ದೇಹದಿಂದ ಯಾವುದೇ ರೋಗವಿದ್ದರೂ ಓಡಿಹೋಗುತ್ತಿತ್ತು ಎಂದು ನಂಬುತ್ತಿದ್ದೆವು. ಅಲ್ಲಿಗೆ ಹಬ್ಬ, ಪೂಜೆಯ ಸಾರ್ಥಕ ಭಾವ ಮನ ತುಂಬುತಿತ್ತು.


ಪೂಜಾರಿ ದೇವರ ಮೇಲಿನ ವಿಗ್ರಹದಿಂದ ತೆಗೆದು ಕೊಡುತ್ತಿದ್ದ ಪ್ರಸಾದದ ಹೆಸರಿನ ಹೂವಿನ ಎಸಳುಗಳನ್ನು ಎಣಿಸುವುದು ನಮಗೆ ಮಾಮೂಲಾಗಿತ್ತು. ಮನಸಿನಲ್ಲಿ ನಮ್ಮಿಚ್ಛೆ ನೆನೆಸಿಕೊಂಡು ಬೆಸ ಬಂದರೆ ಈಡೇರುತ್ತೆ, ಸರಿ ಬಂದರೆ ಈಡೇರಲ್ಲ ಎಂಬ ನಂಬಿಕೆ. ಈ ನಂಬಿಕೆಯಿಂದ ಭಕ್ತಿಯಿಂದ ಕೈ ಮುಗಿದು ಮೂರು ಸುತ್ತು ಸುತ್ತಿ ಅಡ್ಡಬಿದ್ದು ಪ್ರಸಾದ ಕೇಳಿದಾಗ ಬೆಸ ಬಂದರೆ ತರಗತಿಗೆ ಪರೀಕ್ಷೆಯಲ್ಲಿ ನಾನೇ ಮೊದಲು, ಸರಿ ಬಂದರೆ ಇಲ್ಲ ಎಂದು ಬೇಡಿಕೊಂಡು ಪ್ರಸಾದಕ್ಕೆ ಕೈ ಒಡ್ಡಿದೆ. ಎಣಿಸಿ ನೋಡಿದರೆ ಸರಿ

(೧೪ನೇ ಪುಟಕ್ಕೆ

ಸ್ತ್ರೀವಾದಿ ಚಳುವಳಿ : ಒಂದು ನೋಟ

–ನಾಗರೇಖಾ ಗಾಂವಕರ

“ಸ್ವಾತಂತ್ರ್ಯಾನಂತರದಲ್ಲಿ ಭಾರತದ ಸ್ತ್ರೀವಾದಿ ಚಳುವಳಿಯು ಪುರುಷನಿಗೆ ಸಮಾನ ಸ್ಥಾನಮಾನ ಮತ್ತು ಅವಕಾಶಕ್ಕಾಗಿ, ಸ್ತ್ರೀ ದೌರ್ಜನ್ಯದ ವಿರುದ್ಧವಾಗಿ ಧ್ವನಿ ಎತ್ತಿದೆ. ಮಹಿಳಾ ಮೀಸಲಾತಿಯ ಅನಿವಾರ್ಯತೆಯನ್ನು ವ್ಯಕ್ತಪಡಿಸುತ್ತಿವೆ. ಸ್ತ್ರೀವಾದದ ತಳಹದಿಯೆಂದರೆ ಗಂಡು ಹೆಣ್ಣೆಂಬ ತಾರತಮ್ಯವನ್ನು ಹೋಗಲಾಡಿಸಿ ಮಹಿಳೆಗೆ ಆಸ್ತಿ ಹಕ್ಕು, ಜೀವನಾಂಶದ ಹಕ್ಕು, ಮತದಾನದ ಹಕ್ಕು, ವಿವಾಹ ವಿಚ್ಛೇದನ, ದತ್ತು ಪಡೆಯುವ ಹಕ್ಕು, ಪಾಲಕತನದ ಹಕ್ಕು, ಸಮಾನ ಕೆಲಸಗಳ ಹೊರೆ ಹಂಚಿಕೆ, ಸಮಾನ ವೇತನ ಇತ್ಯಾದಿ ಎಲ್ಲ ಸಂಗತಿಗಳಲ್ಲಿ ಆಕೆಯನ್ನು ಪುರುಷನಿಗೆ ಸಮಾನ ನೆಲೆಯಲ್ಲಿ ಪರಿಗಣಿಸುವ ಮಹತ್ತರವಾದ ಹಿನ್ನೆಲೆಯಿಂದಲೇ ಕಟ್ಟಲ್ಪಟ್ಟಿದೆ.”



ಚಿತ್ರ : ವಿಜಯಶ್ರೀ ಪಾಲಾಡಿ

ಸ್ತ್ರೀ – ದ್ವಿತೀಯ ಪ್ರಜೆ, ಸ್ತ್ರೀವಾದ– ಕೇವಲ ಮಹಿಳಾ ಸಂಬಂಧಿ ಏಕಮುಖಿ ವಾದ, ಸ್ತ್ರೀ ಹೋರಾಟಗಳು– ಮಾನವ ಜನಾಂಗದ ಹೋರಾಟಗಳಲ್ಲ; ಬದಲಿಗೆ ಅವು ವಿಮೋಚನೆಗಾಗಿ ಸ್ತ್ರೀ ಸಮುದಾಯದ ಹೋರಾಟಗಳು; ಹೀಗೆ ಮಹಿಳಾ ಜಗತ್ತನ್ನು, ಬದುಕಿನ ರೀತಿಯನ್ನು, ಆಕೆಯ ಎಲ್ಲ ವಾದ, ಮಂಡನೆಗಳಿಗೆ ಪ್ರತ್ಯೇಕ ನೆಲಗಟ್ಟು ಒದಗಿಸಿ ಆಕೆಗೊಂದು ವೇದಿಕೆಯನ್ನು ಈ ಮೂಲಕ ಒದಗಿಸಲಾಗಿದೆ ಎಂಬ ಹೆಗ್ಗಳಿಕೆಯನ್ನು ತೋರ್ಪಡಿಸುತ್ತಾ “ಸ್ತ್ರೀ ಸರ್ವಥಾ ಪುರುಷನಿಗೆ ಸಮನಲ್ಲ” ಎಂಬ ಹೆಚ್ಚುಗಾರಿಕೆಯನ್ನು ಆಧುನೀಕರಣದ ತಳಹದಿ ಹೊಂದಿಯೂ ಪುರುಷ ಜಗತ್ತು ಇಂದಿಗೂ ಅದನ್ನೆ ಪ್ರತಿಪಾದಿಸುತ್ತಾ ಬರುತ್ತಿದೆ. ಪ್ರತ್ಯೇಕತೆಯನ್ನು ಸೃಷ್ಟಿಸಿ ಮೆರೆಯುವ ಪುರುಷಶಾಹಿ ಜಾಯಮಾನವನ್ನು ಅರ್ಥೈಸಿಕೊಳ್ಳುವುದು ಅಷ್ಟು ಕಷ್ಟವೇನೂ ಅಲ್ಲ. ಇತಿಹಾಸದಲ್ಲಿ ಮಹಿಳೆ ನಿರ್ಲಕ್ಷಿಸಲ್ಪಟ್ಟ ವಿಚಾರವೂ ಹೊಸದಲ್ಲ. History-his story ಪದದ ರಚನೆಯಲ್ಲಿಯೇ ಅದು ಅವನ ಕಥೆಯಾಗಿದೆಯೇ ಹೊರತು ಆಕೆಯ ಕಥೆಯಾಗಿಲ್ಲ.

ಸ್ತ್ರೀವಾದವಿರಲಿ, ಮಹಿಳಾ ವಿಮೋಚನಾ ಹೋರಾಟಗಳೇ ಇರಲಿ, ಇವು ಮೂರನೇ ಜಗತ್ತಿನ ಅಸ್ತ್ರಗಳೇನೂ ಅಲ್ಲ. ಗ್ರೀಕ್ ಪುರಾಣ ಕಥೆಗಳಲ್ಲಿ, ಭಾರತೀಯ ಪುರಾಣ ಕಥೆಗಳಲ್ಲಿ, ಜಾನಪದ ಕಥೆಗಳಲ್ಲಿ ಇತಿಹಾಸದಲ್ಲಿ ಹೇರಳವಾದ ಪಾತ್ರಗಳು ಕಾಣಸಿಗುತ್ತವೆ. ಗ್ರೀಕ್ ಪುರಾಣದ ಮಿಡಿಯಾ, ಅಂತಿಗೊನೆಯರೇ ಇರಲಿ, ಭಾರತದ ಜಾನಪದ ಕಥೆಗಳಲ್ಲಿ ಬರುವ ಉತ್ತರಾದೇವಿ, ಈರೋಬಿಯರು, ರಾಮಾಯಣದ ಸೀತೆ, ಮಹಾಭಾರತದ ಅಂಬೆ, ಕ್ರಿ. ಶ. ನಾಲ್ಕನೇ ಶತಮಾನದಲ್ಲಿ ಅಲೆಗ್ಸಾಂಡ್ರಿಯಾ ವಿಶ್ವವಿದ್ಯಾಲಯದಲ್ಲಿ ತತ್ವಜ್ಞಾನ ಮತ್ತು ಗಣಿತ ಬೋಧಿಸುತ್ತಿದ್ದ ಗ್ರೀಕ್ ದೇಶದ ಹಿಪೇಶಿಯಾ, ಇಂಗ್ಲೀಷ್ ಧಾಳಿಕೋರರಿಂದ ಫ್ರಾನ್ಸನ್ನು ಕಾಪಾಡಿದ ಜೋನ್ ಆಫ್ ಆರ್ಕ್, ೧೮ನೇ ಶತಮಾನದಲ್ಲಿ ಫ್ರಾನ್ಸ್ ದೇಶದ ರಾಜಕೀಯ ಸಮಸ್ಯೆಗಳು, ನಿಗ್ರೋ ಗುಲಾಮಗಿರಿ ವಿರುದ್ಧ ಹೋರಾಟ, ಸ್ತ್ರೀ ಲೈಂಗಿಕ ಸ್ವಾತಂತ್ರ್ಯ, ಮಹಿಳಾ ಸಾಮಾಜಿಕ ರಾಜಕೀಯ ಸ್ವಾತಂತ್ರ್ಯ ಮುಂತಾದ ಹಲವು ವಿಚಾರಗಳನ್ನು ಪ್ರತಿಪಾದಿಸಿದ ಒಲಿಂಪೆ ಗೌಜ್ ಇವರೆಲ್ಲ ಮಹಿಳಾ ದೌರ್ಜನ್ಯದ ವಿರುದ್ಧ ನಡೆಸಿದ ಹೋರಾಟಗಳು ಉಲ್ಲೇಖನಾರ್ಹ.

ಹದಿನೆಂಟನೇ ಶತಮಾನದಿಂದೀಚೆಗೆ ನಡೆದ ಪಾಶ್ಚಾತ್ಯ ಮಹಿಳಾವಾದಿ ಚಳುವಳಿಯನ್ನು ನಾಲ್ಕು ಹಂತದಲ್ಲಿ ವಿಂಗಡಿಸುತ್ತಾರೆ. ಅಮೇರಿಕಾದ ಸಂಯುಕ್ತ ಸಂಸ್ಥಾನ, ಕೆನಡಾ ಹಾಗೂ ಯುರೋಪಿನ ಹಲವಾರು ದೇಶಗಳು ಈ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದವು. ಇದು ಮೊದಲಿಗೆ ಅಮೇರಿಕಾದಲ್ಲಿ ಪ್ರಾರಂಭವಾಯಿತು. ೧೮೪೮ರ ಜೂನ್ ತಿಂಗಳಿನ ೧೯ ಮತ್ತು ೨೦ರಂದು ಅಮೇರಿಕಾದ ನ್ಯೂಯಾರ್ಕನಲ್ಲಿ ಮಹಿಳಾ ಹಕ್ಕು ಹೋರಾಟ ಸಭೆಯಲ್ಲಿ ಸುಮಾರು ೩೦೦ ಜನ ಸೇರಿದ್ದು, ಮಹಿಳಾ ಮತದಾನದ ಹಕ್ಕನ್ನು ಪ್ರತಿಪಾದಿಸಿತು. ಈ ಹೋರಾಟ ಮಹಿಳೆಗೆ ಶೈಕ್ಷಣಿಕ ಸಮಾನ ಅವಕಾಶಗಳು, ಆಸ್ತಿಯ ಹಕ್ಕು, ವೈವಾಹಿಕ ಸ್ವಾತಂತ್ರ್ಯ ಇತ್ಯಾದಿ ಪ್ರಮುಖ ವಿಚಾರಗಳಲ್ಲಿ ಸಮಾನತೆ ಹಾಗೂ ಮಹಿಳಾ ಶೋಷಣೆಯ ವಿರುದ್ಧ ಹಾಗೂ ಆಕೆಯ ಸುರಕ್ಷತೆ ಮತ್ತು ಉದ್ಧಾರದ ಉದ್ದೇಶಗಳನ್ನು ಮುಖ್ಯ ಹಿನ್ನೆಲೆಯಾಗಿ ಹೊಂದಿತ್ತು. ಮಧ್ಯಮ ವರ್ಗದ ಮತ್ತು ಮೇಲ್ವರ್ಗದ ಬಿಳಿಯ ಮಹಿಳೆಯರು ತಮ್ಮ ಕಾನೂನು ಬದ್ಧ ಹಕ್ಕುಗಳ ಕುರಿತಾಗಿ, ಮಹಿಳೆಗೆ ಸ್ವತಂತ್ರ ಅಸ್ತಿತ್ವ ನಿರಾಕರಿಸಿದ್ದ ಪುರುಷ ಸಮಾಜ ಆಕೆಯ ರಾಜಕೀಯ ಹಕ್ಕನ್ನು ಕಸಿದುಕೊಂಡಿದ್ದರ ಕುರಿತಾಗಿ ಧ್ವನಿ ಎತ್ತಿದ್ದರು. ಮಹಿಳಾ ನಾಯಕಿಯರು ಮುನ್ನೆಲೆಗೆ ಬರತೊಡಗಿದರು. ೧೯೧೦, ಮಾರ್ಚ್ ೮ರಂದು ಸುಮಾರು ನೂರಾಹತ್ತು ವರ್ಷಗಳ ಹಿಂದೆ ಜರ್ಮನಿಯ ಕ್ಲಾರಾ ಜಟ್ಕಿನ್ ಎಂಬ ಕಮ್ಯೂನಿಸ್ಟ್ ಮಹಿಳೆಯ ಮುಂದಾಳತ್ವದಲ್ಲಿ ಶ್ರಮಿಕ ಮಹಿಳೆಯರು ಸಿಗಬೇಕಾದ ಸಮಾನ ಅವಕಾಶಗಳಿಗಾಗಿ, ವೇತನಕ್ಕಾಗಿ ಚಳುವಳಿ ನಡೆಸಿದರು, ಅದು ಅಂತಾರಾಷ್ಟ್ರೀಯ ಮಹಿಳಾ ಹಕ್ಕುಗಳ ಹೋರಾಟವಾಗಿ ಪರಿಣಮಿಸಿತು. ಆ ದಿನವನ್ನು ಅಂತಾರಾಷ್ಟ್ರೀಯ ಮಹಿಳಾ ದಿನವೆಂದು ಆಚರಿಸಲ್ಪತ್ತಿದೆ.

೧೯೬೦, ೭೦ರ ದಶಕಗಳಲ್ಲಿ ಎರಡನೇ ಹಂತದ ಚಳುವಳಿಯಲ್ಲಿ ಸಾಮಾಜಿಕ, ಸಾಂಸ್ಕೃತಿಕ ಅಸಮತೆ ವಿರುದ್ಧ ಎದ್ದ ಬಂಡಾಯದ ಧ್ವನಿ ಸಮಾನಹಕ್ಕುಗಳನ್ನು ಅವಕಾಶಗಳನ್ನು ಹೊಂದುವ ಆಕಾಂಕ್ಷೆಗಳುಳ್ಳ ವಿದ್ಯಾವಂತ ಮಹಿಳೆಯರನ್ನು ಒಂದುಗೂಡಿಸಿತ್ತು. ಇದು ಸಂಪೂರ್ಣ ವೈಯಕ್ತಿಕ ಸ್ವಾತಂತ್ರ್ಯ ಪಡೆಯುವ ನಿಟ್ಟಿನಲ್ಲಿ ನಡೆದ ಹೋರಾಟವಾಗಿತ್ತು. ಪ್ರಪ್ರಥಮವಾಗಿ ಸಂಯುಕ್ತ ಸಂಸ್ಥಾನದಲ್ಲಿ ಸಾಮಾಜಿಕ ಸ್ತರದ ಹಲವು ಆಯಾಮಗಳಲ್ಲಿ ಪ್ರಕಟಗೊಂಡಿತು. ಲಿಂಗ ತಾರತಮ್ಯ, ಮಹಿಳೆಯರ ಲೈಂಗಿಕ ಸ್ವಾತಂತ್ರ್ಯ, ಮಹಿಳಾ ಉದ್ಯೋಗಾವಕಾಶಗಳು, ಮುಂತಾದ ಗುರುತರವಾದ ಬದಲಾವಣೆಗಳನ್ನು ಈ ಹೋರಾಟ ನಿರೀಕ್ಷಿಸಿತ್ತು. ೧೯೬೦ ರ ನಂತರದ ಹೋರಾಟಗಳಲ್ಲಿ ಮಹಿಳೆಯ ಮತದಾನದ ಹಕ್ಕು, ಆಸ್ತಿ ಹಕ್ಕು, ಇತ್ಯಾದಿಗಳನ್ನು ಕಾನೂನುಬದ್ಧವಾಗಿ ಪಡೆಯುವ ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ, ತನ್ನ ಹೊರದುಡಿಮೆಯ ಸ್ಥಳಗಳಲ್ಲಿ, ಕುಟುಂಬಗಳಲ್ಲಿ ಮತ್ತು ಲೈಂಗಿಕ ನೆಲೆಯಲ್ಲಿ ಎದುರಿಸುವ ಹತ್ತಾರು ಶೋಷಣೆಗಳಿಗೆ ತಾರತಮ್ಯಗಳಿಗೆ ಬೆನ್ನು ಬಗ್ಗಿಸದೇ, ಸಮರ್ಥ ಮನೋಸ್ಥೈರ್ಯದಿಂದ ಕೂಡಿದ ಮಹಿಳಾ ಸಮುದಾಯ ಮುನ್ನೆಲೆಗೆ ಬರತೊಡಗಿತ್ತು. ಎಲ್ಲ ಕ್ಷೇತ್ರಗಳಲ್ಲಿ ಪುರುಷನಿಗೆ ಕಡಿಮೆಯಿಲ್ಲದಂತೆ ಜವಾಬ್ದಾರಿಗಳ ನಿರ್ವಹಣೆ ಮಾಡಬಲ್ಲ ಸುಶಿಕ್ಷಿತ ನವಸಮುದಾಯವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲೂ ಈ ಹೋರಾಟ ಗಮನಾರ್ಹವಾಗಿತ್ತು. ಇದೇ ಸಂದರ್ಭದಲ್ಲಿ ‘ಸಿಮೋನ್ ದಿ ಬುವಾ’ ಬರೆದ “ದಿ ಸೆಕೆಂಡ್ ಸೆಕ್ಸ್” ಎಂಬ ಪುಸ್ತಕ ಸೃಷ್ಟಿಸಿದ ಸ್ವಾತಂತ್ರ ಮತ್ತು ಸಮಾನತೆಯ ಕನಸುಗಳು ಹೊಸ ಅಲೆಯನ್ನೆ ಸೃಷ್ಟಿಸಿದ್ದವು. ಈ ಹಂತದ ಪ್ರಮುಖ ಮಹಿಳಾ ಹೋರಾಟಗಾರರು ಸಿಮೋನ್ ದಿ ಬುವಾ, ಕ್ರಿಸ್ಟಿಯನ್ ರೋಚ್ ಫರ್ಟ, ಕ್ರಿಸ್ಟಿನ್ ಡೆಲ್ಫಿ, ಆನ್ ಟಿಸ್ವಾನ್ ಪ್ರಮುಖರು.

೧೯೮೦ ಮತ್ತು ೯೦ ರ ದಶಕದಲ್ಲಿ ಬಂದ ಮೂರನೇ ಹಂತದ ಚಳುವಳಿಯೂ ಕೂಡಾ ಈ ಅಸಮಾನತೆಗಳ ವಿರುದ್ಧದ ಹೋರಾಟದ ಜೊತೆ ಹೊರ ಜಗತ್ತಿನ ಕಾರ್ಯಕ್ಷೇತ್ರಗಳಲ್ಲಿ ಕಂಡುಬರುವ ಆರ್ಥಿಕ ಅಸಮತೆ, ಸಾಂಸ್ಕೃತಿಕ ಅಸಮತೆ, ಕೆಲಸಗಳ ಹೊರೆ ಹಂಚಿಕೆ, ಸಮಾನ ಕೆಲಸ ಸಮಾನ ವೇತನ, ಆಸ್ತಿಯನ್ನು ಹೊಂದುವ ಹಕ್ಕು, ರಾಜಕೀಯ ಮತ್ತು ಮಾಧ್ಯಮ ಜಗತ್ತಿನಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ತನ್ನ ಹಕ್ಕಿಗಾಗಿ ಪ್ರತಿಪಾದಿಸಿತು. ಅದರೊಂದಿಗೆ ಗರ್ಭಪಾತ ಮಾಡಿಸಿಕೊಳ್ಳುವ ನಿರ್ಧಾರವನ್ನು ಮಹಿಳೆ ಕೈಗೊಳ್ಳಬಹುದಾದ ಬಹುಮುಖ್ಯ ಅಹವಾಲನ್ನು ಮುಂದಿಟ್ಟಿತು. ನಾಲ್ಕನೆ ಹಂತ ಇದೆಲ್ಲದರ ಮುಂದುವರೆದ ಭಾಗವಾಗಿಯೂ ಇನ್ನೂ ನಿರೀಕ್ಷಿತ ಮಟ್ಟದಲ್ಲಿ ಪಡೆಯದ ಮಹಿಳಾ ಸ್ಥಾನಮಾನಕ್ಕಾಗಿ, ಹಕ್ಕುಗಳಿಗಾಗಿ, ಆಕೆಯನ್ನು ನಿಯಂತ್ರಿಸುವ ಪ್ರಯತ್ನಗಳನ್ನು ಮೀರಿ ನಿಲ್ಲುವುದಕ್ಕಾಗಿ ತನ್ನ ಹೋರಾಟದ ಹೆಜ್ಜೆಯನ್ನು ಮುಂದಿಟ್ಟಿದೆ. ಈ ಸಂದರ್ಭದಲ್ಲಿ ಬಿಡುಗಡೆಗಾಗಿ ಹಂಬಲಿಸುತ್ತಿದ್ದ ಕೆಳ ಮಧ್ಯಮ ವರ್ಗದ ಮಹಿಳಾ ಕಾರ್ಮಿಕರು, ಗಾರ್ಮೆಂಟ್ ನೌಕರರು, ಪೌರಕಾರ್ಮಿಕರು– ಈ ಎಲ್ಲ ದುಡಿಯುವ ವರ್ಗದವರ ಮೇಲೆ ಲಿಂಗತ್ವವೇ ಕಾರಣವಾಗಿ ನಡೆಯುವ ಶೋಷಣೆಗಳು ಬೆಳಕಿಗೆ ಬಂದವು. ಶೋಷಣೆಯ ಅರಿವು ಸಂಘಟನಾತ್ಮಕ ಚಳುವಳಿಯ ರೂಪ ಪಡೆಯಿತು.


ಇನ್ನು ಭಾರತದಲ್ಲಿ ಈ ಮಹಿಳಾ ವಿಮೋಚನೆಯ ಮೂಲಗಳನ್ನು ಹುಡುಕುತ್ತಾ

ಹೋದರೆ ಇದು ಕೂಡಾ ಹಲವು ಸ್ತರಗಳಲ್ಲಿ ಕಂಡುಕೊಳ್ಳಬಹುದಾಗಿದೆ.

ಮಹಿಳಾ ಚಳಿವಳಿಯಲ್ಲಿ ಮೊತ್ತಮೊದಲ ಬಾರಿಗೆ ಸ್ತ್ರೀವಾದಿ ಚಿಂತಕರಾದ ಪುರುಷರು, ಅದರಲ್ಲೂ ರಾಜರಾಮ್ ಮೋಹನ್ ರಾಯ್‌ರು ಸತಿಸಹಗಮನ, ವಿಧವೆಯರ ಸ್ಥಾನಮಾನ, ಮರುವಿವಾಹ ನಿಷೇಧ, ಬಹುಪತ್ನಿತ್ವ, ವೇಶ್ಯಾವೃತ್ತಿ ಇವೆಲ್ಲದರ ವಿರುದ್ಧ ಹೋರಾಡಿದ ಪರಿಣಾಮ ಸರಕಾರ ವಿಧವಾ ವಿವಾಹಕ್ಕೆ ಕಾನೂನಿನ್ವಯ ಸುಧಾರಣೆ ಜಾರಿಗೊಳಿಸಿತು. ಇವರ ಕಾರ್ಯವನ್ನು ಆನಂತರ ಕೇಶಬ ಚಂದ್ರಸೇನ್‌ರು ಮುನ್ನಡೆಸಿದರು. ಜೊತೆಗೆ ಈಶ್ವರ ಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ಗೋಖಲೆ, ದೇವಧರ್, ಎನ್ ಎಮ್ ಜೋಶಿ ಮುಂತಾದವರು ಮುಂದಾಳುಗಳಾಗಿದ್ದರು. ಆನಂತರದ ಹಂತದಲ್ಲಿ ಗಾಂಧೀಜಿಯರವರು ಮಹಿಳೆಯರ ಸಮಾನತೆಗಾಗಿ ವಾದಿಸತೊಡಗಿದರು. ಈ ಮೂಲಕ ರಾಷ್ಟದ ಜಾಗೃತಿ ಮತ್ತು ನವ ಸಮಾಜದ ನಿರ್ಮಾಣದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುತ್ತಾ ಪ್ರತ್ಯೇಕತೆಯನ್ನು ಕಡಿಮೆ ಮಾಡಿತು. ಇದೇ ಸಮಯದಲ್ಲಿ ಭಾರತದಲ್ಲಿ 'ಇಂಡಿಯನ್ ನ್ಯಾಷನಲ್ ಕಾಂಗ್ರೆಸ್' ಸ್ಥಾಪನೆಯಾಗಿ ಭಾರತೀಯ ಮಹಿಳೆಯ ಸಾಮಾಜಿಕ ಆರ್ಥಿಕ ಬದಲಾವಣೆಯ ಜೊತೆಗೆ ರಾಜಕೀಯ ಮತ್ತು ರಾಷ್ಟ್ರೀಯ ಕಾರ್ಯಕ್ಷೇತ್ರಗಳಲ್ಲಿ ಮಹಿಳೆಗೆ ಅವಕಾಶ ದೊರೆಯಿತು. ೧೯೧೭ರಲ್ಲಿ ಸರೋಜಿನಿ ನಾಯ್ಡು ಅವರು ಮಹಿಳಾ ನಿಯೋಗವೊಂದರ ನೇತೃತ್ವ ವಹಿಸಿ ಮಹಿಳೆಯರಿಗೆ ಮತದಾನದ ಹಕ್ಕು ಕೊಡಬೇಕೆಂಬ ಮನವಿಯನ್ನು ಸರಕಾರದ ಮುಂದಿಟ್ಟರು. ಇದರ ಫಲವಾಗಿ ೧೯೨೬ರಲ್ಲಿ ಮಹಿಳೆಯರು ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸಿದರು. ಹಿಂದೂ ವಿವಾಹ ಕಾಯಿದೆಗಳಲ್ಲಿ ಆಮೂಲಾಗ್ರ ಬದಲಾವಣೆಗಳಾಗಿ ಬಹುಪತ್ನಿತ್ವ ಮತ್ತು ಬಾಲ್ಯ ವಿವಾಹ ನಿಷೇಧ, ವಿಧವಾ ವಿವಾಹ ಪ್ರೋತ್ಸಾಹಿಸುವುದು ಮುಂತಾದ ಬದಲಾವಣೆಗಳು ಕಂಡುಬಂದವು.

ಸ್ವಾತಂತ್ರ್ಯಾನಂತರದಲ್ಲಿ ಭಾರತದ ಸ್ತ್ರೀವಾದಿ ಚಳುವಳಿಯು ಪುರುಷನಿಗೆ ಸಮಾನ ಸ್ಥಾನಮಾನ ಮತ್ತು ಅವಕಾಶಕ್ಕಾಗಿ, ಸ್ತ್ರೀ ದೌರ್ಜನ್ಯದ ವಿರುದ್ಧವಾಗಿ ಧ್ವನಿ ಎತ್ತಿದೆ. ಮಹಿಳಾ ಮೀಸಲಾತಿಯ ಅನಿವಾರ್ಯತೆಯನ್ನು ವ್ಯಕ್ತಪಡಿಸುತ್ತಿವೆ. ಸ್ತ್ರೀವಾದದ ತಳಹದಿಯೆಂದರೆ ಗಂಡು ಹೆಣ್ಣೆಂಬ ತಾರತಮ್ಯವನ್ನು ಹೋಗಲಾಡಿಸಿ ಮಹಿಳೆಗೆ ಆಸ್ತಿ ಹಕ್ಕು, ಜೀವನಾಂಶದ ಹಕ್ಕು, ಮತದಾನದ ಹಕ್ಕು, ವಿವಾಹ ವಿಚ್ಛೇದನ, ದತ್ತು ಪಡೆಯುವ ಹಕ್ಕು, ಪಾಲಕತನದ ಹಕ್ಕು, ಸಮಾನ ಕೆಲಸಗಳ ಹೊರೆ ಹಂಚಿಕೆ, ಸಮಾನ ವೇತನ ಇತ್ಯಾದಿ ಎಲ್ಲ ಸಂಗತಿಗಳಲ್ಲಿ ಆಕೆಯನ್ನು ಪುರುಷನಿಗೆ ಸಮಾನ ನೆಲೆಯಲ್ಲಿ ಪರಿಗಣಿಸುವ ಮಹತ್ತರವಾದ ಹಿನ್ನೆಲೆಯಿಂದಲೇ ಕಟ್ಟಲ್ಪಟ್ಟಿದೆ.

ಇನ್ನು ಮಹಿಳಾ ಸ್ವಾತಂತ್ಯ ಸಮಾನತೆಗಾಗಿ ಪ್ರಯತ್ನಿಸುವವರನ್ನು ಮೂರು ಗುಂಪುಗಳಲ್ಲಿ ವರ್ಗೀಕರಿಸಬಹುದು. ಅದು ಮಹಿಳಾ ಹೋರಾಟಗಾರರು ಮತ್ತು ಸ್ತ್ರೀವಾದಿಗಳು ಹಾಗೂ ಸ್ತ್ರೀವಾದಿ ಚಿಂತಕರು. ಬಹುತೇಕ ಮಹಿಳಾ ಹೋರಾಟಗಾರರು ಮಹಿಳಾ ವಿಮೋಚನೆಗಾಗಿ ಚಳುವಳಿ ಹೋರಾಟಗಳ ಮಾರ್ಗವನ್ನೆ ಅನುಸರಿಸುವವರು. ಸ್ತ್ರೀವಾದಿಗಳಲ್ಲಿ ಬಹುಜನರು ಹೋರಾಟ ಮತ್ತು ಬರವಣಿಗೆ ಎರಡನ್ನೂ ಸಮಾನವಾಗಿ ಸ್ವೀಕರಿಸಿದವರು. ಸ್ತ್ರೀವಾದಿ ಚಿಂತಕರು ಅಕಾಡಮಿಕ್ ವಲಯದಲ್ಲಿದ್ದು ಬಹುಮಟ್ಟಿಗೆ ಬರವಣಿಗೆಗಳ ಮೂಲಕವೇ ಹೋರಾಟ ಮತ್ತು ಅರಿವು ಮೂಡಿಸಬಲ್ಲ ಗುರುತರ ಜವಾಬ್ದಾರಿ ಹೊಂದಿದವರು. ಇತ್ತೀಚೆಗೆ ಎಲ್ಲ ಪದವಿ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ವಿಭಾಗಗಳು, ಮಹಿಳಾ ಅಧ್ಯಯನ ಕೇಂದ್ರಗಳು ಸ್ಥಾಪನೆಯಾಗುತ್ತಿವೆ. ಆ ಮೂಲಕವಾಗಿ ಸ್ತ್ರೀಯರ ಸ್ಥಾನಮಾನ, ಸ್ಥಿತಿಗತಿಗಳು ಹಕ್ಕುಗಳು, ಇವೆಲ್ಲದರ ಅಧ್ಯಯನವೂ ದಾಖಲಾಗುವ ಜ್ಞಾನಶಿಸ್ತೀಯ ಮಾದರಿಯಲ್ಲಿ ನಡೆಸಲಾಗುತ್ತಿದೆ. ಮಹಿಳಾ ಹೋರಾಟಗಳ ಫಲವಾಗಿ ಹಲವು ಮಹಿಳಾ ಸಂಘಟನೆಗಳು, ಮಹಿಳಾ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿವೆ. ಮಹಿಳಾ ಸಾಧಕಿಯರ ಪಟ್ಟಿ ಬೆಳೆಯುತ್ತಲೇ ಹೋಗುತ್ತಿದೆ. ಆದರೆ ಈ ಹೋರಾಟಗಳ ಇತಿಮಿತಿಗಳು ಹಲವು. ಪುರುಷ ಜಗತ್ತು ಮಹಿಳಾ ಮೇಲುಗಾರಿಕೆಯನ್ನು, ಸ್ವಯಂಸಬಲತೆಯನ್ನು ವಿರೋಧಿಸುತ್ತದೆ. ಅನಾದಿಕಾಲದಿಂದಲೂ ಸಮಾಜ ನಿರ್ಮಾಣದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಆರ್ಥಿಕ ಕೊಡುಗೆಗಳಲ್ಲಿ ಮಹಿಳೆಯ ಪಾತ್ರವಿದ್ದಾಗಲೂ, ಶ್ರಮವಿದ್ದಾಗಲೂ ಅದನ್ನು ಗೌಣವಾಗಿಡಲಾಗಿದೆ. ರಾಜ ಮಹಾರಾಜರ ಕಾಲದಲ್ಲಿ ಪದಪ್ರಯೋಗವಿದ್ದಂತೆ ರಾಣಿ ಮಹಾರಾಣಿಯರ ಕಾಲದಲ್ಲಿ ಎಂಬ ಪದವೇ ಕಾಣಸಿಗುವುದಿಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಇವೆಯೇ ಹೊರತು ಸ್ತ್ರೀತನಕ್ಕೆ ಅದರ ವೈಭವೀಕರಣಕ್ಕೆ ಅವಕಾಶಗಳಿಲ್ಲ. ಬಹಳಷ್ಟು ಸಲ ಮಹಿಳೆಯರಿಂದಲೇ ಬದಲಾವಣೆಗೆ ವಿರೋಧ ವ್ಯಕ್ತವಾಗುತ್ತದೆ. ಕೌಟುಂಬಿಕ ನೆಲೆಗಟ್ಟುಗಳು ಮಹಿಳೆಯನ್ನು ಭಾವನಾತ್ಮಕವಾಗಿ ಬಂಧಿಸಿದ್ದು, ದೌರ್ಜನ್ಯವನ್ನು ಸಹಿಸುವಂತೆ ಪ್ರಚೋದಿಸುತ್ತವೆ. ಇದರೊಂದಿಗೆ ಇಂದಿನ ಜಗತ್ತಿನ ಮಹಿಳಾ ದೌರ್ಜನ್ಯದ ನೆಲೆಗಳು ಬಹು ಸೂಕ್ಷ್ಮವಾಗಿವೆ. ಆಧುನಿಕ ಕಾರ್ಪೋರೆಟ್ ಜಗತ್ತಿನಲ್ಲಿ ವೇತನ ತಾರತಮ್ಯ, ಸಂಭಾವನೆಯ ತಾರತಮ್ಯದ ಜೊತೆಗೆ, ಸ್ವಾತಂತ್ರ್ಯ ಸಮಾನತೆಯ ಕುರಿತಾಗಿ ತಪ್ಪು ಗ್ರಹಿಕೆಗಳನ್ನು ಸೃಷ್ಟಿಸಿಲಾಗಿದೆ. ಮನರಂಜನೆಗಳಿಗೆ, ಜಾಹೀರಾತು ಲೋಕಕ್ಕೆ ಹೆಣ್ಣಿನ ದೇಹವನ್ನು ಸರಕಂತೆ ಬಳಸಲಾಗುತ್ತಿದೆ. ಮಾರುಕಟ್ಟೆ ಸಂಸ್ಕೃತಿಗೆ ಮಾರಲಾಗುತ್ತಿದೆ. ವೇಶ್ಯಾವೃತ್ತಿಯ ಮುಂದುವರೆದ ಭಾಗವಾಗಿ ಈ ಕೊಳ್ಳುಬಾಕ ಜಗತ್ತಿಗೆ ಹೆಣ್ಣು ಬಲಿಯಾಗುತ್ತಿರುವುದು ಸಂಕಟಕರ. ಇಂದಿನ ವಿಜ್ಞಾನ ಕ್ರಾಂತಿಯ ಫಲಶ್ರುತಿಯಾದ ಯಂತ್ರಯುಗದ ಮುನ್ನಡೆಯಲ್ಲಿ ಮಹಿಳೆ ಸಮಾನತೆಯನ್ನು ಮೇಲ್ನೋಟಕ್ಕೆ ಸಾಧಿಸಿದಂತೆ ತೋರುತ್ತಿದೆ. ಮಹಿಳೆಯರು ಹೊರ ದುಡಿಮೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದರೂ, ಆರ್ಥಿಕ ಬೇಡಿಕೆಗಳ ಪೂರೈಕೆಯೇ ಪ್ರಥಮ ಆದ್ಯತೆಯಾಗಿದೆಯೇ ಹೊರತು ಮಹಿಳೆಯ ಸ್ಥಾನಮಾನದ ಉನ್ನತೀಕರಣವಲ್ಲ. ಯಾಕೆಂದರೆ ಇಂದಿನ ಶೇ ೮೦ರಷ್ಟು ಹೊರ ದುಡಿಮೆಯ ಹೆಣ್ಣು ಮಕ್ಕಳು ಮನೆಯ ಜವಾಬ್ದಾರಿಗಳ ಜೊತೆಗೆ ಹೊರ ದುಡಿಮೆಯ ಶ್ರಮವನ್ನು ನಿಭಾಯಿಸಬೇಕಾಗಿದೆ. ಹಾಗಾಗಿ ಮರಳಿ ಮರಳಿ ಹೆಣ್ಣು ಅದೇ ವ್ಯೂಹದೊಳಗೆ ಬಂಧಿಯಾಗುತ್ತಲೇ ಇದ್ದಾಳೆ. ಈ ವ್ಯೂಹವನ್ನು ಮೀರುವ ಬಗೆ ಎಂತು? ಎಂಬುದೇ ಮೂಲಭೂತ ಪ್ರಶ್ನೆ.



(ದಾಂಡೇಲಿ ಸರ್ಕಾರಿ ಪ.ಪೂ.ಕಾಲೇಜಿನಲ್ಲಿ ಇಂಗ್ಲಿಷ್ ಬೋಧಿಸುವ ಲೇಖಕಿ, ಕವಯಿತ್ರಿ ಮತ್ತು ಸಾಹಿತ್ಯ ಚಿಂತಕಿಯೂ ಹೌದು)

೧೨ನೇ ಪುಟದಿಂದ)

ಸಂಖ್ಯೆಯಲ್ಲಿ ಹೂ ಸಿಕ್ಕಿಬಿಡುವುದೇ...ಎದೆಯೊಳಗೆ ಢವ ಢವ ಆರಂಭ. ಇರಲಿ ಎಂದು ಸೈರಿಸಿಕೊಂಡು ಮತ್ತೊಮ್ಮೆ ಮತ್ತಷ್ಟು ಭಕ್ತಿಯಿಂದ ಮೂರು ಸುತ್ತು ಸುತ್ತಿ ಅಡ್ಡ ಬಿದ್ದು ಮತ್ತೆ ಪ್ರಸಾದ ಕೇಳಿದೆ. ಆಗಲೂ ಸರಿ ಸಂಖ್ಯೆ ಹೂ ಬರುವುದೇ!!!! ಮತ್ತೊಮ್ಮೆ ಮತ್ತಷ್ಟು ಭಕ್ತಿ ತುಂಬಿ ಇನ್ನೇನು ಇನ್ನೊಮ್ಮೆ ತಿರುಗಬೇಕು ಅನ್ನುವಷ್ಟರಲ್ಲಿ ಪೂಜಾರಿಗೆ ಕೋಪ ಬಂದು ನನ್ನ ಭುಜ ಹಿಡಿದು ಅಯ್ಯ ಹೋಗಮ್ಮ ಇವತ್ತೆಲ್ಲ ತಿರುಗುವಂತೆ... ಬೇರೆಯವರು ಬರುವುದು ಬೇಡ್ವಾ? ಎಂದು ಕೋಪದಿಂದ ನೂಕಿದ್ದು ನೆನಪಾಗಿ ಒಬ್ಬಳಿಗೇ ಜೋರಾಗಿ ನಗು ಬಂದಿತ್ತು...

ಇದೆಲ್ಲಾ ಜಾತ್ರೆಯ ಹಿಂದಿನ ದಿನ. ಜಾತ್ರೆ ದಿನ ಕರಿಯಮ್ಮನ ಮಕ್ಕಳು ಉಡಿಸಲಮ್ಮ ಗುಡಿಯ ಮುಂದೆ ಬೆಳಿಗ್ಗೆ ೯:೦೦ರ ಹೊತ್ತಿಗೆ ವಾದ್ಯಗಳೊಂದಿಗೆ ಜಮಾಯಿಸುತ್ತಿದ್ದರು. ಚೋಮಗಳು ಎಂದು ಕರೆಯುವ ದೊಡ್ಡ ಮೀಸೆಯ, ಅಗಲ ಕಣ್ಣುಗಳ, ಚೂಪು ಮೂಗಿನ, ಕೆಂಪು ಮುಖದ ಮಣ್ಣಿನಿಂದ ಮಾಡಿದ ಆಕಾರಗಳ ಒಳಗೆ ತಲೆ ತೂರಿಸಿಕೊಂಡು ಗೆಜ್ಜೆ ಕಟ್ಟಿದ ಕಾಲುಗಳಲ್ಲಿ ಹೆಜ್ಜೆ ಹಾಕುತ್ತಿದ್ದರು. ಸಂಜೆ ೫ ಗಂಟೆ ವೇಳೆಗೆ ದಳವಾಯಿ ಎಂದು ಕರೆಯುವ ವ್ಯಕ್ತಿಗೆ ಬೆನ್ನಿಗೆ ಕೊಂಡಿ ಚುಚ್ಚಿ ಅವನನ್ನು ಮರದ ಕಂಬಕ್ಕೆ ಕಟ್ಟಿ ಏರಿಸಿ ೫ ಸುತ್ತು ಸುತ್ತುವುದೇ "ಸಿಡಿ". ಜಾತ್ರೆಯ ಮುಖ್ಯ ಭಾಗ ಅದೇ... ಸಿಡಿಗಾಗಿಯೇ ಬೆಳಿಗ್ಗೆಯಿಂದ ಉರಿಬಿಸಿಲಿನಲ್ಲಿ ಸಂಜೆ ಆಗುವವರೆಗೆ ಎಲ್ಲಾ ಕಾಯುವುದು. ನನಗೆ ಬೆನ್ನಿಗೆ ಕೊಂಡಿ ಚುಚ್ಚುವುದರ ಹಿಂದಿನ ಸತ್ಯ ಪರಿಶೀಲನೆಗೆ ಪ್ರತಿವರ್ಷ ಪ್ರಯತ್ನಿಸುತ್ತಲೇ ಇದ್ದೆ. ಅದನ್ನು ಖಾತ್ರಿಪಡಿಸಿಕೊಳ್ಳಲು ಆ ಉರಿಬಿಸಿಲು, ಸೆಖೆ, ಸುಗಂಧರಾಜ ಹೂವಿನ ಘಮ, ಭಯ ಬರಿಸುವಂತ ವಾದ್ಯ, ಆ ನೂಕು ನುಗ್ಗುಲಿನ ನಡುವೆ ಜಾಗ ಮಾಡಿಕೊಂಡು ಹೋಗಿ ಮುಂದಿನ ಸಾಲಲ್ಲೇ ಭಯದಲ್ಲೇ ನಿಂತುಕೊಂಡರೂ ಇಂದಿಗೂ ಅದರ ಸತ್ಯ ತಿಳಿಯಲಾಗಿಲ್ಲ. ಹೀಗೆ ನಮಗೆಲ್ಲ ಅದೊಂದು ಕೌತುಕದ ವಿಷಯವಾಗಿದ್ದರೂ, ಮನದ ಮೂಲೆಯಲ್ಲೆಲ್ಲೋ ಇದು ಕ್ರೂರ ಆಚರಣೆಯೆಂದು ಅನ್ನಿಸುತ್ತಿದ್ದುದು ದಿಟ. ಜೊತೆಗೆ ನಂತರದ ದಿನಗಳಲ್ಲಿ ಇದರಲ್ಲಿ ಸಾಮಾಜಿಕ ಶೋಷಣೆಯೂ ಇದೆ ಎಂಬ ಅರಿವೂ ಉಂಟಾಗತೊಡಗಿತು.

ಇದಕ್ಕೆ ತಕ್ಕಂತೆ ಸರ್ಕಾರ ಸಿಡಿ ಆಡುವುದನ್ನು ಅಮಾನವೀಯ ಆಚರಣೆ ಎಂದು ಘೋಷಿಸಿ ಸಿಡಿ ಆಟವನ್ನು ನಿಷೇಧಿಸಿದೆ. ಹಾಗಾಗಿ ಈಗ ನಾಲ್ಕೈದು ವರ್ಷಗಳಿಂದ ಜಾತ್ರೆಯೂ ಇಲ್ಲ. ಆದರೆ ದೇವರಲ್ಲಿನ ಜನರ ಉತ್ಸಾಹ–ಭಕ್ತಿ ತಗ್ಗಿಲ್ಲ. ಈಗ ಮೂರು ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಒಬ್ಬರು ಸರಿಯಾಗಿ ನಿಲ್ಲಲು ತಾವಿಲ್ಲದಷ್ಟು ಇದ್ದ ಗುಡಿಗಳ ಜಾಗದಲ್ಲಿ ಉಡಿಸಲಮ್ಮನಿಗಾಗಿ ಬೃಹತ್ ದೇವಸ್ಥಾನ ಸಿದ್ಧವಾಗಿದೆ. ಕರಿಯಮ್ಮನಿಗಾಇಯೂ ಭವ್ಯ ದೇವಸ್ಥಾನದ ನಿರ್ಮಾಣ ಕಾರ್ಯ ನಡೆದಿದೆ. ಇದರ ಭಾಗವಾಗಿ ಮುಂದೆ ಜಾತ್ರೆಯೂ ಪುನರಾರಂಭವಾಗಬಹುದು.

ಅದೇನೇ ಇರಲಿ, ಜಾತ್ರೆಯ ನಂತರ ಹಂಚುತ್ತಿದ್ದ ಬೆಲ್ಲದ ಪಾನಕ, ಕಡಲೆಬೇಳೆ ಕೋಸಂಬರಿ, ಬೇಟೆಮಣೆ ಆಡಲು ಕಂಬಳಿ ಮೇಲೆ ಮೂಲೆಮೂಲೆಗೂ ಇಡುತ್ತಿದ್ದ ಬೆಲ್ಲ ಕಾಯಿತುರಿ ಬಾಳೆ ಹಣ್ಣಿನಿಂದ ತಯಾರಿಸಿದ ರಸಾಯನಕ್ಕಾಗಿ ತಿಂಗಳುಗಳಿಂದಲೇ ಮನಸ್ಸು ಜೊಲ್ಲು ಸುರಿಸುತಿತ್ತು..


ಆದರೆ ಸೆಲ್ಫಿ, ಫೋಟೋಗಳ ಭರಾಟೆಯಲ್ಲಿ ಏನನ್ನೂ ನೋಡದ, ಕೇಳದ, ಕೇಳಿಸಿಕೊಳ್ಳದ, ಹುಡುಕದ, ಅನುಭವಿಸದ, ತವಕಿಸದ ಇಂದಿನ ಜಾತ್ರೆಗಳಿಗಿಂತ ನಮ್ಮ ಅಂದಿನ ಜಾತ್ರೆಗಳು... ಜಾತ್ರೆಗಾಗಿ ಕಾಯುತಿದ್ದ, ಕಾದು ಬೇಯುತ್ತಿದ್ದ ಆ ದಿನಗಳು ಅದೆಷ್ಟು ಅಪ್ಯಾಯಮಾನ......



(ಹಳೇಬೀಡಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಉಪಾಧ್ಯಾಯಿನಿಯಾಗಿರುವ ಲೇಖಕಿ, ಹವ್ಯಾಸಿ ಬರಹಗಾರ್ತಿಯೂ ಹೌದು)

ಮೂರು ಶ್ರದ್ಧಾಂಜಲಿಗಳು ಮತ್ತು ಒಂದು ಪುಸ್ತಕ : ಕೆಲ ಟಿಪ್ಪಣಿಗಳು


ಲಲಿತ ಕವಿ-ಕವಿತೆ ಜೋಡಿಯ ನಿರ್ಗಮನ



ಚೆಂಬೆಳಕಿನ ಕವಿ ಕಣವಿ ಇನ್ನಿಲ್ಲ. ಕನ್ನಡಮ್ಮನ ಕೊರಳಿಗೆ, ಧಾರವಾಡದ ಮಣ್ಣಿಗೆ ಬಿದ್ದ ಮಳೆಯಲ್ಲಿ ಮೊಳೆತ ಬಣ್ಣ ಬಣ್ಣದ ಹೂಗಳ, ಬೆಳಗಿನ ಇಬ್ಬನಿಯಿಂದ ಹೊಳೆವ ಹಸುರು ಹುಲ್ಲಿನ ಹಾಸುಗಳ ದಂಡೆಗಳಿಂದ ಹೆಣೆದ ಕವಿತೆಗಳ ಮಾಲೆ ಹಾಕಿ ಸಿಂಗರಿಸಿದ ಚೆನ್ನವೀರ ಕಣವಿಯವರು ೯೩ ವರ್ಷಗಳ ಸಾರ್ಥಕ ತುಂಬು ಜೀವನ ನಡೆಸಿ ನಮ್ಮನ್ನಗಲಿ ಹೋಗಿದ್ದಾರೆ. 'ಹಾಡೆನ್ನ ದೈವತವು, ಹಾಡೆನ್ನ ಜೀವತವು' ಎಂದು ನಂಬಿ 'ವಿಶ್ವ ವಿನೂತನ ವಿದ್ಯಾಚೇತನ ಸರ್ವಹೃದಯ ಸಂಚಾರಿ'ಯಾದ ಕನ್ನಡಮ್ಮನ ಗುಡಿಯಲ್ಲಿ ಸಹೃದಯ ಕೇಳುಗರ ಮನವನ್ನು ಅತ್ಯಂತ ಲಲಿತ ಮಧುರವಾದ ಹಾಡುಗಳ ಸೋನೆ ಮಳೆಯಿಂದ ತೊಯ್ಸಿದ ಈ ಕವಿ 'ಹಾಡುವುದ ನಿಲ್ಲಿಸಬೇಡ' ಎಂಬ ಬದುಕಿನ ಸಂದೇಶ ನೀಡುತ್ತಲೇ ನಮ್ಮಿಂದ ನಿರ್ಗಮಿಸಿದ್ದಾರೆ. ನಮ್ಮ ಕಾಲದ ಕವಿ ಸಮೂಹದಲ್ಲೇ ಅತ್ಯಂತ ಸಜ್ಜನರೆನಿಸಿದ ಕಣವಿಯವರು ತಮ್ಮ ವಿಶಿಷ್ಟತೆ ಮೆರೆದ ನೂರಾರು ಸುನೀತಗಳ ವ್ಯಕ್ತಿ ಚಿತ್ರಗಳಲ್ಲಿಯೂ ತಮ್ಮ ಈ ಗುಣವನ್ನು ಮೆರೆದು ಬೆರಗು ಹುಟ್ಟಿಸಿದ್ದಾರೆ.

'ಹೊಸ ಮನುಷ್ಯ' ಪತ್ರಿಕೆಯ ಪ್ರೀತಿ ತುಂಬಿದ ಅಭಿಮಾನಿಯಾಗಿದ್ದ ಕಣವಿಯವರು ನಮ್ಮ ಇತ್ತೀಚಿನ ವಿಶೇಷಾಂಕಕ್ಕೆ ನೀಡಿದ ಸಂದರ್ಶನದಲ್ಲಿ, ಈ ಸಂದರ್ಶನ ತಮ್ಮ ಪಾಲಿನ ಮತ್ತು ಸಂದರ್ಶನ ಮಾಡಿದವರ ಪುಣ್ಯ ಎನ್ನುತ್ತಾ ಈ ಪ್ರೀತಿ-ಅಭಿಮಾನಗಳಿಗೆ ಅಭಿವ್ಯಕ್ತಿ ನೀಡಿದ್ದಾರೆ. ಈ ಮಾತುಗಳು ಪತ್ರಿಕೆಯ ಪುಣ್ಯ ಎಂದಷ್ಟೇ ಹೇಳದೆ ಇನ್ನೇನು ಹೇಳಲು ಸಾಧ್ಯ?

ಹಾಡು ನಿಲ್ಲಿಸಿದ ಗಾನ ಕೋಗಿಲೆ



ಭಾರತದ ಗಾನಕೋಗಿಲೆಯ ದನಿ ಇನ್ನು ಕೇಳುವಂತಿಲ್ಲ. ಭಾರತದ ಮನ ಮನೆಗಳಲ್ಲಿ ಭಾಷೆಯ ಹಂಗಿಲ್ಲದೆ ಧ್ವನಿ-ಪ್ರತಿಧ್ವನಿಸುತ್ತಿದ್ದ ಕಂಠಶ್ರೀಯ ಒಡತಿ ಲತಾದೀದಿ ತಮ್ಮ ೯೨ನೆಯ ಹಿರಿಯ ವಯಸ್ಸಿನಲ್ಲಿ ನಮ್ಮನ್ನಗಲಿ ಹೋಗಿದ್ದಾರೆ. ಮೂಲತಃ ಹಿಂದಿ ಚಿತ್ರ ಗಾಯಕಿಯಾಗಿದ್ದರೂ, ತಮ್ಮ ವೈವಿಧ್ಯಮಯ ಗೀತಗಾಯನದ ಮೂಲಕ ಇಡೀ ಭಾರತದ ಗೀತಗಾಯನ ಕಲೆಯ ಪ್ರತೀಕವಾಗಿದ್ದ ಲತಾ ಮಂಗೇಶ್ಕರ್ ತಮ್ಮ ಗಂಧರ್ವಸಮಾನ ಕಲಾ ಪ್ರತಿಭೆಯ ಮೂಲಕ ಭಾರತೀಯ ಸುಗಮ ಸಂಗೀತದ ಸಕಲ ಸಿರಿ ಸೌಂದರ್ಯವನ್ನು ಸೂರೆ ಮಾಡಿದವರು. ಗೀತ ಗಾಯನದ ಸಕಲ ಮನೋಧರ್ಮಗಳಲ್ಲೂ ಅವಕ್ಕೆ ಮತ್ತು ಅಲ್ಲಿನ ಸಾಹಿತ್ಯಕ್ಕೆ ಕಿಂಚಿತ್ತೂ ಚ್ಯುತಿ ಬಾರದಂತೆ ಗೀತೆಗಳನ್ನು ಬೆಳಕಿನ ದೀಪಗಳಂತೆ ಉರಿಸಿದ ಕಲಾಧೀಮಂತಿಕೆ ಅವರದ್ದು.


ಅದು ಪ್ರಣಯಗೀತೆಯಾಗಲೀ, ವಿಷಾದ ಗೀತೆಯಾಗಲೀ, ದೇಶಭಕ್ತಿ ಗೀತೆಯಾಗಲೀ, ಭಜನೆಯಾಗಲೀ ಅವುಗಳ ಆಂತರಿಕ ಘನತೆಯನ್ನು ಬೆಳಗಿಸಿ ಹಾಡುತ್ತಿದ್ದ ಈ ಗಾಯಕಿ ನಮ್ಮ ಹಲವು ರಾಷ್ಟ್ರೀಯ ಸಂದರ್ಭಗಳಲ್ಲಿ ಮತ್ತು ಸೇನಾಪಡೆಗಳನ್ನು ಹುರಿದುಂಬಿಸಿ ಹಾಡುತ್ತಿದ್ದ ಪರಿ ಅವರನ್ನು ಒಂದು ವಿಶಿಷ್ಟ ರಾಷ್ಟ್ರೀಯ ಗಾಯಕಿಯನ್ನಾಗಿ ಮಾಡಿತ್ತು. ಹಾಗೆ ನೋಡಿದರೆ ಲತಾ ಅವರಿಗೆ ಸಾವಿಲ್ಲ, ಅವರು ಹಾಡಿ ಹೋಗಿರುವ ಸಾವಿರಾರು ಹಾಡುಗಳು ಭಾರತದಾದ್ಯಂತ ಒಬ್ಬರಲ್ಲ ಮತ್ತೊಬ್ಬರ ತುಟಿಗಳಲ್ಲಿ ಸದಾ ನಲಿಯುತ್ತಲೇ ಇರುತ್ತದೆ.

ಮೌನಕ್ಕೆ ಸರಿದ ಚಂಪಾ



ಕನ್ನಡ ಸಾರಸ್ವತ ಲೋಕದಲ್ಲಿ ಚಂಪಾ ಎಂದೇ ಹೆಸರಾಗಿದ್ದ ಚಂದ್ರಶೇಖರ ಪಾಟೀಲರು ನಮ್ಮನ್ನಗಲಿ ಹೋಗಿದ್ದಾರೆ. ತಮ್ಮನ್ನು ಸಾರಸ್ವತ ಲೋಕಕ್ಕಷ್ಟೇ ಸೀಮಿತಗೊಳಿಸಿಕೊಳ್ಳದೆ ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಹಲವು ವೇಷಗಳನ್ನು ತೊಟ್ಟು ಕುಣಿದು ಜನರ ಗಮನ ಸೆಳೆದಿದ್ದ ಪಾಟೀಲರು ಮೂಲತಃ ಕವಿ ಮತ್ತು ನಾಟಕಕಾರರು. 'ಸಂಕ್ರಮಣ' ಎಂಬ ಸಾಹಿತ್ಯಿಕ ದ್ವೈಮಾಸಿಕವನ್ನು ಸತತವಾಗಿ ಅರವತ್ತು ವರ್ಷಗಳ ಕಾಲ ಸಂಪಾದಿಸಿ ನಡೆಸಿ ದಾಖಲೆ ಮಾಡಿದವರು. ಇದರ ಆರಂಭದಲ್ಲಿ ಗಿರಡ್ಡಿ ಗೋವಿಂದರಾಜ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿಯವರೊಂದಿಗೆ ಕನ್ನಡದ ಹಲವು ಚಿಗುರು ಪ್ರತಿಭೆಗಳನ್ನು ಪೋಷಿಸಿದವರು. ಆದರೆ ತಮ್ಮ ಸಾಹಿತ್ಯ ಜೀವನದ ಅರ್ಧ ದಾರಿಯಲ್ಲಿ ಸಾಹಿತ್ಯ ರಾಜಕೀಯದ ಅಡ್ಡಹಾದಿ ಹಿಡಿದು ಎರಡೂ ಕಡೆ ಸಲ್ಲದಂತಾಗಿ ಕೋಡಂಗಿತನಕ್ಕೆ ಬಿದ್ದವರು. ಹೀಗಾಗಿ ಅವರ ಸಾಹಿತ್ಯವೂ ಸೇರಿದಂತೆ ಎಲ್ಲವನ್ನೂ -ಅವರು ಕೆಲವೊಮ್ಮೆ ನಿಷ್ಠುರ ಸತ್ಯವನ್ನು ಹೇಳುತ್ತಿದ್ದಾಗಲೂ-ಜನ ಅದನ್ನು ನಗಲೆಂದೇ ಸ್ವೀಕರಿಸುವಂತಾಯಿತು. ಕನ್ನಡಕ್ಕೆ ಆರಂಭದಲ್ಲಿ ಕೆಲವು ಒಳ್ಳೆಯ ಕವನಗಳನ್ನೂ, ವಿಶಿಷ್ಟ ಏಕಾಂಕ ನಾಟಕಗಳನ್ನೂ ನೀಡಿದ ಸಾಹಿತಿಯೊಬ್ಬರು ಅಂತಿಮವಾಗಿ ಶಬ್ದಗಳ ಚತುರ ಆಟದ ಮೂಲಕ ಮನರಂಜನೆಯ ಉದ್ಯಮಕ್ಕಿಳಿದ ದುರಂತ ಕಥೆ ಇದು.

ಕನ್ನಡ ಚಿತ್ರಗೀತೆಗಳಿಗೊಂದು ಕನ್ನಡಿ



ನಾನು ಚಲನಚಿತ್ರ ಗೀತೆ ಪ್ರಿಯ, ಅದೂ ಕನ್ನಡ ಚಲನಚಿತ್ರ ಗೀತೆಗಳ ಪ್ರಿಯ ಎಂದು ಹೇಳಿಕೊಳ್ಳಲು ನನಗೆ ಯಾವ ಸಂಕೋಚವೂ ಇಲ್ಲ. ಹಾಗೆ ನೋಡಿದರೆ ನನ್ನ ಬೌದ್ಧಿಕತೆ ಮತ್ತು ಯೌವ್ವನದ ಮೊದಲ ಪಾಠಗಳನ್ನು ಕಲಿತದ್ದೇ ಅಲ್ಲದೆ ಸಂಗೀತಕ್ಕೆ ಕಿವಿ ಅರಳಲಾರಂಭವಾದದ್ದೇ ಈ ಚಿತ್ರಗೀತೆಗಳಿಂದ ಎಂದು ಹೇಳಬಹುದು. ಹಾಗೆ ನೋಡಿದರೆ ನಮ್ಮ ಬೌದ್ಧಿಕ ಪ್ರತಿಷ್ಠೆ ನಮ್ಮ ತಲೆ ತಿರುಗಿಸಲಾರಂಭಿಸಿದವರೆಗೂ ನಮ್ಮ ತಲೆಮಾರು ಕುರಾಸೀ, ಹುಣಸೂರು ಕೃಷ್ಣಮೂರ್ತಿ, ಜಿ.ವಿ ಅಯ್ಯರ್, ಚಿ. ಉದಯಶಂಕರ್, ಆರ್.ಎನ್. ಜಯಗೋಪಾಲ್ ಮುಂತಾದವರ ಗೀತೆಗಳನ್ನು ಕುವೆಂಪು, ಬೇಂದ್ರೆ, ಪುತಿನ, ಕೆಎಸ್‌ನ ಮುಂತಾದ ಕವಿಗಳ ಗೀತೆಗಳೊಂದಿಗೇ ಯಾವುದೇ ತರತಮಗಳಿಲ್ಲದೆ ಕೇಳುತ್ತಿದ್ದೆವು.

ಈ ಕಾರಣದಿಂದಲೇ ನಾನು 'ಎಪ್ಪತ್ಮೂರು ಕನ್ನಡ ಚಿತ್ರಗೀತೆಗಳ ಒಲವನ್ನು ಸಾಕ್ಷಾತ್ಕರಿಸುವ ರಸ ನಿಮಿಷಗಳು' ಎಂಬ ಉಪಶೀರ್ಷಿಕೆಯನ್ನು ಹೊತ್ತ ಕವಯತ್ರಿ ಆರ್ ಜ್ಯೋತಿ ಅವರ 'ಮನಸ್ಸು ಮಾಗಿದ ಸುಸ್ವರ' ಎಂಬ ಪುಸ್ತಕವನ್ನು (ಪ್ರ: ದೇಸಿ ಪುಸ್ತಕ, ಬೆಂಗಳೂರು: ೯೪೪೮೪೮ ೩೬೮೫೭೮) ಕುತೂಹಲದಿಂದ ಕೈಗೆತ್ತಿಕೊಂಡೆ. ಇಲ್ಲಿ ಐವತ್ತರ 'ರಾಮನ ಅವತಾರ' ('ಭೂಕೈಲಾಸ') ದಿಂದ ಹಿಡಿದು ಇತ್ತೀಚಿನ ರವಿಚಂದ್ರನ್ ಚಿತ್ರಗಳವರೆಗಿನ ಹಳೆಯ ಮತ್ತು ಹೊಸ ಚಿತ್ರ ಗೀತೆಗಳ ತಕ್ಕಮಟ್ಟಿಗಿನ ಸಮ್ಮಿಶ್ರಣ ಇದೆ.

ಒಂದು ಚಿತ್ರಗೀತೆಯ ಸಾಕ್ಷಾತ್ಕಾರ ಅಥವಾ ರಸಗ್ರಹಣ ಎಂದರೆ ಆ ಗೀತೆಯ ಸಾಹಿತ್ಯದ ರಸಬಿಂದುಗಳು ಚಿತ್ರಕಥೆಯ ಸಂದರ್ಭದ ರಸಘಟ್ಟಗಳ ಜೊತೆ ಸೇರಿ ಅದರ ಚಿತ್ರೀಕರಣದ ಲಯ ವಿನ್ಯಾಸದೊಂದಿಗೆ ಹೇಗೆ ಚಿತ್ರದ ಒಟ್ಟಾರೆ ಮೌಲಿಕತೆಯನ್ನು ಪ್ರಭಾವಿಸಿದೆ ಎಂದು ವಿಷದೀಕರಿಸುವುದು. ಈ ದೃಷ್ಟಿಯಿಂದ ಈ ಪುಸ್ತಕ ನಿರಾಶೆಯನ್ನೇ ಹುಟ್ಟಿಸುತ್ತದೆ. ಪುಸ್ತಕ ಮುಖ್ಯವಾಗಿ ಚಿತ್ರದ ಕಥೆ, ಗೀತೆಯ ಸಂದರ್ಭ, ಅದರ ಪಠ್ಯ ಮತ್ತು ಹಿನ್ನೆಲೆ; ಕೆಲವೊಮ್ಮೆ ಅದರ ನಟನಟಿಯರ ವಿವರಗಳ ಕಲಸುಮೇಲೋಗರವನ್ನಷ್ಟೇ ನೀಡಿದೆ. ಹಂಸಲೇಖ ಅವರ ಉತ್ತೇಜನದ ಮುನ್ನುಡಿಯೂ ಪುಸ್ತಕದ ಮಹತ್ವವನ್ನೇನೂ ಹೆಚ್ಚಿಸಿದಂತಿಲ್ಲ. ಜ್ಯೋತಿಯವರು ಇದೇ ರೀತಿಯ ಪ್ರಯತ್ನ ಮಾಡಿದ್ದ ಚಂದ್ರಶೇಖರ ಆಲೂರರ ಪುಸ್ತಕವನ್ನೊಮ್ಮೆ ಗಮನಿಸಿದ್ದರೆ ಚೆನ್ನಿತ್ತೇನೋ!

-ಡಿಎಸ್ಸೆನ್

Statement about Ownership and other particulars about News paper 'Hosa Manushya'

FORM 1V

1. Place of Publication : Shimoga
2. Printers name : D.S. Nagabhushana
   Nationality : Indian
   Address : HIG-5, 'Nudi', Kallalli Extn, Vinoba Nagara Shimoga-577204
3. Publishers Name: D.S.Nagabhushana
   Nationality : Indian
   Address : Same as above
4. Editor's name : D.S.Nagabhushana
   Nationality : Indian
   Adddress : Same as above
5. Name of Individuals who own the News paper : D.S.Nagabhushana,
   Address : Same as above

I, D.S.Nagabhushana hereby declare that the particulars given above are true to the best of my knowledge and belief.


Shimoga
31.3.2022

Sd/-
D.S.Nagabhushana

ಪುಸ್ತಕಾವಲೋಕನ

ಪು: **Born Muslim: Some Truths about Islam in India** ಲೇ: **Gazala Wahab** ಪ್ರ: **Alep: New Delhi**, ಪು: ೪೦೦ ಬೆ:ರೂ.೯೯೯/-

ಮುಸ್ಲಿಮರ ಆತಂಕ ಮತ್ತು ಅನಿಶ್ಚಿತ ಭವಿಷ್ಯ : ಒಂದು ಅನುಭವ ಕಥನ



ಇದು ಭಾರತೀಯ ಮುಸ್ಲಿಮ್ ಸಮಾಜದ ಇಂದಿನ ಸ್ಥಿತಿ, ಎದುರಿಸುತ್ತಿರುವ ಸವಾಲುಗಳು, ಅದರ ಇತಿಹಾಸ–ಭವಿಷ್ಯವನ್ನು ಕುರಿತು ಸುದೀರ್ಘ ಚಿಂತನೆಯನ್ನು ನಡೆಸುವ ಪುಸ್ತಕವಾಗಿದೆ. ಮುಸ್ಲಿಮರನ್ನು ಕುರಿತು ಅಸಹನೆ, ದ್ವೇಷ, ಹಿಂಸೆಗಳು ಭಾರತದಲ್ಲಿ ಸಾಮಾನ್ಯವಾಗುತ್ತಿರುವ ಕಾಲದಲ್ಲಿ ಈ ಪುಸ್ತಕದಲ್ಲಿನ ಪ್ರಶ್ನೆಗಳು ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತ ಸಮುದಾಯಗಳೆರಡನ್ನೂ ಆತ್ಮವಿಮರ್ಶೆಗೆ ಹಚ್ಚುವಂತಿವೆ. ಪ್ರಪಂಚದ ಎರಡನೇ ಮುಖ್ಯ ಧರ್ಮವಾಗಿರುವ ಇಸ್ಲಾಮನ್ನು ಅನುಸರಿಸುವವರ ಸ್ಥಿತಿ ಅಮೆರಿಕಾದ ಕಪ್ಪು ಜನರಿಗಿಂತ ಯಾಕೆ ಹೀನಾಯವಾಗಿದೆ ಎಂಬುದು ಇಲ್ಲಿನ ವಿಶ್ಲೇಷಣೆಯ ವಸ್ತುಗಿದೆ.

ವೃತ್ತಿಯಿಂದ ರಕ್ಷಣಾ ಪತ್ರಿಕೋದ್ಯಮಿಯಾಗಿರುವ ಗಜಾಲಾ ಆತ್ಮಚರಿತ್ರೆ, ಇತಿಹಾಸ, ರಾಜಕೀಯ/ಸಾಮಾಜಿಕ ವಿಶ್ಲೇಷಣೆ, ವರದಿಗಾರಿಕೆ, ಅಂಕಿಅಂಶಗಳು, ಸಂದರ್ಶನಗಳೆಲ್ಲವನ್ನು ಆಧರಿಸಿ ತಮ್ಮ ಬರಹವನ್ನು ರೂಪಿಸಿದ್ದಾರೆ. ಜಾಕೀರ್ ನಾಯಕ್‌ರಂಥವರ ಮತೀಯ ನಿರೂಪಣೆಗಳಿಗಿಂತ ಭಿನ್ನವಾದ ಇಸ್ಲಾಮನ್ನು ಕುರಿತು ಬರೆಯಬೇಕೆಂಬ ಹಂಬಲ ಹಾಗೂ ದೆಹಲಿಯ ಶಾಹೀನ್ ಬಾಗ್‌ನಲ್ಲಿ ಮಹಿಳೆಯರೇ ಎನ್‌ಆರ್‌ಸಿ ವಿರುದ್ಧ ಮುನ್ನಡೆಸಿದ ಹೋರಾಟಗಳು ಪುಸ್ತಕ ಬರೆಯಲು ಮುಖ್ಯ ಪ್ರೇರಣೆ ಎಂದು ಗಜಾಲಾ ಹೇಳುತ್ತಾರೆ.

ಆಗ್ರಾದ ತಾಜ್‌ಮಹಲಿನ ಆಸುಪಾಸಿನಲ್ಲಿರುವ ಕಿಕ್ಕಿರಿದ ಗಲ್ಲಿ ಮೊಹಲ್ಲಾದಲ್ಲಿ ಬದುಕಿದ್ದ ಗಜಾಲಾರ ಕುಟುಂಬ ಆರ್ಥಿಕವಾಗಿ ಸಬಲಗೊಂಡಂತೆ "ಎಲ್ಲರೂ" ಇರುವ ಬಡಾವಣೆಗೆ ಚಲಿಸುತ್ತದೆ. ಎಲ್ಲರೊಂದಿಗೆ ಅತ್ಯುತ್ತಮ ಬಾಂಧವ್ಯ–ಒಡನಾಟವಿದ್ದರೂ ಅಡ್ವಾಣಿಯವರ ರಥಯಾತ್ರೆಯ ಸಂದರ್ಭದಲ್ಲಿ ನೆರೆಮನೆಯ ಹುಡುಗನೇ ಇವರ ಮನೆಗೆ ಬೆಂಕಿ ಹಚ್ಚಲು ಮುಂದಾದಾಗ ಅಕ್ಕಪಕ್ಕದವರನ್ನು ಸೇರಿದಂತೆ ಪೊಲೀಸರೂ ನೆರವಿಗೆ ಬರದಿದ್ದಾಗ ಗಜಾಲಾರ ಇಡೀ ಕುಟುಂಬ ಆಘಾತಕ್ಕೆ ಒಳಗಾಗುತ್ತದೆ. ಶಿಕ್ಷಣ, ಸಾಮಾಜಿಕ ಸ್ಥಾನಮಾನ, ಹಣ, ಒಳ್ಳೆಯ ಒಡನಾಟಗಳಿದ್ದರೂ ನಾವು ಯಾಕೆ ಕೇವಲ ಮುಸ್ಲಿಮರೇ ಆಗಿ ಯಾಕೆ ಕಾಣಿಸಿದೆವು? ಎಂದು ಅವರ ತಂದೆ ಮತ್ತು ಇಡೀ ಕುಟುಂಬ ಪ್ರಶ್ನಿಸಿಕೊಳ್ಳುತ್ತದೆ. ಇದು ಕೇವಲ ಗಜಾಲಾರ ಕುಟುಂಬದ ಪ್ರಶ್ನೆ ಮಾತ್ರ ಆಗಿರದೆ ಎಲ್ಲರ ಪ್ರಶ್ನೆಯೂ ಅಗಿದೆಯೆಂದು ಇಲ್ಲಿನ ಕಥನ ಹೇಳುತ್ತದೆ.

ಹೀಗೆ ಶುರುವಾಗುವ ಕಥನ ನಿಧಾನವಾಗಿ ಸ್ವತಂತ್ರ ಭಾರತದಲ್ಲಿ ಮುಸ್ಲಿಮರ ಸ್ಥಿತಿಗತಿ, ಭಾರತೀಯ ಇಸ್ಲಾಮ್, ಇಸ್ಲಾಮಿನ ಇತಿಹಾಸ–ನಂಬಿಕೆಗಳು, ರಾಜಕೀಯ ನೇತಾರರು, ಮಹಿಳೆಯರು, ಶಿಕ್ಷಣ, ಜಮಾತ್‌ಗಳು, ಬದಲಾಗುತ್ತಿರುವ ಮುಸ್ಲಿಮ್ ಸಮಾಜ ಎಲ್ಲವನ್ನು ವಿಶ್ಲೇಷಿಸುವ ವಿಸ್ತಾರವಾದ ನಿರೂಪಣೆಯಾಗಿ ಬೆಳೆಯುತ್ತದೆ. ಚಿಕ್ಕಂದಿನಿಂದಾಗಿನಿಂದ ನೀವೆಷ್ಟು ಜನರನ್ನು ಮದುವೆಯಾಗಬಹುದು, ನೀವ್ಯಾಕೆ ಸ್ನಾನ ಮಾಡುವುದಿಲ್ಲ, ದಿನಕ್ಕೆಷ್ಟು ಬಾರಿ ಬಿರಿಯಾನಿ ತಿನ್ನುತ್ತೀರಿ ಎಂದೆಲ್ಲ ಕುತೂಹಲದಿಂದ ಪ್ರಶ್ನೆ ಕೇಳುತ್ತಿದ್ದವರೆಲ್ಲ ಈಗ ಕಾರಣವನ್ನೇ ಹೇಳದೆ ದ್ವೇಷ–ಹಿಂಸೆಗೆ ಮುಂದಾಗುವ ಬಹುಸಂಖ್ಯಾತ ಪ್ರವೃತ್ತಿ ಗಜಾಲಾರನ್ನು ಎಡೆಬಿಡದೆ ಕಾಡುತ್ತದೆ. ಕೋಮುವಾದಿ ಸಿದ್ಧಾಂತದಲ್ಲಿ ನಂಬಿಕೆ ಇಲ್ಲದ– ಯಾರನ್ನೂ ದ್ವೇಷಿಸದೇ ಇರುವ ಉದಾರವಾದಿಗಳೂ ಸಹ ಮುಸ್ಲಿಮರನ್ನು ಅಸಹನೆಯಿಂದ ಕಾಣುವ ಮನೋಭಾವ ಯಾಕೆ ಎರಡು ಮೂರು ದಶಕಗಳಲ್ಲಿ ಬಲಗೊಂಡಿತು ಎಂದು ಚಿಂತಿಸುತ್ತಾರೆ.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಇತಿಹಾಸದಲ್ಲಿ ಇದಕ್ಕೆ ಉತ್ತರಗಳು ಸಿಗಬಹುದೇ ಎಂದು ಗಜಾಲಾ ಹುಡುಕುತ್ತಾರೆ. ದೇಶದ ಯಾವುದೇ ಬೀದಿಯಲ್ಲಿ ನಿಂತು ಹೊಟ್ಟೆಹೊರೆದುಕೊಳ್ಳುವ ಒಬ್ಬ ಸಾಮಾನ್ಯ ಮುಸ್ಲಿಮನನ್ನೂ ಸೇರಿದಂತೆ ಓದು–ಬರಹ, ಒಳ್ಳೆಯ ನಡೆನುಡಿ–ವರಮಾನವಿರುವ ಮುಸ್ಲಿಮನನ್ನೂ ಕುರಿತು ಬೇರೂರಿರುವ ಪೂರ್ವಗ್ರಹ, ಅಸಹನೆ, ಕುತ್ಸಿತ ಮನೋಭಾವಗಳಿಗೆ ದೇಶವಿಭಜನೆಯ ಹಿಂಸೆ, ಆಗ ಸುಶಿಕ್ಷಿತ ಮತ್ತು ಆರ್ಥಿಕವಾಗಿ ಸಬಲರಾದ ಮುಸ್ಲಿಮರು ದೇಶವನ್ನು ತೊರೆದು ಪಾಕಿಸ್ತಾನವನ್ನು ಸೇರಿದ್ದು, ಇತಿಹಾಸವನ್ನು ತಿರುಚಿ ಮುಸ್ಲಿಮರನ್ನು ರಾಕ್ಷಸೀಕರಿಸಿದ ಕೋಮುವಾದಿಶಕ್ತಿಗಳು, ಉಲೆಮಾಗಳ ಕಟ್ಟರ್ ಧೋರಣೆಗಳು ಮತ್ತು ಮುಸ್ಲಿಮ್ ನಾಯಕರು ಹಾಗೂ ಶಿಕ್ಷಿತ ವರ್ಗದವರ ನಿಷ್ಕ್ರಿಯತೆ ಕಾರಣವಾಗಿದೆ ಎಂದು ಕಂಡುಕೊಳ್ಳುತ್ತಾರೆ.

ಹಾಗೆಯೇ ಇಸ್ಲಾಮಿನ ಧಾರ್ಮಿಕ ರಚನೆ–ನೀತಿನಿಯಮಗಳ ಇತಿಹಾಸವನ್ನು ಆಳವಾಗಿ ಶೋಧಿಸುತ್ತ ಪ್ರವಾದಿಯವರ ಮರಣಾನಂತರ ಖಲೀಫರ ಕಾಲದಿಂದ ಧಾರ್ಮಿಕ ಏಕಸ್ವಾಮ್ಯಕ್ಕಾಗಿ (ಇಸ್ಲಾಮಿನಲ್ಲಿ ಜಾತಿ ವರ್ಗಗಳಿಲ್ಲದಿದ್ದರೂ) ಶಿಯಾ ಸುನ್ನಿಗಳ ನಡುವಿನ ಮತಬೇಧಗಳು, ಕುಲೀನ ಆಶ್ರಫ್, ಸೈಯದ್ ಮತ್ತು ಪಠಾಣರ ನಡುವಿನ ಶ್ರೇಣೀಕರಣಗಳು ಮುಸ್ಲಿಮ್ ಸಮಾಜವನ್ನು ಒಳಗಿನಿಂದಲೇ ಹೇಗೆ ಶಿಥಿಲಗೊಳಿಸಿದವು ಎಂದು ದಾಖಲಿಸುತ್ತಾರೆ. ಪ್ರವಾದಿಯವರನ್ನು ವಿವಾಹವಾಗಿದ್ದ ಹಿರಿಯ ವಯಸ್ಸಿನ ವಿಧವೆ ಖದೀಜಾ (ವೃತ್ತಿಯಿಂದ ವ್ಯಾಪಾರಿ) ಅವರು ತನ್ನ ಗಂಡ ಇನ್ನೊಂದು ಮದುವೆಯಾಗದಂತೆ ಮದುವೆಗೆ ಮೊದಲೇ ಶರತ್ತು ಹಾಕುವಷ್ಟು ಸ್ವಾತಂತ್ರ್ಯ ಪಡೆದಿದ್ದ ಮುಸ್ಲಿಮ್ ಮಹಿಳೆಯರು ಕಾಲಾಂತರದಲ್ಲಿ ಶಿಕ್ಷಣ ಸ್ವಾತಂತ್ರ್ಯಗಳೆರಡನ್ನೂ ಕಳೆದುಕೊಂಡಿದ್ದು ಮತಪಂಡಿತರಾದ ಉಲೇಮಾಗಳ ಕಾರಣದಿಂದ ಎಂದು ವಿವರಿಸುತ್ತಾರೆ.


ಬಹುಸಂಖ್ಯಾತರ ದ್ವೇಷ ಪೂರ್ವಗ್ರಹಗಳು ಒಬ್ಬ ಸಾಮಾನ್ಯ ಮುಸ್ಲಿಮನಲ್ಲಿ ತನ್ನ ಐಡೆಂಟಿಟಿಯ ಬಗ್ಗೆ ಆತಂಕ, ಅಭದ್ರತೆ ಮತ್ತು ಸಮರ್ಥನೆಯ ತದ್ವಿರುದ್ಧದ ಧೋರಣೆಗಳನ್ನು ಪ್ರಚೋದಿಸುತ್ತವೆ ಎನ್ನುತ್ತಾರೆ ಗಜಾಲಾ. ತಮ್ಮ ಮನೆಯ, ಮೇಲಿನ ಹಲ್ಲೆಯ ಘಟನೆಯ ನಂತರ ಕುಟುಂಬದ ಚಿಕ್ಕಪ್ಪ–ದೊಡ್ಡಪ್ಪಂದಿರ ಮಕ್ಕಳು ಬುರ್ಖಾ ಹಾಕಿಕೊಂಡು ಮುಸ್ಲಿಮ್ ಗೆಳತಿಯರೊಂದಿಗೆ ಇರುವುದೇ ಕ್ಷೇಮ ಎಂಬ ನಿರ್ಧಾರಕ್ಕೆ ಬರುವುದು ಮುಸ್ಲಿಮ್ ಸಮಾಜ ಈಚಿನ ದಿನಗಳಲ್ಲಿ ಪಡೆದುಕೊಳ್ಳುತ್ತಿರುವ ಆತಂಕಿತ ಧೋರಣೆಯ ಕುರುಹಾಗಿದೆ ಎನ್ನುತ್ತಾರೆ. ಹಿಂದೆಂದಿಗಿಂತಲೂ ಹೆಚ್ಚಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿರುವ ಮುಸ್ಲಿಮ್ ಮಹಿಳೆಯರ ಕಾರಣದಿಂದಲೇ ಬುರ್ಖಾ ದೊಡ್ಡ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ ಎನ್ನುತ್ತಾರೆ.

ಬದಲಾಗುತ್ತಿರುವ ಮುಸ್ಲಿಮ್ ಸಮಾಜವನ್ನು ವಿಶ್ಲೇಷಿಸುತ್ತಾ ಇತ್ತೀಚೆಗೆ ಹೆಚ್ಚಾಗುತ್ತಿರುವ ಕಠೋರ ಸಾಂಪ್ರದಾಯಿಕತೆಯನ್ನು ಪಾಲಿಸುವ ಸೌದಿ ವಹಾಬಿಸಂನ ದೂರಗಾಮಿ ಪರಿಣಾಮಗಳನ್ನು ಗುರುತಿಸುತ್ತಾರೆ. ಶಾಹೀನ್ ಬಾಗ್‌ನಲ್ಲಿ ಧೃತಿಗೆಡದೆ ಮಹಿಳೆಯರು ನಡೆಸಿದ ಹೋರಾಟವನ್ನು ಮುಸ್ಲಿಮ್ ಸಮಾಜದ ಹೊಸ ಸಾಮಾಜಿಕ ಚಲನೆಯ ಸಂಕೇತವಾಗಿ ನೋಡುತ್ತಾರೆ. ಗಜಾಲಾ ಹೇಳುವಂತೆ "ಭಯದಿಂದ ಪ್ರತಿಭಟನೆ, ದಿಗಿಲಿನಿಂದ ಆಕ್ರೋಶ, ಸಂಕುಚಿತತೆಯಿಂದ ಸ್ವರಕ್ಷಣೆಯ" ತದ್ವಿರುದ್ಧ ದಿಕ್ಕುಗಳಲ್ಲಿ ಚಲಿಸುತ್ತಿರುವ ಮುಸ್ಲಿಮ್ ಸಮಾಜದ ಅನಿಶ್ಚಿತ ಭವಿಷ್ಯವನ್ನು ತೋರಿಸುತ್ತಲೇ ಪುಸ್ತಕವು ಭಾರತೀಯ ಸಮಾಜದ ಕೂಡುಬಾಳುವೆಗೆ ಬಂದೊದಗಿರುವ ಕಂಟಕವನ್ನೂ ಕಾಣಿಸುತ್ತದೆ.

–ಎಸ್. ಸಿರಾಜ್ ಅಹಮದ್

ಪು: **ಸ್ತ್ರೀಲೋಕ** (ಕಾದಂಬರಿ: ಮೂರನೇ ಮುದ್ರಣ) ಲೇ: **ಸವಿತಾ ನಾಗಭೂಷಣ** ಪ್ರ: **ರೂಪಪ್ರಕಾಶನ**, ಮೈಸೂರು (೯೩೪೨೨೭೪೩೩೧) ಪು: ೫೧೬ ಬೆ :ರೂ. ೪೭೦/-

'ಹರಟೆ'ಯೇ ಪ್ರತಿರೋಧವಾಗುವ ಬೆರಗು



ಈ ಕಾದಂಬರಿ ಕಾಲು ಶತಮಾನದ ಬಳಿಕ ಮೂರನೇ ಮುದ್ರಣವನ್ನು ಕಾಣುತ್ತಿದೆ. ಈಗಿನ ಕಾಲಕ್ಕೆ ಈ ಕಾದಂಬರಿಯಲ್ಲಿ ಬರುವ ಸ್ತ್ರೀಲೋಕ ಪ್ರಸ್ತುತ ಅನ್ನಿಸಬಹುದೇ ಎಂದು ಟ್ರೇನ್‌ನಲ್ಲಿ ಕುಳಿತು ಈ ಕಾದಂಬರಿ ಓದುತ್ತಾ ಯೋಚಿಸುತ್ತಿದ್ದೆ. ಆಗ ಕಾಕತಾಳೀಯವಾಗಿ ನನ್ನ ಹಿಂದುಗಡೆ ಸೀಟಿನಲ್ಲಿದ್ದ ಹೆಂಗಸೊಬ್ಬರು ಫೋನಿನಲ್ಲಿ ತನ್ನ ಸ್ನೇಹಿತೆಯ ಜೊತೆ ಸಂಸಾರದ ಸಮಸ್ಯೆಗಳ ಬಗ್ಗೆ ಮಾತಾಡುತ್ತಿರುವುದು ಕಿವಿಗೆ ಬಿತ್ತು. ಒಂದು ಕ್ಷಣ ಆ ಹೆಂಗಸು ಈ ಕಾದಂಬರಿಯ ಪುಟಗಳೊಳಗಿಂದಲೇ ಮಾತಾಡುತ್ತಿರುವ ಹಾಗನಿಸಿತು. ಮತ್ತೆ ಕಾದಂಬರಿ ಮುಂದುವರೆಸಿದರೆ, ಯಾರೂ ಗಂಡಸರಿಲ್ಲದಿದ್ದಾಗ ತಮ್ಮತಮ್ಮಲ್ಲೇ ಮಾತಾಡುತ್ತಿರುವ ಹೆಂಗಸರ ಮಾತುಗಳನ್ನು ಕದ್ದು ಕೇಳಿಸಿಕೊಳ್ಳುತ್ತಿದ್ದೇನೆ ಅನಿಸಿತು.

'ಸ್ತ್ರೀಲೋಕ' ಸಂಪೂರ್ಣವಾಗಿ ಸಂಭಾಷಣೆ ರೂಪದಲ್ಲಿದೆ. ಈ ಸಂಭಾಷಣೆಗಳಲ್ಲಿ ಬರುವ 'ನಾನು' ಎಂದು ಸೂಚಿತವಾಗಿರುವ ಸುಮಾ ಅನ್ನುವವರು ಈ ಕಾದಂಬರಿಯನ್ನು ಬರೆಯುತ್ತಿದ್ದಾರೆ. ಸುಮಾ ನೇರವಾಗಿ ಏನನ್ನೂ ನಿರೂಪಿಸುವುದಿಲ್ಲ. ನಮಗೆ ಸಿಗುವುದು ಮೇಲುನೋಟಕ್ಕೆ ಯಾವುದೇ ಯೋಜನೆಯಿಲ್ಲದೆ, ಒಂದರ ನಂತರ ಒಂದು ಇಟ್ಟಿರುವ ಹೆಣ್ಣು ಮಕ್ಕಳ, ಹೆಚ್ಚಾಗಿ ಮನೆಗಳ ಒಳಗೇ ನಡೆಯುವ ಸಂಭಾಷಣೆಗಳು ಮಾತ್ರ. ಈ ರೀತಿಯ ಬೇರೇ ಯಾವುದೇ ಕಾದಂಬರಿ ಇರುವುದು ನನಗಂತೂ ತಿಳಿದಿಲ್ಲ. ಆದರೆ 'ಸ್ತ್ರೀಲೋಕದ ಈ 'ಶೈಲಿ' ಹೀಗೂ ಕಾದಂಬರಿ ಬರೆಯಬಹುದು ಎಂದು ತೋರಿಸುವ ಪ್ರಯತ್ನವಲ್ಲ. 'ಶೈಲಿ' ಮತ್ತು 'ವಸ್ತು'ವನ್ನು ಬೇರ್ಪಡಿಸಲಾಗದು ಅನ್ನುವುದು ಈ ಕಾದಂಬರಿಗೆ ಚೆನ್ನಾಗಿ ಅನ್ವಯವಾಗುತ್ತದೆ.

ಕಾದಂಬರಿಯಲ್ಲಿ ಓದುಗರನ್ನು ನಿಯಂತ್ರಿಸುವ, ನಡೆಯುತ್ತಿರುವುದರ ಬಗ್ಗೆ ವ್ಯಾಖ್ಯಾನ ಮಾಡುವ, ನಿರೂಪಕಿ ಇಲ್ಲ. ಕಾದಂಬರಿಯ ಪ್ರತಿಯೊಂದು ಹೆಣ್ಣಿನ ಧ್ವನಿಯೂ ಒಟ್ಟಾರೆ ಸ್ತ್ರೀ ಅನುಭವಗಳ ವಿನ್ಯಾಸದ ಒಂದು ಭಾಗ. ಈ ಕಾದಂಬರಿಯ ವಿನ್ಯಾಸವನ್ನು ಹೆಂಗಸರು ಹೆಣೆಯುವ ಹೂಮಾಲೆ ಅಥವಾ ಕೂದಲು ಹೆಣೆದು ಹೆರಳು ಹಾಕುವುದಕ್ಕೆ ಹೋಲಿಸಬಹುದು.

ಈ ಕಾದಂಬರಿಯಲ್ಲಿರುವುದು ಸಂಭಾಷಣೆಯೋ, ಮಾತುಕತೆಯೋ, ಹರಟೆಯೋ? ಸುಮಾ ಪ್ರಕಾರ ಇದು ಹರಟೆ. "ಬರೀ ಬಾಯಿಗೆ... ಕಿವಿಗೆ... ಕೆಲಸ... ಒಂದೋ ?

ಮಾತಾಡೋದು... ಇಲ್ಲ... ಕೇಳೋದು...". ಹೆಂಗಸರು ಮಾತಾಡೋದು ಹರಟೆ, ಗಂಡಸರದ್ದು ಸಂಭಾಷಣೆ ಅನ್ನುವ ಪೂರ್ವಗ್ರಹದ ಬಗ್ಗೆ ಸಾವಿರಾರು ಲೇಖನಗಳು ಬಂದಿವೆ. ಆದರೆ ಸುಮಾ ಕಾದಂಬರಿಯ ಕೊನೆಯಲ್ಲಿ ಕಂಡುಕೊಳ್ಳುವಂತೆ ಈ ಕಾಡು ಹರಟೆ ಸಮಯಾಲಾಪವಷ್ಟೇ ಅಲ್ಲ. ಹರಟೆಯೇ ಪ್ರತಿರೋಧದ ಅಸ್ತ್ರವೂ, ಬದಲಾವಣೆಯ ದಾರಿಯೂ ಆಗಬಹುದು. ಲಿಂಗಾಧಾರಿತ ಭಾಷಿಕ ವ್ಯತ್ಯಾಸಗಳ ಬಗ್ಗೆ ಆಸಕ್ತಿಯಿರುವ ವಿಧ್ಯಾರ್ಥಿಗಳು ಈ ಕಾದಂಬರಿಯನ್ನು ಓದಲೇಬೇಕು.

ಇಲ್ಲಿ ಹೆಂಗಸರ 'ಹರಟೆ' ಇರುವುದಾದರೂ ಯಾವುದರ ಬಗ್ಗೆ? ಕೋಮು ಗಲಭೆಯಲ್ಲಿ ಕೊಲೆಯಾದ ಮಗ, ತಂದೆಯಿಂದಲೇ ಅತ್ಯಾಚಾರಕ್ಕೆ ಒಳಗಾದ ಹುಡುಗಿ, ಅನಾಥಾಶ್ರಮದಲ್ಲಿ ನೂರಾರು ಹುಡುಗಿಯರನ್ನು 'ಕೆಡೆಸಿರುವ' ಸ್ವಾಮಿ, 'ಗೊನೆ ಅಲ್ಲಾಡಿಸಿಕೊಂಡು ಬಂದುಬಿಡುವ' ಗಂಡಸರ ಅಹಂಕಾರ, ಜೊತೆಗೆ ದಿನನಿತ್ಯದ ಸಂಸಾರದ ತಾಪತ್ರಯಗಳು, ಮನೆಯಲ್ಲೇ ಆದ ಗರ್ಭಪಾತ, ಊರ ಕೆರೆಯನ್ನು ಸ್ವಚ್ಛಗೊಳಿಸುವ ಅವಶ್ಯಕತೆ, ಮದ್ಯಪಾನ ನಿಷೇಧ ಇತ್ಯಾದಿ. ಈ 'ಗಂಭೀರ' ವಿಷಯಗಳ ನಡುವೆ, ವಿಷಯಾಂತರ ಆಗೇ ಇಲ್ಲವೇನೋ ಅನ್ನುವಂತೆ, ಚೆನ್ನಾಗಿ ಬೆಳೆದಿರುವ ಕರಿಬೇವಿನ ಗಿಡ, ಹಪ್ಪಳಕ್ಕೆ ಏನೇನು ಹಾಕಬೇಕು, ಸಂಪಿಗೆ ಹೂವಿನ ಪರಿಮಳಗಳು ನುಸುಳುವುದಕ್ಕೆ ಸಂಕೋಚ ಪಡುವುದಿಲ್ಲ. ಹರಟೆ ಹೇಗೇ ಶುರುವಾಗಿರಲಿ, ಸಾಮಾನ್ಯವಾಗಿ ಕೊನೆಗೊಳ್ಳುವುದು ದೋಸೆ ಹಾಕುತ್ತೇನೆ, ಪಾನಕ ಕುಡೀರಿ ಅನ್ನುವ ಆತಿಥ್ಯದಲ್ಲಿ.

ಇಲ್ಲಿ ಹರಟೆಯ ಸಂಕೀರ್ಣತೆಯನ್ನು ಗಮನಿಸಬೇಕು. ಗಂಡ-ಕುಟುಂಬ ಅನ್ನುವ ಘಟಕಕ್ಕೆ ಸೇರಿ ಏಕಾಂಗಿಯಾಗಿರುವ ಹೆಂಗಸರು ಇತರ ಹೆಂಗಸರ ಜೊತೆಗೂಡಿ 'ಹೆಣ್ಣು' ಅನ್ನುವ ಘಟಕವನ್ನು ಸ್ಥಾಪಿಸಿಕೊಳ್ಳುವ ಚಟುವಟಿಕೆಯೂ ಆಗಬಹುದು ಹರಟೆ.

ಇಲ್ಲಿ ಗಂಡಸರದ್ದು ಗೆಸ್ಟ್ ಅಪಿಯರೆನ್ಸ್. ಈ ಕಾದಂಬರಿ ಗಂಡಿನ ಧ್ವನಿಯನ್ನು 'ಹತ್ತಿಕ್ಕುತ್ತದೆ'! ಇಲ್ಲಿ ಗಂಡಸರ ಉಲ್ಲೇಖ ಇದ್ದರೂ ಅವರ ಮಾತುಗಳು ಇಲ್ಲವೇ ಇಲ್ಲ, ಇದ್ದರೂ ಅವು ನಮಗೆ ತಲುಪುವುದು ಹೆಂಗಸರು ಅದನ್ನು ವರದಿ ಮಾಡಿದಾಗಲೇ. ಕಾದಂಬರಿಯ ಗಂಡಸರು ಹೆಚ್ಚು ಕಮ್ಮಿ ಎಲ್ಲರೂ ಪಿತೃಪ್ರಭುತ್ವದ ಫಲಾನುಭವಿಗಳೇ. 'ಉಳಿದವರಿಗಿಂತ ಒಳ್ಳೆಯವರು', 'ಸಧ್ಯ ಇಷ್ಟಾದರೂ ಇದ್ದಾರಲ್ಲ' ಅನ್ನುವ ಹೊಗಳಿಕೆಗೆ ಅರ್ಹರಾದವರು.

ಇಲ್ಲಿನ ಸ್ತ್ರೀಲೋಕವಂತೂ ವೈವಿಧ್ಯಮಯವಾದದ್ದು. ಸರ್ಕಾರಿ ಕೆಲಸಕ್ಕೆ ಹೋಗುವ ಹೆಂಗಸರು, ಮನೆಕೆಲಸದ ಹೆಂಗಸರು, ಬೇರೆ ಬೇರೆ ಜಾತಿಗೆ ಧರ್ಮಕ್ಕೆ ಸೇರಿದವರು, ವಿವಿಧ ತಾಯ್ನುಡಿಗಳನ್ನು ಮಾತನಾಡುವವರು, ಈ ಸ್ತ್ರೀಲೋಕದ ನಿವಾಸಿಗಳು. ಇಲ್ಲೂ ಪೂರ್ವಗ್ರಹಗಳು, ಚುಚ್ಚುವಿಕೆ, ಹೊಟ್ಟೆಕಿಚ್ಚು, ಇಲ್ಲದೇ ಇಲ್ಲ. ಇದಕ್ಕೆ ಕಾದಂಬರಿ ಬರಿಯುತ್ತಿರುವ ಸುಮಾ ಅಥವಾ ಕಾದಂಬರಿಯಲ್ಲಿ ಬರುವ ಲೇಖಕಿ ಪ್ರಜ್ಞಾಳೂ ಹೊರತಲ್ಲ. ಆದರೆ ಈ ಎಲ್ಲಾ ಹೆಂಗಸರ ನಡುವೆ, ಈ ಹೆಂಗಸರು ಮತ್ತು ಸಮಸ್ತ ಲೋಕದ ನಡುವೆ ಇರುವುದು 'ಸಹ-ಅನುಭೂತಿ'.

ಹೆಂಗಸರ ಲೋಕ ಸಂಪೂರ್ಣವಾಗಿ ಬೇರೆಯೇ ಆಗಿರುವುದೇ? ಹೆಣ್ತನ ಅನ್ನುವುದು ದಾಟಬಹುದಾದ, ದಾಟಬೇಕಾದ ಸಾಮಾಜಿಕ ರಚನೆಯೇ ಅಥವಾ ಸಂಪೂರ್ಣವಾಗಿ ಬಿಟ್ಟುಕೊಡಲಾಗದ, ಕೆಲವೊಮ್ಮೆ ಸಕಾರಾತ್ಮಕವಾದ ಜೈವಿಕ ಅನಿವಾರ್ಯತೆಯೇ? ನಿರೂಪಣೆಯನ್ನೇ ಮುಚ್ಚಿಡಲು ಪ್ರಯತ್ನಿಸುವ ಈ ಕಾದಂಬರಿಯ ದೃಷ್ಟಿಕೋನದ ಬಗ್ಗೆ ಹೇಳುವುದು ಕಷ್ಟವಾದರೂ, ಕೃತಿಯು ಹೆಣ್ತನವನ್ನು ಸಕಾರಾತ್ಮಕವಾಗೇ ನೋಡುತ್ತದೆ ಅನಿಸುತ್ತದೆ.


'ಸ್ತ್ರೀಲೋಕ' 'ಕಂತೆ ಪುರಾಣ'ದಂತೆ ಕಂಡರೂ, ಬಹಳ ಸಂಕೀರ್ಣವಾದ ಕಾದಂಬರಿ. 'ನಾನು' ಎಂದು ಸೂಚಿತವಾಗಿರುವ ಕಾದಂಬರಿ ಬರೆಯುತ್ತಿರುವ 'ಸುಮಾ', ಸವಿತಾ ನಾಗಭೂಷಣರಂತೆ ಇರುವ ಲೇಖಕಿ ಪಾತ್ರ 'ಪ್ರಜ್ಞಾ', ಕಾದಂಬರಿಯ ಮುಖಪುಟದಲ್ಲಿ ನಮೂದಾಗಿರುವ ಕಾದಂಬರಿಕಾರರಾದ ಸವಿತಾ ನಾಗಭೂಷಣ- ಇವರುಗಳ ಅಂತರ್ಸಂಬಂಧದ ಸಂಕೀರ್ಣತೆ 'ಕಂತೆ ಪುರಾಣ'ವಲ್ಲ... 'ಸ್ತ್ರೀಲೋಕ'ದ ಸಂಕೀರ್ಣತೆಗಳ ಬಗ್ಗೆ, ಅಷ್ಟೇ ಅಲ್ಲ, ಕಥನ ಕಲೆಯ ಸಂಕೀರ್ಣತೆಗಳ ಬಗ್ಗೆಯೇ ಯೋಚನೆಗೆ ಹಚ್ಚುವ ಕನ್ನಡ ಸಾಹಿತ್ಯದ ಬಹುಮುಖ್ಯ ಕೃತಿ ಇದು.

-ಬಿ.ವಿ. ರಾಮಪ್ರಸಾದ್

ಪು: ಸಿಂಗಾರಿ(ಕಾದಂಬರಿ) ಲೇ: **ಡಾ.ಸಿದ್ಧಗಂಗಯ್ಯ ಹೊಲತಾಳು** ಪ್ರ: **ಸ್ಟೂಡೆಂಟ್ ಬುಕ್ ಕಂಪೆನಿ**, ತುಮಕೂರು(೯೪೪೯೩೦೭೦೧೧) ಪು: ೩೦೪ ಬೆ: ರೂ.೩೦೦/-

ವರ್ತಮಾನದ ಸರಳೀಕೃತ ಕಥನ

ಈ ಕಾದಂಬರಿಯು ಸುಮಾರು ನಾಲ್ಕು ದಶಕಗಳ ಸಾಮಾಜಿಕ ವಿದ್ಯಮಾನಗಳನ್ನು ತನ್ನ ವಸ್ತುವಾಗಿರಿಸಿಕೊಂಡಿದೆ. ಈ ಕಾದಂಬರಿಯಲ್ಲಿ ನಿರೂಪಿತವಾದ ಕೆಲವು ಪಾತ್ರಗಳು ನಮ್ಮ ನಡುವೆ ಇದ್ದ, ಈಗಲೂ ಇರುವ ವ್ಯಕ್ತಿಗಳಾದ್ದರಿಂದ ಇದನ್ನು 'ವಾಸ್ತವವಾದಿ' ಕಾದಂಬರಿಯೆಂದು ಭಾವಿಸಿದರೆ ತಪ್ಪೇನಿಲ್ಲ. ಇದು ನಾಲ್ಕು ದಶಕಗಳ ಕಥೆಯಾದರೂ, ಇಲ್ಲಿ ಸಿಂಗಾರೆಪ್ಪ ಗೌರಜ್ಜಿಯರದು ಹಳೆಯ ತಲೆಮಾರು. ಇವರು ಗಾಂಧಿಯವರ ಹೋರಾಟದಲ್ಲಿ ಭಾಗಿಗಳಾದ ಚಿತ್ರಣವು ಕಾದಂಬರಿಯಲ್ಲಿದೆ. ಗೌರಜ್ಜಿಯ ಮಗನಾದ ಪಟೇಲ ಪರಮೇಶು ಅನ್ನಪೂರ್ಣ, ಶಂಕ್ರಣ್ಣ ದಂಪತಿಗಳದು ಎರಡನೆಯ



ತಲೆಮಾರು. ಸಿಂಗಾರಿ ಶಿವು, ಚಂದ್ರು ಸೂಸಿ, ಸುಪ್ರೀತ್ ಸುಮತಿ ಈ ದಂಪತಿಯರದು ಮೂರನೆ ತಲೆಮಾರು. ನಂತರ ನಾಲ್ಕನೇ ತಲೆಮಾರಿನ ಇವರ ಮಕ್ಕಳವರೆಗೂ ಕಥನದ ಹರವು ವಿಸ್ತಾರವಾಗಿದೆ. ಇದು ಸ್ವಾತಂತ್ರಪೂರ್ವದಿಂದ ಸ್ವಾತಂತ್ರ್ಯೋತ್ತರ ಕಾಲದವರೆಗಿನ ಜೀವನದ ಆಡುಂಬೋಲವಾಗಿದೆ. ಈ ಕಾಲದಲ್ಲಿದ್ದ ಮಾನವ ಸಂಬಂಧಗಳು, ಕೃಷಿ ಬದುಕಿನಲ್ಲಾದ ಪಲ್ಲಟಗಳ ನಿರೂಪಣೆಯೇ ಈ ಕಥನದ ಕೇಂದ್ರ ಕಾಳಜಿಯಾಗಿದೆ. ಈ ಕಾದಂಬರಿಯು ಹಿಂದಿನ ಕೂಡು ಕುಟುಂಬದ ಸಾಂಘಿಕ ಬದುಕನ್ನು ಚಿತ್ರಿಸುವಾಗ ತೋರಿಸುವ ಶ್ರದ್ಧೆಯನ್ನು ನಂತರದ ವಿಘಟಿತ ಬದುಕನ್ನು ಚಿತ್ರಿಸುವಾಗ ತೋರುವುದಿಲ್ಲ. ಶಿಕ್ಷಿತ ವರ್ಗದ ಸ್ವಾತಂತ್ರ್ಯ ಜೀವನದ ಬಯಕೆಯೇ ಕೂಡುಕುಟುಂಬದ ವಿಘಟನೆಗೆ ಕಾರಣವೆಂಬ ತೆಳು ಗ್ರಹಿಕೆಯಲ್ಲಿಯೇ ಕಾದಂಬರಿ ವಿರಮಿಸುತ್ತದೆ. ಈ ವಿಘಟಿತ ಸ್ಥಿತಿಗೆ ಕಾರಣವಾದ ಸಂಗತಿಗಳ ಆಳವಾದ ಶೋಧನೆಯಲ್ಲಿ ತೊಡಗದಿರುವುದು ಈ ಕಥನವನ್ನು ದುರ್ಬಲಗೊಳಿಸಿದೆ.

ಸಮಾಜದಲ್ಲಿ ಒಳಿತನ್ನು ಕಾಣುವ ದೃಷ್ಟಿ ಈ ಕಾದಂಬರಿಯಲ್ಲಿ ಕ್ರಿಯಾಶೀಲವಾಗಿದೆ. ಹಾಗಾಗಿ ಇಲ್ಲಿ ಚಿತ್ರಿತವಾದ ಬಹುತೇಕ ಪಾತ್ರಗಳು ಆದರ್ಶೀಕೃತವಾಗಿವೆ. ಪಾರಂಪರಿಕ ಬದುಕಿನಲ್ಲಾಗಲಿ ಅಥವಾ ವರ್ತಮಾನದ ಬದುಕಿನಲ್ಲಾಗಲಿ ಯಾವುದೇ ಕೆಡಕುಗಳಿಲ್ಲದ ಏಕರೂಪಿ ಸಮಾಜದ ಚಿತ್ರಣವಿದೆ. ಕೆಲವು ಪಾತ್ರಗಳ ವರ್ತನೆಯಲ್ಲಿ ಸಣ್ಣತನ ಕಾಣಿಸಿಕೊಂಡರೂ ಅದು ಕ್ಷಣಿಕವಷ್ಟೆ. ಆ ಸಣ್ಣತನ ಕಳೆದುಕೊಂಡು ಉದಾತ್ತವಾಗಿ ವರ್ತಿಸುವ ಗುಣ ಈ ಪಾತ್ರಗಳಲ್ಲಿದೆ. ಈ ಕಾದಂಬರಿಯು ಒಳಗೊಳ್ಳುವ ಮಠ, ಮಠದ ಗುರುಗಳು, ವಿಶ್ವವಿದ್ಯಾಲಯ, ಕಾಲೇಜು, ಅಧ್ಯಾಪಕರು, ಸಿಂಗನಮನೆಯ ಆಳುಗಳು, ಅತ್ತೆ ಸೊಸೆಯರ ಸಂಬಂಧ, ಸಹೋದರರ ಸಂಬಂಧ ಹೀಗೆ ಎಲ್ಲದರಲ್ಲಿಯು ಒಳಿತನ್ನು ಕಾಣುವ ದೃಷ್ಟಿಯಿದೆ. ಮಾನವ ಸಹಜವಾದ ದೌರ್ಬಲ್ಯಗಳಿಂದ ಮುಕ್ತವಾದ ಈ ಪಾತ್ರಗಳು ಸಾಮಾಜಿಕ ಜೀವನದ ಒಂದು ಮಗ್ಗಲನ್ನು ಮಾತ್ರ ದರ್ಶಿಸುತ್ತವೆ.

ಮೈಸೂರಿನ ಸುತ್ತೂರು ಮಠದ ಸ್ವಾಮಿಗಳ ಆಶ್ರಯದಲ್ಲಿ ಬೆಳೆದ ಶಿವು ಒಬ್ಬ ಅನಾಥ. ಇವನು ಸಿಂಗನಮನೆಯ ಪಟೇಲರ ಮನೆಗೆ ಹೆಣ್ಣನ್ನು ನೋಡಲು ಬರುವ ಚಿತ್ರಣದೊಂದಿಗೆ ಕಾದಂಬರಿ ಮೊದಲಾಗುತ್ತದೆ. ಶಿವು ಸ್ವಾಮಿಗಳ ಕಡೆಯವನು ಎಂದು ತಿಳಿದು ಪಟೇಲರು ತಮ್ಮ ಮಗಳು ಸಿಂಗಾರಿಯನ್ನು ಅವನಿಗೆ ಕೊಟ್ಟು ವಿವಾಹವನ್ನು ಮಾಡಲು ಉತ್ಸುಕರಾಗುತ್ತಾರೆ. ಆದರೆ ಶಿವು ಅನಾಥನೆಂದು ತಿಳಿದಾಗ ಸ್ವತಃ ಸಮಾಜವಾದಿಗಳಾದ ಪಟೇಲರು ಈ ಸಂಬಂಧವನ್ನು ನಿರಾಕರಿಸುತ್ತಾರೆ. ತನ್ನ ಭಾಷಣಗಳಲ್ಲಿ ವಚನಕಾರರ ಸಮಾನತೆಯ ಸಂದೇಶವನ್ನು ಉಲ್ಲೇಖಿಸುವ, ತನ್ನ ಮನೆಯ ಆಳುಗಳನ್ನು ಸಮಾನವಾಗಿ ಕಾಣುವ ಸಮಾಜವಾದಿ ಮೌಲ್ಯಗಳ ಪಟೇಲರು ಅನಾಥ ಶಿವುವನ್ನು ಒಪ್ಪಿಕೊಳ್ಳಲು ಸಾಧ್ಯವಾಗದ ಟೊಳ್ಳುತನವನ್ನು ನಿರೂಪಿಸುತ್ತದೆ. ತನ್ನ ಸಾಮಾಜಿಕ ಪ್ರತಿಷ್ಠೆಗಾಗಿ ಮೌಲ್ಯಗಳನ್ನೆ ತ್ಯಜಿಸುವ ಪಟೇಲರ ವ್ಯಕ್ತಿತ್ವದ ದ್ವಂದ್ವವು ಪರಿಣಾಮಕಾರಿಯಾಗಿ ನಿರೂಪಿತವಾಗಿದೆ.

ಈ ಕಾದಂಬರಿಯು ಗಾಂಧಿಯವರ ರಾಷ್ಟ್ರೀಯ ಚಳವಳಿ, ಲೋಹಿಯಾರ ಸಮಾಜವಾದಿ ಹೋರಾಟ, ನಂಜುಂಡಸ್ವಾಮಿಯವರ ರೈತ ಚಳುವಳಿಗಳನ್ನು ಪ್ರಾಸಂಗಿಕವಾಗಿ ಉಲ್ಲೇಖಿಸುತ್ತದೆ. ಆದರೆ ಈ ಹೋರಾಟಗಳಿಂದ ಜನಬದುಕಿನಲ್ಲಾದ ಪರಿವರ್ತನೆಯ ಸ್ವರೂಪ ಎಂತಹದ್ದು ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದಿಲ್ಲ. ಹಾಗಾಗಿ ಈ ಹೋರಾಟಗಳು ಉಲ್ಲೇಖಿತ ಹಂತದಲ್ಲಿಯೇ ನಿಲ್ಲುತ್ತವೆ. ಅಲ್ಲಿನ ಜೀವನ ವಿಧಾನದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಇಲ್ಲಿನ ಪಾತ್ರಗಳ ವರ್ತನೆಯ ಹಿಂದೆ ಈ ಹೋರಾಟಗಳ ಪ್ರಭಾವವಿದೆ ಎಂದು ಭಾವಿಸಲಾಗದಂತೆ ಕಾದಂಬರಿಯಲ್ಲಿ ಈ ವರ್ತನೆ ಅವುಗಳ ಸಹಜ ಸ್ವಭಾವವೆಂಬಂತೆ ನಿರೂಪಿತವಾಗಿದೆ.

ಕಾದಂಬರಿಯು ಘಟನೆಗಳ ವಾಸ್ತವಿಕ ನಿರೂಪಣೆಯ ಕಡೆ ಹೆಚ್ಚು ಗಮನಹರಿಸುತ್ತದೆ. ಶಿವು ಸಿಂಗಾರಿಯರ ಮಂತ್ರಮಾಂಗಲ್ಯದ ಸವಿವರ ನಿರೂಪಣೆ, ಬಿ.ಆರ್.ಪ್ರಾಜೆಕ್ಟ್‌ನಲ್ಲಿ ನಡೆದ ವಚನ ಸಾಹಿತ್ಯದ ವಿಚಾರಸಂಕಿರಣದ ಭಾಷಣಗಳ ಯಥಾವತ್ತಾದ ನಿರೂಪಣೆಯನ್ನು ಕಾಣುತ್ತೇವೆ. ಇದೆಲ್ಲೂ ಕಲಾತ್ಮಕವಾಗಿ ಅಭಿವ್ಯಕ್ತವಾಗದೆ ಇವೆಲ್ಲ ಒಣ ವರದಿಗಳಾಗಿ ನಿಂತು ಕಾದಂಬರಿಯ ಬಂಧವನ್ನು ಸಡಿಲಗೊಳಿಸುತ್ತವೆ. ಈ ಕಡೆ ಕಾದಂಬರಿಕಾರರು ಗಮನಹರಿಸುವುದಿಲ್ಲ. .


ಮಲೆನಾಡಿನ ಪ್ರಾಕೃತಿಕ ಸಂಪತ್ತನ್ನು ಚಿತ್ರಿಸುವಾಗ ಕಾದಂಬರಿಯು ತೋರಿಸುವ ತನ್ಮಯತೆಯನ್ನು, ಘಟನೆಗಳ ದೃಶ್ಯಾತ್ಮಕ ನಿರೂಪಣೆಯಲ್ಲಿ ತೋರುವುದಿಲ್ಲ. ಹಾಗಾಗಿ ಘಟನೆಗಳ ತೀವ್ರವಾದ ಶೋಧನೆ ಸಾಧ್ಯವಾಗದೆ ಅವು ಸರಳೀಕೃತವಾಗಿ ಅಭಿವ್ಯಕ್ತವಾಗಿವೆ. ಕಾದಂಬರಿಕಾರರು ವರ್ತಮಾನದ ಕಥನವನ್ನು ಕಲಾತ್ಮಕತೆಗೆ ಒಗ್ಗಿಸುವ ಕುರಿತು ಯೋಚಿಸಿದರೆ ಉತ್ತಮವಾದ ಕಾದಂಬರಿಯನ್ನು ರಚಿಸಬಲ್ಲರು.

-ಸುಧಾಕರ ದೇವಾಡಿಗ ಬಿ.

ಕನ್ನಡ ಚಿತ್ರರಂಗದ ಹಿರಿಯ ನಟ ರಾಜೇಶ್ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.-ಸಂ

ಪು: ಅಂಗೈ ಅಗಲದ ಆಕಾಶ – ಸ್ಮೃತಿ ಚಿತ್ರಗಳು ಲೇ: ಎಲ್. ಸಿ. ಸುಮಿತ್ರಾ
ಪ್ರ: ಸಂಕಥನ, ಉದಯಗಿರಿ, ಮಂಡ್ಯ-೫೭೧೪೦೧ ಪು: ೧೪೪

ಮಲೆನಾಡಿನ ಕೆಲ ಆತ್ಮೀಯ ಚಿತ್ರಗಳು



ಲೇಖಕಿ ಈ ಪುಸ್ತಕದಲ್ಲಿ ತಮ್ಮ ಭಾವಕೋಶದಲ್ಲಿ ಹಸಿರಾಗಿ ಉಳಿದಿದ್ದ ಬಾಲ್ಯದ ದಿನಗಳ ಸ್ಮೃತಿ ಚಿತ್ರಗಳನ್ನು, ಆರಿಸಿ ತೆಗೆದು ಪ್ರಕಟಿಸಿದ್ದಾರೆ.

ಹದಿನೇಳು ಸಣ್ಣ-ಸಣ್ಣ ಪ್ರಬಂಧಗಳ ಈ ಸಂಕಲನದ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ತೀರ್ಥಹಳ್ಳಿಯ ಸುತ್ತಮುತ್ತಲಿನ ಪರಿಸರ, ಎತ್ತರೆತ್ತರದ ಹಸಿರು ಮರಗಳ ಆವರಣಗಳು, ಜುಳುಜುಳು ಹರಿಯುವ ನದಿಯ ಮೇಲೊಂದು ಕಾಲುಸಂಕ, ಮನೆಯ ಹಿಂದೆ ಮುಂದೆ ಗದ್ದೆ ತೋಟಗಳು, ಅದನ್ನು ಕಾಯುತ್ತಿರುವ ಕೋಟೆಯಂತಹ ಕಾಡು ಗುಡ್ಡಗಳು, ಹತ್ತಿರದಲ್ಲೊಂದು ಪ್ರೈಮರಿ ಸ್ಕೂಲ್, ಅನತಿ ದೂರದಲ್ಲಿ ಮಿಡ್ಲ್ ಸ್ಕೂಲ್ ಮತ್ತು ಹೈಸ್ಕೂಲ್, ಶಾಲೆಯಲ್ಲಿ ಹಾಡು, ಡ್ಯಾನ್ಸು, ಸ್ವಾತಂತ್ರ್ಯ ದಿನಾಚರಣೆ, ದಿನಪತ್ರಿಕೆಗಳು, ನಿಯತಕಾಲಿಕೆಗಳ ಧಾರಾವಾಹಿಗಳನ್ನು ಎಲ್ಲರಿಗಿಂತ ಮೊದಲು ಓದುವ ಆತುರ-ಕಾತರ, ಮಲೆನಾಡಿನ ಪಕ್ಷಿ-ಕೀಟಗಳ ಜೇಂಗುಡುವ ಸಂಗೀತ ಧಾರೆಯನ್ನು, ದಿನಕ್ಕೊಂದು ಬಾರಿ ಹಾರ್ನ್‌ನೊಂದಿಗೆ ಸೀಳಿಕೊಂಡು ಓಡುವ ಶಂಕರ್ ಬಸ್ಸು, ಯಾವುದೋ ಕಾರಣಕ್ಕೆ ಶಾಲಾಮಾಸ್ತರ್‌ರಿಂದ ಆದ ಅಪಮಾನ ಅಥವಾ ಪ್ರೇರಣೆ- ಇವೆಲ್ಲಾ ಐದು ದಶಕಗಳ ಹಿಂದೆ ಮಲೆನಾಡಿನ ಪರಿಸರದಲ್ಲಿ ಬೆಳೆದವರ ಬದುಕಿನ ಅನುಭವ ಚಿತ್ರಣ. ಹೀಗೆ ನಿರೂಪಿಸಿದಂತಹ ಬದುಕಿನ ವಿನ್ಯಾಸ ಈಗ ಬದಲಾಗಿರುವುದನ್ನೂ ಲೇಖಕಿ ಗುರುತಿಸಿದ್ದಾರೆ.

ಮಲೆನಾಡಿನಲ್ಲಿ ಹುಟ್ಟಿ ಬೆಳೆದ ಹುಡುಗಿಯರ ಸಾಮಾನ್ಯ ಅನುಭವಗಳನ್ನೇ ಒಂದೇ ಗುಕ್ಕಿನಲ್ಲಿ ಓದಿ ಮುಗಿಸಲು ಸಾಧ್ಯವಾಗುವಂತೆ ಸರಳವಾಗಿ ಪದಗಳನ್ನು ನೇಯ್ದು ಕಟ್ಟಿದ್ದಾರೆ. ಲೇಖಕಿಯ ಬಾಲ್ಯದ ನೆನಪಿನಂಗಳದಲ್ಲಿ ಚೆಲ್ಲಿದ್ದ ಬಣ್ಣಬಣ್ಣದ ವಿಧ-ವಿಧ ವಿನ್ಯಾಸದ ಲಂಗಗಳು, ಹಾಡು, ಹೂದೋಟ, ಒಂದೇ ಗಿಡದಲ್ಲಿ ಕೆಂಪು ಮತ್ತು ಗಂಧದ ಬಣ್ಣದ ದಾಸವಾಳ ಹೂವು, ಕನಕಾಂಬರ, ಕಾಟುಗುಲಾಬಿ ಹೂವು, ಸುರಗೀಹೂವು, ತಾರೆಕಾಯಿ, ಧೂಪದಕಾಯಿ, ಪೇರಳೆ, ಪನ್ನೇರಳೆ, ಹಲಸಿನಹಣ್ಣು, ಅಂಜೂರದ ಹಣ್ಣು, ಕಾಡುಮಾವಿನ ಹಣ್ಣು ಇವೆಲ್ಲವೂ ಎಲ್ಲ ಮಲೆನಾಡಿಗರ ಜೀವನದೊಂದಿಗೆ ಮಿಳಿತವಾಗಿದೆ.

ವಿಸ್ತಾರವಾಗಿ ಬರೆಯಬಹುದಾಗಿದ್ದ ಕೆಲವು ಪ್ರಬಂಧಗಳು ಮೊಟಕುಗೊಳಿಸಿದಂತೆ ಆಗಿವೆ. ವಿವಿಧ ವರ್ಣನೆಗಳಿರುವ ಚಿತ್ರಣಗಳ ಕೊಂಬೆಗಳನ್ನು ಅಲ್ಲಲ್ಲಿ ಕತ್ತರಿಸಿ ಹಾಕಿದಂತಿದೆ. ಇದು ಫೇಸ್‌ಬುಕ್‌ಗಾಗಿ ಬರೆದ ಕಿರುಬರಹಗಳನ್ನು ಸಂಕಲನಮಾಡಿ ಪುಸ್ತಕ ಮಾಡಿರುವುದರ ಮಿತಿಯೂ ಆಗಿರಬಹುದು.

ಅತಿಭೋಗದ ರೋಗ ಹಿಡಿದಿರುವ ನಮಗೆ, ಕಸ ವಿಲೇವಾರಿಯ ಕಷ್ಟವನ್ನು ವಿವರಿಸಿ, ಈಗಿನ ಕಾಲದಲ್ಲಿ 'ಈ' ಕಸ ವಿಲೇವಾರಿಯ ಜೊತೆಗೆ ಬೌದ್ಧಿಕ ಕಸವನ್ನು ಬೇರ್ಪಡಿಸಿ ವಿಲೇ ಮಾಡಿ, ಮಾಲಿನ್ಯರಹಿತವಾಗಿಸುವುದು ಹೇಗೆ? ಎಂದು ಲೇಖಕಿ ಆತಂಕಿತರಾಗಿದ್ದಾರೆ. ಈಗ ಹಳ್ಳಿ ಹಳ್ಳಿಯಲ್ಲಿಯೂ ಪ್ಲಾಸ್ಟಿಕ್ ಕವರ್‌ಗಳ ಗುಡ್ಡೆ ಕಣ್ಣನ್ನು ಕುಕ್ಕುತ್ತವೆ ಅಲ್ಲದೆ ಅವು ಆಗಾಗ ಗಾಳಿಯಲ್ಲಿ ಹಾರಾಡುತ್ತಿರುತ್ತವೆ. ಲೇಖಕಿಯ ಬಾಲ್ಯದ ಕಾಲದಲ್ಲಿದ್ದ, ವರ್ಷಕ್ಕೊಮ್ಮೆ ಕಸದ ಗುಡ್ಡೆಗೆ ಬೆಂಕಿಹಾಕಿ, ಅದರ ಕರಿಯ ಮೇಲೆ ತರಕಾರಿ ಬೆಳೆಯುವ ಪದ್ಧತಿಯೂ ಈಗ ಕಣ್ಮರೆಯಾಗಿದೆ. 'ಫೋನ್ ಪುರಾಣ'ವೆಂಬ ಪ್ರಬಂಧದಲ್ಲಿ ಕೇವಲ ದಾಂಪತ್ಯ ಸಮಸ್ಯೆಗಳೇ ಇವೆ. ತನ್ನ ಮನಸ್ಸಿನಿಚ್ಛೆಯಂತೆ ಬದುಕಲಾರದೆ ದಾಂಪತ್ಯದ ಕಗ್ಗಂಟಿನಲ್ಲಿ ಸಿಲುಕಿರುವ ಮಹಿಳೆಯರ ಕಥಾನಕಗಳಿವೆ.

ರಹಮತ್ ತರೀಕೆರೆಯವರು ಮುನ್ನುಡಿಯಲ್ಲಿ ನುಡಿದಂತೆ, ಕೆಲವು ಲಲಿತಪ್ರಬಂಧಗಳು, ಉತ್ತಮ ಪ್ರಬಂಧಗಳಾಗಿ ರೂಪುಗೊಳ್ಳುವ ಸಾಧ್ಯತೆಯ ಹತ್ತಿರ-ಹತ್ತಿರ ಬಂದು ಸ್ವಲ್ಪದರಲ್ಲಿ ಜಾರಿಹೋಗುತ್ತವೆ.


ಕೆಲವು ಪ್ರಬಂಧಗಳಲ್ಲಿ ಲೇಖಕಿಯ ಸಮಕಾಲೀನರಿಗೆ ಆಪ್ತವಾಗುವ ವಿವರಗಳಿವೆ. ಉದಾಹರಣೆಗೆ, ಲಂಗದ ಕಥೆ, ಪುಂಡಿಕೋಲಿನ ದೀಪಾವಳಿ, ಗಾಡಿಯ ಪ್ರಯಾಣ. 'ಅಂಡದೊಳಗೆ ಬ್ರಹ್ಮಾಂಡ' ಪ್ರಬಂಧಗಳಲ್ಲಿ, ಲೇಖಕಿಯ ನೆರೆಮನೆಯ ಹುಡುಗ ಶಾಲೆಗೆ ಚಕ್ಕರ್ ಹಾಕಿ, ಸಗಣಿ ಮೆತ್ತಿ ಮೊಟ್ಟೆ ಬೇಯಿಸಿ ತಿನ್ನುವ ಉಪಾಯವು ಗಮ್ಮತ್ತಾಗಿದೆ.

ಆಡುಭಾಷೆಯ ನುಡಿಗಟ್ಟುಗಳನ್ನೇ ಬಳಸಿ ಬರೆದ ಲಘುದಾಟಿಯ ಬರಹಗಳನ್ನೊಳಗೊಂಡ ಈ ಪುಸ್ತಕವು ಮನಸ್ಸಿಗೆ ಮುದಕೊಡುವುದಲ್ಲದೆ, ಆ ಕಾಲದ ರಭಸವಿಲ್ಲದ-ಒತ್ತಡರಹಿತ ಹಳ್ಳಿಯ ಬದುಕಿನ ಬಗ್ಗೆ ಈಗಿನ ಪೀಳಿಗೆಯವರಿಗೆ ಓದುವ ಅವಕಾಶವನ್ನು ಒದಗಿಸುತ್ತದೆ. ಮಲೆನಾಡ ಜೀವನಚಿತ್ರಣವನ್ನು ಲೇಖಕಿಯು ತಮ್ಮ ಅನುಭವಗಳನ್ನು ವಿಸ್ತರಿಸಿ ಇನ್ನಷ್ಟು ಸಾಂದ್ರವಾಗಿ ದಾಖಲಿಸಿದ್ದರೆ ಪುಸ್ತಕದ ಮೌಲ್ಯ ಹೆಚ್ಚಾಗುತ್ತಿತ್ತು.

–ಶ್ರೀದೇವಿ ಕೆ.

ಪು :ಪಂಡಿತ್ ರಾಜೀವ ತಾರಾನಾಥ (ಸರೋದ್ ಸ್ವರಯಾನ) ಸಂ: **ಗಣೇಶ** ಅಮೀನಗಡ, ರಘುಪತಿ ತಾಮ್ಹನ್‌ಕರ್ ಪ್ರ: ಕವಿತಾ ಪ್ರಕಾಶನ, ಮೈಸೂರು(೯೮೮೦೧೦೫೫೨೬) ಪು: ೧೮೮ ಬೆ: **ರೂ.೨೭೫/-**

ವ್ಯಕ್ತಿಘನತೆಗೆ ಒತ್ತುಕೊಡುವ ಚಿಂತನ-ಮಂಥನ



ಪಂಡಿತ್ ರಾಜೀವ ತಾರಾನಾಥ ಎಂದೊಡನೆ ಕಣ್ಣೆದುರು ಬರುವುದು ಕೇವಲ ಒಬ್ಬ ಸರೋದ್ ವಾದಕರಾಗಿರದೆ ಸಾಹಿತ್ಯ ಮತ್ತು ಸಂಗೀತದ ಒಳಹೊರಗನ್ನು ಅರೆದು ಕುಡಿದ ನಿಖರ ಮತ್ತು ನಿರ್ಭಿಡೆಯಿಂದ ಮಾತಾಡಬಲ್ಲ ನುರಿತ ವಾಗ್ಮಿ. ಗಣೇಶ್ ಅಮೀನಗಡ ಮತ್ತು ರಘುಪತಿ ತಾಮ್ಹನಕರ್ ಅವರು ಸಂಪಾದಿಸಿರುವ 'ಸರೋದ್ ಸ್ವರಯಾನ' ಕೃತಿಯಲ್ಲಿ ರಾಜೀವ್ ತಾರಾನಾಥರ ಕುರಿತು ವಿವಿಧ ಲೇಖಕರು ಕಲಾವಿದರುಗಳ ಲೇಖನ ಮತ್ತು ಸಂದರ್ಶನಗಳನ್ನು ಎರಡು ವಿಭಾಗವಾಗಿ ಕೊಡಲಾಗಿದೆ.

ರಾಜೀವ್ ತಾರಾನಾಥರ ಬದುಕು ಮತ್ತು ಅನುಭವಗಳ ಹರವು ದೊಡ್ಡದು. ಅವರ ತಂದೆ ತಾರಾನಾಥ ಸ್ವತಹ ವಿದ್ವಾಂಸರಾಗಿದ್ದು ಆ ಕಾಲಕ್ಕೇ ಅವರು ಅಂತರಜಾತಿ ವಿವಾಹಿತರಾಗಿ (ತಾಳಿಯನ್ನೂ ಕಟ್ಟದೆ) ಕ್ರಾಂತಿಕಾರಿಯಾಗಿ ಬದುಕಿದ್ದರಿಂದ ಸಾಮಾನ್ಯ ಮನುಷ್ಯರಿಗೆ ಎದುರಾಗುವ ಜಾತಿಯ ಮಿತಿಗಳು ರಾಜೀವ ಅವರಿಗೆ ತೊಡಕಾಗಲಿಲ್ಲ. ತಂದೆಯ ಭಾಷೆ ಕೊಂಕಣಿ, ತಾಯಿಯ ಭಾಷೆ ತಮಿಳು, ಉತ್ತರ ಕರ್ನಾಟಕದ ಜವಾರಿ ಕನ್ನಡದ ಜೊತೆಗೆ ಕಲಿತದ್ದು ಉರ್ದು ಮತ್ತು ಇಂಗ್ಲೀಷ್. ಹೀಗೆ ಎಲ್ಲ ಎಲ್ಲೆಗಳನ್ನು ಮೀರಿದವರಾಗಿ ಜಾತಿ, ಧರ್ಮ, ಭಾಷೆಯ ಕುರಿತ ಸಂಕುಚಿತ ವಿಚಾರಗಳು ಸಹಜವಾಗಿ ಅವರತ್ತ ಸುಳಿಯಲಿಲ್ಲ.

೫೦ರ ಇಳಿವಯಸ್ಸಿನಲ್ಲಿ ಪಂಡಿತ್ ರವಿಶಂಕರ್ ಅವರ ಅಣತಿಯಂತೆ ಇಂಗ್ಲೀಷ್ ಉಪನ್ಯಾಸಕ ವೃತ್ತಿಯನ್ನು ತೊರೆದು ಸಂಗೀತಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡದ್ದು, ಅಲಿ ಅಕ್ಬರ್ ಖಾನ್‌ರನ್ನು ಗುರುವಾಗಿ ಸ್ವೀಕರಿಸಿದ್ದು, ಬೆರಳುಗಳಿಂದಲೆ ನಾದ ಹೊರಡಿಸಬೇಕಾದ ಸರೋದನ್ನು ನಿರಂತರ ಸಾಧನೆ, ಪರಿಶ್ರಮದಿಂದ ಒಲಿಸಿಕೊಂಡು ಅಂತರರಾಷ್ಟ್ರೀಯ ಕಲಾವಿದರಾಗಿ ಮನ್ನಣೆ ಪಡೆದ ವಿವರಗಳು ಸುಮಂಗಲಾ, ರಹಮತ್ ತರೀಕೆರೆ, ಚಂದ್ರಶೇಖರ ಕಂಬಾರ, ಮೊದಲಾದವರ ಲೇಖನಗಳಲ್ಲಿವೆ. ಇದಕ್ಕಿಂತ ಹೆಚ್ಚಾಗಿ ವ್ಯಕ್ತಿಯ ಘನತೆ ಗೌರವಗಳನ್ನು ತೋರುವ ಚಿಂತನೆಗಳು ಕಾಸರವಳ್ಳಿ, ಶ್ರೀದೇವಿ ಕಳಸದ, ಜಯಂತ ಕಾಯ್ಕಿಣಿ, ಜಿ.ಪಿ. ಬಸವರಾಜು, ಎಸ್. ಮಂಜುನಾಥ ಮುಂತಾದವರ ಸಂದರ್ಶನಗಳಲ್ಲಿ ವ್ಯಕ್ತವಾಗಿವೆ.

ರಾಜೀವ ತಾರಾನಾಥರು 'ಸಂಸ್ಕಾರ', 'ಪಲ್ಲವಿ' ಯಂತಹ ಸದಭಿರುಚಿಯ ಚಿತ್ರಗಳಿಗೆ ಸಂಗೀತ ನೀಡಿದವರು. 'ಸಿನೆಮಾದಲ್ಲಿ ಸಂಗೀತ ಅಪ್ಲೈಡ್ ಫಾರ್ಮ್‌ನಲ್ಲಿರಬೇಕೇ ಹೊರತು ಪರಿಪೂರ್ಣ ರೂಪದಲ್ಲಿ ಅಲ್ಲ, ಇಲ್ಲವಾದಲ್ಲಿ ಚಲನಚಿತ್ರಕ್ಕೆ ಹೊಂದಿಕೊಳ್ಳುವದಿಲ್ಲ' ಎಂಬ ಮಂಥನ ಗೆಳೆಯರ ಪ್ರಶ್ನೆಗೆ, 'ಹೊಂದೋದು' ಎಂದರೆ ಏನು ಎಂದು ಮರು ಪ್ರಶ್ನೆ ಹಾಕುತ್ತಾ 'ದೃಶ್ಯ ಹೇಳ್ತಾ ಇರೋದಕ್ಕೆ ಸಂಗೀತ ಒತ್ತು ಕೊಡುವುದು (underline) ಒಂದು ರೀತಿಯಾದರೆ ದೃಶ್ಯದಲ್ಲಿ ವ್ಯಕ್ತವಾಗದೆ ಉಳಿದಿರುವ ಕೆಲವು ಅಂಶಗಳನ್ನು ಹೊರತರುವ counter point music ಇನ್ನೊಂದು ರೀತಿಯದು' ಎನ್ನುವ ಮಾತುಗಳು ಗಮನಾರ್ಹ.

ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ಜಾನಪದ ಸಂಗೀತಗಳಲ್ಲಿನ ಸಾಮರಸ್ಯಕ್ಕೆ ಅವೆರಡೂ ಊಳಿಗಮಾನ್ಯ ಪರಂಪರೆಯ ಸೃಷ್ಟಿ ಎನ್ನಬಹುದೆ ಎಂಬ ಪ್ರಶ್ನೆಗೆ 'ನಮಗೆ feudal system ಬೇಡ, ಯಾರು ಬೇಕಂತಾರೆ? ಆದರೆ ಅದನ್ನು ತಿರಸ್ಕರಿಸುತ್ತ ನಾವು ಶೇಕ್ಸ್‌ಪಿಯರ್, ಕಾಳಿದಾಸ, ಗ್ರೀಕ್ ನಾಟಕಕಾರರನ್ನೆಲ್ಲ ತಿರಸ್ಕರಿಸಕ್ಕಾಗೊಲ್ಲ. ಕಲಾಪ್ರಪಂಚದಲ್ಲಿ ಬಹಳಷ್ಟು ಕಲಾಕಾರರು feudal system ನಿಂದಲೇ ಬಂದವರು' ಎಂಬಲ್ಲಿ ಅವರ ಚಿಂತನೆಯ ಸ್ಪಷ್ಟತೆಯನ್ನು ಗುರುತಿಸಬಹುದು.

ಈ ಕಾಲದಲ್ಲೂ ಗುರುಕುಲ ಪದ್ಧತಿಯನ್ನೇ ನೆಚ್ಚಿಕೊಂಡು ಸಾಧನೆ ಮಾಡಬೇಕೆ ಎಂಬ ಶ್ರೀದೇವಿ ಕಳಸದ ಅವರ ಪ್ರಶ್ನೆಗೆ 'ಯಾವ ಕಾಲದಲ್ಲೂ ಅಷ್ಟೇ' ಎನ್ನುತ್ತಾರೆ. ಸಂಗೀತ ಸಾಧನೆಯನ್ನು ಯಾರೂ ಸುಪ್ಪತ್ತಿಗೆಯ ಮೇಲೆ ಕುಳಿತು ಕಲಿತಿಲ್ಲ. ಸಾಧನೆ ಮಾಡಿದ ಮೇಲೂ ಕೆಲವೊಮ್ಮೆ ಹೂವಿನ ಹಾರ ಕೆಲವೊಮ್ಮೆ ತಿಗಣಿ ಹುಳು. ಬೆಂಗಳೂರಿನ ಗಾಯನ ಸಮಾಜದ ಕಾರ್ಯಕ್ರಮವೊಂದರಲ್ಲಿ ಹನ್ನೊಂದು ಸಲ ತಂತಿ ಹರಿದುಹೋಗಿ ಸಭಿಕರಲ್ಲಿ ಕ್ಷಮೆಕೋರಿ ಹೊರಟಿದ್ದನ್ನು ಸ್ಮರಿಸುತ್ತಾರೆ.

ಇಲ್ಲಿನ ೩೧ ಲೇಖನಗಳಲ್ಲಿ ೧೦ ಲೇಖನಗಳು ಸುಮಂಗಲ ಅವರದ್ದಿವೆ. ಸಂಗೀತ ಕುರಿತು ಕನ್ನಡದಲ್ಲಿ ಬಂದಿರುವ ಅಪರೂಪದ ಸುಂದರ ಪುಸ್ತಕ.

–ಎನ್.ಎಮ್. ಕುಲಕರ್ಣಿ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಲೋಹಿಯಾ ಜನ್ಮದಿನದ ಹಾರ್ದಿಕ ಶುಭಾಶಯಗಳು




ಮನೋರಮಾ ನಿಸಾರ್ ಅಹಮದ್
ಮತ್ತು ಕುಟುಂಬ
ಶಿವಮೊಗ್ಗ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಲೋಹಿಯಾ ಜನ್ಮದಿನದ ಹಾರ್ದಿಕ ಶುಭಾಶಯಗಳು



ಅಬೀದಾ ಬೇಗಮ್
ಮತ್ತು ಕುಟುಂಬ
ಬೆಂಗಳೂರು

ತಿಂಗಳ ಕೊನೆಯ ಸಾಲುಗಳು



ನಾನು ಎಂಬುದರ ಉದಯದಿಂದ ದೇಹಭಾವ ಉಂಟಾಗಿ ಜಗತ್ತು ತನ್ನಿಂದ (ಅಂದರೆ ದೇಹದಿಂದ) ಹೊರಗಿದ್ದಂತೆ, ಬೇರೆಯಾಗಿ ಕಾಣುವುದು. ಇದೇ ಜಗತ್ತಿನ ಎಲ್ಲ ಸಮಸ್ಯೆಗಳ ಮೂಲ.

-ಶ್ರೀರಮಣ ಮಹರ್ಷಿ

ಶುಭಾಶಯಗಳೊಂದಿಗೆ,
ಎ.ಎಂ. ಶಿವಸ್ವಾಮಿ
ಕುವೆಂಪುನಗರ
ಮೈಸೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2022-24

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)